ತೆಗೆದುಕೊಂಡು ಮತ್ತೆ ರಿವ್ಯೂ ಮಾಡಿ ಇದನ್ನು ನಿಲುವಳಿ ಸೂಚನೆ ಅಡಿಯಲ್ಲಿ ದಯವಿಟ್ಟು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇವೆ.

ಅಧ್ಯಕ್ಷರು : ತಾವು ಹೇಳತಕ್ಕಂಥ ಇಂಟ್ರೆಸ್ಟ್‌ನಲ್ಲಿಯೇ ಅವರು ಏನು ಬ್ರೀಫ್ ಮಾಡುತ್ತಾರೆಯೋ ಅದು ಮುಖ್ಯವೆಂದು ನನಗೆ ಅರ್ಥವಾಗಿದೆ. ಈ ವಿಷಯದ ಬಗ್ಗೆ ನೇರವಾಗಿ ಮಾತನಾಡುವುದಕ್ಕೆ ಅವಕಾಶ ಕೊಡುವುದರಿಂದ ನಿಮಗೆ ಹೆಚ್ಚಿನ ಸಮಯ ಸಿಗುತ್ತದೆ. ಇದರ ಬಗ್ಗೆ ಆಲೋಚನೆ ಮಾಡಬೇಕು. ಈಗ ಮಾನ್ಯ ಜಗದೀಶ್ ಶೆಟ್ಟರ್‌ರವರು ತಮ್ಮ ಮಾತನ್ನು ಪ್ರಾರಂಭ ಮಾಡಿ.

ಶ್ರೀ ಸಿ.ಎಸ್. ನಾಡಗೌಡ ಅಪ್ಪಾಜಿ : ಮಾನ್ಯ ಅಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಎಷ್ಟು ಕಾಲಾವಕಾಶ ಬೇಕಾದರೂ ಕೊಡಿ. ಮೂರು ದಿವಸಗಳು ಚರ್ಚೆ ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ. ಒಂದು ಅಥವಾ ಎರಡು ಗಂಟೆಯೊಳಗೆ ಬಹಳ ತರಾತುರಿಯಲ್ಲಿ ಚರ್ಚೆ ಮಾಡುವುದಕ್ಕೆ ನಾವು ತಯಾರಿಲ್ಲ. ಇದು ಬಹಳ ಸೂಕ್ಷ್ಮವಾಗಿರತಕ್ಕಂಥ ವಿಷಯವಾಗಿರುವುದರಿಂದ ಇದರಲ್ಲಿರತಕ್ಕಂಥ ಸತ್ಯಾಂಶ ಏನಿದೆ ಎನ್ನತಕ್ಕಂಥದ್ದು ಬೆಳಕಿಗೆ ಬರಬೇಕು ಎಂಬುದು ಸರ್ಕಾರದ ಇಚ್ಛೆ ಕೂಡ ಇದೆ. ಆದರೆ, ನಿಯಮ 69ಕ್ಕೂ ಮತ್ತು ನಿಲುವಳಿ ಸೂಚನೆಯಡಿಯಲ್ಲಿ ಚರ್ಚೆ ಮಾಡುವುದಕ್ಕೆ ಇರತಕ್ಕಂಥ ವ್ಯತ್ಯಾಸ ಏನೆಂದರೆ ಇದು ಹೆಲ್ತಿ ಪಾರ್ಟಿಸಿಪೇಶನ್ ಆಗಬೇಕೆಂಬ ಉದ್ದೇಶದಿಂದ ತಾವು ಈಗಾಗಲೇ ಏನೊಂದು ರೂಲಿಂಗ್ ಕೊಟ್ಟಿದ್ದೀರಿ. ಅದನ್ನು ನಾವು ಸ್ವಾಗತ ಮಾಡುತ್ತೇವೆ.

Mr. Speaker : No. There is no further revision of this ruling

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ತಾವು ಅನುಮತಿ ಕೊಟ್ಟಿದ್ದೀರಿ. ಈ ಚರ್ಚೆಯಲ್ಲಿ ಆಡಳಿತ ಪಕ್ಷದ ಸದಸ್ಯರೂ ಕೂಡ ಭಾಗವಹಿಸುವುದಕ್ಕೆ ತಾವು ದಯವಿಟ್ಟು ಅವಕಾಶ ಕೊಡಬೇಕು.

ಅಧ್ಯಕ್ಷರು : ಸರ್ಕಾರವನ್ನು ಕೇಳಿಯೇ ನನ್ನ ತೀರ್ಮಾನವನ್ನು ಕೊಟ್ಟಿದ್ದೇನೆ.

2) ನಿಯಮ 69ರ ಮೇರೆಗೆ ಚರ್ಚೆ

ವಿಷಯ : ರಾಜ್ಯ ಹಾಗೂ ದೇಶದಲ್ಲಿ ವ್ಯಾಪಕವಾಗಿ ಹರಡಿಕೊಂಡಿರುವ ನಕಲಿ ಛಾಪಾಕಾಗದ ಹಗರಣದ ಬಗ್ಗೆ ಚರ್ಚೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಹೇಳಿದ ಪ್ರಕಾರ ಇದೊಂದು ಅಸಮಾನ್ಯವಾದಂಥ ಪ್ರಕರಣವಾಗಿದೆ. ಬಹುಶ: ನಮ್ಮ ರಾಷ್ಟ್ರದ ಮತ್ತು ರಾಜ್ಯದ ಇತಿಹಾಸವನ್ನು ತೆಗೆದು ನೋಡಿದಾಗ ಈ ರೀತಿಯಾದಂಥ ಅಂದರೆ, ಸಾವಿರಾರು ಕೋಟಿ ರೂಪಾಯಿಗಳ ಬೃಹತ್ ಭ್ರಷ್ಟಾಚಾರದ ಹಗರಣ ಇತಿಹಾಸದಲ್ಲಿಯೇ ಮೊಟ್ಟಮೊದಲು ಎಂದು ಹೇಳಬೇಕಾಗುತ್ತದೆ. ಇದರ ಮೂಲ ಪ್ರಾರಂಭವಾಗಿದ್ದೇ ಕರ್ನಾಟಕದಲ್ಲಿ ಇದರ ಮುಖ್ಯ ಅಪರಾಧಿಯಾದ ಕರೀಂಲಾಲ್ ಈ ಒಂದು ವ್ಯವಹಾರವನ್ನು ಕರ್ನಾಟಕದ ಮೂಲದಿಂದಲೇ ಪ್ರಾರಂಭ ಮಾಡಿದ್ದಾನೆ. ಮಹಾರಾಷ್ಟ್ರ ಇರಬಹುದು, ಇನ್ನಿತರ ರಾಜ್ಯಗಳಲ್ಲಿ ಸಹಿತ ಇದರ ಬೇರುಗಳು ಮುಟ್ಟಿರುವುದನ್ನು ನಾವು ನೋಡುತ್ತಿದ್ದೇವೆ, ಕಳೆದ ಎರಡು ವರ್ಷಗಳಿಂದ ಭಾರತೀಯ ಜನತಾ ಪಾರ್ಟಿ ವಿಧಾನಸಭೆಯಲ್ಲಿ ಇದರ ಬಗ್ಗೆ ಸಾಕಷ್ಟು ವಿಷಯಗಳನ್ನು ನಾವು ಬೆಳಕಿಗೆ ತೆಗೆದುಕೊಂಡು ಬಂದಿರುತ್ತೇವೆ. ಇದರ ಬಗ್ಗೆ

ಚರ್ಚೆಯಾಗಬೇಕು, ಇದರ ಬಗ್ಗೆ ತನಿಖೆಯಾಗಬೇಕು ಮತ್ತು ಅದರಲ್ಲಿ ಯಾರೇ ದೊಡ್ಡ ವ್ಯಕ್ತಿಗಳು ಈ ಹಗರಣದಲ್ಲಿ ಇರಲಿ, ಅವರ ಮೇಲೆ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವಂಥ ಹೋರಾಟ ಮತ್ತು ಒತ್ತಡವನ್ನು ಭಾರತೀಯ ಜನತಾ ಪಾರ್ಟಿ ಈ ಒಂದು ಸದನದಲ್ಲಿ ಮಾಡಿಕೊಂಡು ಬಂದಿದೆ. ಆದರೆ ಆ ಎಲ್ಲಾ ಸಂದರ್ಭಗಳಲ್ಲಿ ಸರ್ಕಾರ ಹೇಳಿತು, ಮಾನ್ಯ ಮುಖ್ಯಮಂತ್ರಿಗಳು ಅಥವಾ ಮಾನ್ಯ ಗೃಹ ಸಚಿವರು ಇರಬಹುದು, ಇಲ್ಲಿ ಯಾರೇ ದೊಡ್ಡ ವ್ಯಕ್ತಿಗಳು, ಹಿರಿಯ ಪೋಲೀಸ್ ಅಧಿಕಾರಿಗಳು, ಮಂತ್ರಿಗಳು ಇದರಲ್ಲಿ ಯಾರೂ ಶ್ಯಾಮೀಲಿರುವುದಿಲ್ಲ, ಇದನ್ನು ನಮ್ಮ ಪೋಲೀಸ್‌ರು ತನಿಖೆ ಮಾಡುತ್ತಾರೆ. ಇದನ್ನು ನಾವು ಬೇರೆ ಯಾವ ತನಿಖಾ ಸಂಸ್ಥೆಗೆ ಕೊಡುವುದಿಲ್ಲ, ನಮ್ಮ ಸರ್ಕಾರದ ಯಾವ ವ್ಯಕ್ತಿಗಳದ್ದು ಇದರಲ್ಲಿ ಪಾಲು ಇಲ್ಲ ಎಂದು ಪದೇ ಪದೇ ಸರ್ಕಾರ ಅದನ್ನೇ ಹೇಳಿಕೊಂಡು ಬಂದಿದೆ . ಆದರೆ ಇವತ್ತು ಹೊಸ ಹೊಸ ವಿಷಯಗಳು ಹೊರಗೆ ಬರುತ್ತಿವೆ. ಒಂದೊಂದು ವಿಷಯಗಳು ಹೊರಗೆ ಬರುತ್ತಿವೆ. ಒಬ್ಬೊಬ್ಬ ವ್ಯಕ್ತಿಯ ಚರಿತ್ರೆ ಇವತ್ತು ಹೊರಗೆ ಬರುತ್ತಿದೆ. ಏಕೆಂದರೆ ಇವತ್ತು ಸಾರ್ವಜನಿಕ ರಂಗದಲ್ಲಿ ಈ ಭ್ರಷ್ಟಾಚಾರದ ಬಗ್ಗೆ, ಈ ಭ್ರಷ್ಟ ವ್ಯವಸ್ಥೆಯ ಬಗ್ಗೆ ಎಷ್ಟೊಂದು ಆಕ್ರೋಶ ಇದೆ, ಎನ್ನುವಂಥದ್ದು ಇವತ್ತು ಬಹಿರಂಗವಾಗುತ್ತಿದೆ. ಒಂದು ಉದಾಹರಣೆಯನ್ನು ತೆಗೆದುಕೊಳ್ಳಿ. ಶ್ರೀ ಗಿರೀಶ್ ಮಟ್ಟಣ್ಣನವರ್ ಶಾಸಕರ ಭವನದಲ್ಲಿ ಒಂದು ಹುಸಿಬಾಂಬ್ ಇಟ್ಟಿರುವ ಒಂದು ಪ್ರಕರಣವನ್ನು ತೆಗೆದುಕೊಂಡಾಗ ಅವರ ಬಗ್ಗೆ ಎಷ್ಟೊಂದು ಬೆಂಬಲ ಸಾರ್ವಜನಿಕರಿಂದ ಸಿಕ್ಕಿತು. ಏಕೆ ಅಷ್ಟೊಂದು ಬೆಂಬಲ ಸಿಕ್ಕಿತೆಂದರೆ, ಈ ಭ್ರಷ್ಟ ವ್ಯವಸ್ಥೆಯ ಬಗ್ಗೆ ಈ ರಾಜಕೀಯ ವ್ಯವಸ್ಥೆ ಇರಬಹುದು, ಸಾರ್ವಜನಿಕ ರಂಗದಲ್ಲಿರಬಹುದು, ಇದರ ಬಗ್ಗೆ ಸಾರ್ವಜನಿಕರಲ್ಲಿ ಇರುವಂಥ ಒಂದು ಆಕ್ರೋಶದಿಂದ ಆ ಒಂದು ಬೆಂಬಲ ಅಲ್ಲಿ ವ್ಯಕ್ತವಾಯಿತು. ಹೀಗಾಗಿ ಇಂತಹ ಒಂದು ಭ್ರಷ್ಟ ವ್ಯವಸ್ಥೆಯನ್ನು ಮೆಟ್ಟಿ ಹಾಕುವಂಥ ಕೆಲಸವಾಗಬೇಕು, ಇವತ್ತು ಯಾವುದೇ ಸರ್ಕಾರವಿರಲಿ, ಅದರಲ್ಲಿ ಇವತ್ತು ಪ್ರಮುಖವಾಗಿ ರಾಜ್ಯಸರ್ಕಾರ ಇದರ ಬಗ್ಗೆ ತೀವ್ರವಾದ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಹೊಸದಾಗಿ ಮಂತ್ರಿಗಳಿಗೆ ಪ್ರಮಾಣ ವಚನವನ್ನು ಸ್ವೀಕಾರ ಮಾಡಿಸಿದ ಸಂದರ್ಭದಲ್ಲಿ ಆ ಮೊದಲ ಹಂತದ ದಿವಸಗಳಲ್ಲಿ ಅವರು ಹೇಳುತ್ತಿದ್ದರು. ಈ ಭ್ರಷ್ಟಾಚಾರದ ವಿರುದ್ಧ ನಾವು ಒಂದು ಧರ್ಮಯುದ್ಧವನ್ನು ಮಾಡುತ್ತೇವೆಂದು ಅವರು ಹೇಳುತ್ತಿದ್ದರು. ಇವತ್ತಿನ ಎಲ್ಲಾ ರೀತಿಯ ಒಂದು ವ್ಯವಹಾರವನ್ನು ನೋಡಿದಾಗ ಆ ಮಾತುಗಳು ಇವತ್ತು ಎಲ್ಲಿ ಹೋದವು ಎನ್ನುವುದರ ಬಗ್ಗೆ ನಾನು ಮುಂದೆ ಹೇಳುವ ವಿಷಯದಲ್ಲಿ ಆ ವಿಚಾರಗಳನ್ನು ವ್ಯಕ್ತಪಡಿಸುತ್ತೇನೆ. ಇಲ್ಲಿ ನಾನು ಪ್ರಮುಖವಾಗಿ ಇದನ್ನು ಸಿಬಿಐ ತನಿಖೆಗೆ ಕೊಡಿ ಎಂದು ಹೇಳಿದೆವು . ಈ ಪ್ರಕರಣ ಯಾವಾಗ ಹೊರಗೆ ಬಿತ್ತು ಅಂದಿನಿಂದ ಕಳೆದ ಎರಡು ವರ್ಷಗಳಿಂದ ಹೇಳಿಕೊಂಡು ಬರುತ್ತಿದ್ದೇವೆ. ಇವತ್ತು ರಾಜ್ಯ ಸರ್ಕಾರ ನೇಮಕ ಮಾಡಿದಂಥ ಒಂದು ಸ್ಟಾಂಪಿಟ್ ತನಿಖಾ ತಂಡ, ಹಿರಿಯ ಪೋಲೀಸ್ ಅಧಿಕಾರಿಗಳು ಆದಂಥ ಶ್ರೀ ಕುಮಾರ್‌ರವರ ಒಂದು ನೇತೃತ್ವದಲ್ಲಿ ಒಂದು ತಂಡವನ್ನು ನೀವು ನೇಮಕ ಮಾಡಿದಿರಿ. ಶ್ರೀ ಕುಮಾರ್‌ರವರ ಬಗ್ಗೆ ಯಾವುದೇ ರೀತಿಯಾದಂಥ ಒಂದು ಆಪಾದನೆಯ ಬಗ್ಗೆ ಬೇರೆ ರೀತಿ ವಿಚಾರ ಮಾಡುವಂಥದ್ದು ಏನಿಲ್ಲ. ಅವರ ಬಗ್ಗೆ ಒಂದು ಒಳ್ಳೆಯ ಗೌರವ ಇದೆ, ಒಟ್ಟು ಎಫಿಸಿಯೆಂಟ್ ಆಫೀಸರ್, ಇದನ್ನು ಅವರು ಎಫಿಷಿಯೆಂಟಾಗಿ ಹ್ಯಾಂಡಲ್ ಮಾಡುತ್ತಾರೆ. ಅವರ ಒಂದು ಶಕ್ತಿಯ ಬಗ್ಗೆ ಯಾರಿಗೂ ಸಂಶಯವಿಲ್ಲ. ಆದರೆ ಏನೊಂದು ತೀವ್ರಗತಿಯಾದ ತನಿಖೆ ಅಥವಾ ಯಾವುದೋ ಒಂದು ಹಂತದಲ್ಲಿ, ಎಲ್ಲೋ ಅಡೆತಡೆಗಳು ಆಗುತ್ತಿವೆ ಎನ್ನುವ ಬಗ್ಗೆ ಸಾರ್ವಜನಿಕ ವಲಯದಲ್ಲಿ ಸಂಶಯ

ಬರುತ್ತಿದೆ. ಸಿಬಿಐನಲ್ಲಿ ಶ್ರೀ ಕುಮಾರ್‌ರವರು 11 ವರ್ಷಗಳ ಸೇವೆಯನ್ನು ಮಾಡಿದವರು ಅವರಿಗೂ ಸಾಕಷ್ಟು ಅನುಭವ ಇದೆ. ಸಿಬಿಐ ತನಿಖೆಯ ಮುಖಾಂತರ ಮತ್ತು ಈ ಸ್ಟ್ಯಾಂಪಿಟ್ ಪರಸ್ಪರ ಒಂದು ಸಹಕಾರದಿಂದ ಇದನ್ನು ಇನ್ನೂ ಹೆಚ್ಚಿನ ತೀವ್ರ ಗತಿಯಲ್ಲಿ ತನಿಖೆಯನ್ನು ಮಾಡುವುದಕ್ಕೆ ಸಾಧ್ಯವಿದೆ. ಇವತ್ತು ನಮ್ಮ ಮುಂದೆ ಕೆಲವೊಂದು ಕಾಗದ ಪತ್ರಗಳು ಬರುತ್ತಿವೆ ಅವುಗಳನ್ನು ನೋಡಿದಾಗ, ರಾಜ್ಯ ಸರ್ಕಾರ ಏಕೆ, ಕಣ್ಣುಮುಚ್ಚಿಕೊಂಡು ಕೈಕಟ್ಟಿ ಕುಳಿತುಕೊಂಡಿದೆ ಎನ್ನುವುದರ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತಿದೆ. ಕಳೆದ ಎರಡು ವರ್ಷಗಳಿಂದ ನಡೆದಿರುವಂಥ ಘಟನಾವಳಿಗಳು. ಸಿಬಿಐ ತನಿಖೆಗೆ ಏಕೆ ನಾವು ಒತ್ತಾಯವನ್ನು ಮಾಡುತ್ತಿದ್ದೆವು, ಇವತ್ತು ಸರ್ಕಾರ ಮುಂದೆ ಬಂದಿತು. ಆದರೆ ಇದನ್ನು ಎರಡು ವರ್ಷಗಳ ಹಿಂದೆ ತೆಗೆದುಕೊಳ್ಳಬಹುದಾಗಿತ್ತು. ಒಂದೆರಡು ಉದಾಹರಣೆಗಳನ್ನು ನಾನು ಇಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ. ಕ್ರಿಮಿನಲ್ ಕೇಸ್ ನಂ: 545:2000 ಇದರಲ್ಲಿ ರಾಜ್ಯ ಸರ್ಕಾರ ಗೌರ್ನಮೆಂಟ್ ಅಡ್ವೊಕೇಟ್ ಸೀನಿಯರ್ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ ಅವರು ಒಂದು ತಕರಾರು ಅರ್ಜಿಯನ್ನು ಕೊಟ್ಟಿದ್ದಾರೆ. Objection of the prosecution to the application filed by accused under section 54 of the code of criminal procedure. ಇಲ್ಲಿ ಏನು ಹೇಳುತ್ತಿದ್ದಾರೆ, ಪ್ಯಾರಾ ನಂ:9 ಅಕ್ಯೂಸ್ಡ್ ನಂ:30 ಶ್ರೀ ಅಬ್ದುಲ್ ಕರೀಂ ಲಾಲ ತೆಲಗಿ ಆತ ಒಂದು ಅಪ್ಲಿಕೇಶನ್‌ನ್ನು ಕೊಟ್ಟಿದ್ದಾನೆ. ಬೇರೆ ಬೇರೆ ಹಂತದಲ್ಲಿ ಬೇರೆ ಬೇರೆ ಅಪ್ಲಿಕೇಶನ್‌ಗಳನ್ನು ಕೊಟ್ಟಿದ್ದಾನೆ. ಖಾಸಗಿ ಆಸ್ಪತ್ರೆಯಲ್ಲಿ ನಾನು ಟ್ರೀಟ್‌ಮೆಂಟ್ ತೆಗೆದುಕೊಳ್ಳಬೇಕಾಗುತ್ತದೆ, ನನ್ನ ಹೆಲ್ತ್ ಸರಿಯಾಗಿಲ್ಲ, ಅದಕ್ಕೆ ಪರ್ಮಿಷನ್ ಕೊಡಿ ಎಂದು ಕೇಳಿರುವುದು ಒಂದು, ಇನ್ನೊಂದು ನನಗೆ ಬೇಲ್ ಕೊಡಿಯೆಂದು ಈ ಒಂದು ಸಂದರ್ಭದಲ್ಲಿ ಆತನ ಅಪ್ಲಿಕೇಶನ್‌ಗಳಿಗೆ ರಾಜ್ಯ ಸರ್ಕಾರ ಪ್ರಾಕ್ಸಿಕ್ಯೂಷನ್ ಪರವಾಗಿ ಏನು ಅಬ್ಜಕ್ಷನ್ ಹಾಕಿದ್ದಾರೆ ಅವನಿಗೆ ಏಕೆ ಪರ್ಮಿಷನ್ ಕೊಡಬಾರದು ಎನ್ನುವ ಬಗ್ಗೆ ಹಲವಾರು ಕಾರಣಗಳನ್ನು ಹೇಳುತ್ತಾರೆ. ಅದರಲ್ಲಿ ಪ್ರಮುಖವಾದಂಥ ಕಾರಣ ಪ್ಯಾರಾ ನಂ:9,

"The accused is in judicial custody."

i.e., accused No. 13 i.e., Karim Lala Telgi.

".......and involved in a multi-crore fake stamp case. This accused is having nexus with the underworld dons of foreign countries."

This is very important.

"This accoused is having nexus with the under world dons of foreign countries. In case if this accused is permitted to take treatment at the private hospital, the accused may misuse the same and permanently leave this country. In this case many more accoused are yet to be arrested ಈ ಕಾರಣಗಳನ್ನು ಸೀನಿಯರ್ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ ಹೇಳುತ್ತಾರೆ. ದಿನಾಂಕ 30 ಜನವರಿ 2002 ರಲ್ಲಿ ಅಬ್ಜಕ್ಷನ್ ಕೊಟ್ಟಿರುವುದು. ಹೀಗಾಗಿ ಈ ರೀತಿ ಇವತ್ತು ಕರೀಂ ಲಾಲ್ ಬೇರೆ ದೇಶದ ಭೂಗತ ಲೋಕದ ವ್ಯಕ್ತಿಗಳ ಜೊತೆಗೆ ಸಂಪರ್ಕ ಇದೆ ಎನ್ನುವಂಥದ್ದು ಪ್ರಥಮಿಕ ತನಿಖೆಯಿಂದ ಇವತ್ತು ಸ್ಟಾಂಪಿಟ್ ಇರಬಹುದು, ಸಕಾರದ ಪೋಲೀಸ್ ಇಲಾಖೆಗೆ ತಿಳಿದು ಬಂದಿದೆ. ಇವತ್ತಿಗೆ ಇದು ಎರಡು ವರ್ಷವಾಯಿತು. ಹಾಗಾದರೆ ಮಾನ್ಯ ಗೃಹ

ಮಂತ್ರಿಗಳ ಅಂಡರ್‌ನಲ್ಲಿ ಇರುವಂಥ ಗೃಹ ಇಲಾಖೆಯಿಂದ ಅವರಿಗೆ ಗೊತ್ತಿಲ್ಲವೋ ಹೇಗೆ? ಮಾನ್ಯ ಮುಖ್ಯಮಂತ್ರಿಗಳ ಅಧೀನದಲ್ಲಿರುವಂಥ ಗುಪ್ತಚಾರ ಇಲಾಖೆಯಿಂದ ಇವರಿಗೆ ಇದು ಗೊತ್ತಿಲ್ಲವೋ ಹೇಗೆ? ಇವತ್ತು ಸ್ಟ್ಯಾಂಪಿಟ್ ಇರಬಹುದು, ನಮ್ಮ ರಾಜ್ಯದ ಪೊಲೀಸ್ ಅಧಿಕಾರಿಗಳು, ಈ ನಿಟ್ಟಿನಲ್ಲಿ ಹೊರದೇಶದ ಭೂಗತ ವ್ಯಕ್ತಿಗಳ ಜೊತೆ ಕರೀಂಲಾಲ್‌ನ ಸಂಪರ್ಕ ಇದೆ ಎನ್ನುವುದಾದರೆ ಅಷ್ಟೊಂದು ಮಾಹಿತಿ ಇವರಿಗೆ ಬಂದಿದ್ದರೆ ಇವರು ನೇರವಾಗಿ ಹೊರದೇಶಕ್ಕೆ ಹೋಗಿ ಆ ಭೂಗತ ವ್ಯಕ್ತಿಗಳ ಬಗ್ಗೆ ಕಾನೂನು ಕ್ರಮಗಳನ್ನು ಕೈಗೊಳ್ಳುವುದಕ್ಕೆ ಸಾಧ್ಯವಿದೆಯೇ ಅವರನ್ನು ಅರೆಸ್ಟ್ ಮಾಡುವುದಕ್ಕೆ ಸಾದ್ಯವಿದೆಯೇ ಅದರ ಬಗ್ಗೆ ತನಿಖೆ ಮಾಡುವುದಕ್ಕೆ ಸಾಧ್ಯವಿದೆಯೇ ಇದರ ಬಗ್ಗೆ ತಾವು ವಿಚಾರ ಮಾಡಬೇಕಲ್ಲಾ. ಹಾಗಾದರೆ ಸರ್ಕಾರ ಏಕೆ ಸುಮ್ಮನಿದೆ? ಸರ್ಕಾರ ಈ ಒಂದು ವಿಷಯವನ್ನು ಕೇಂದ್ರ ಸರ್ಕಾರಕ್ಕೆ ನೀವು ತಿಳಿಸಿದ್ದಿರೋ ಹೇಗೆ? ಇವತ್ತು ನಿಮ್ಮ ವಕೀಲರ ಮುಖಾಂತರ ನೀವು ಕೋರ್ಟ್‌ಗೆ ಸಬ್‌ಮಿಟ್ ಮಾಡುತ್ತೀರಿ. ಇದು ಬಹಳ ಗುರುತರವಾದ ಒಂದು ವಿಷಯ, ಇವತ್ತು ನಾವು ಏನು ಆಪಾದನೆಯನ್ನು ಮಾಡುತ್ತಿದ್ದೇವೆ, ಕರೀಂಲಾಲ್‌ನ ಈ ಭ್ರಷ್ಟಾಚಾರದ ಹಣ ಇವತ್ತು 30,000 ಕೋಟಿ ರೂಪಾಯಿಗಳು ಇರಬಹುದು, ಅಥವಾ ಅದಕ್ಕಿಂತ ಹೆಚ್ಚಿಗೆ ಇರಬಹುದು, ಇವತ್ತು ಬೇರೆ ಬೇರೆ ಕಡೆ ಸ್ಟ್ಯಾಂಪ್ ಪೇಪರ್ ಸೀಜ್ ಆಗುತ್ತಿವೆ. ಮತ್ತು ಸಿಗುತ್ತಿವೆ. ಸ್ಟ್ಯಾಂಪ್ ಪೇಪರ್‌ಗಳು ಮಾತ್ರ ಸಿಗುತ್ತಿವೆ ಆದರೆ ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹಣ ಸಿಗುತ್ತಿಲ್ಲ. ಹಾಗಾಗಿ ಆ ಹಣ ಎಲ್ಲಿ ಹೋಗುತ್ತಿದೆ ಎನ್ನುವ ಪ್ರಶ್ನೆ ಬಂದಾಗ, ಇವತ್ತು ದೇಶದಲ್ಲಿ ಐಎಸ್‌ಐ ಚಟುವಟಿಕೆಗಳು ನಡೆಯುತ್ತಿವೆ. ಉಗ್ರಗಾಮಿಗಳ ಜಮ್ಮು ಮತ್ತು ಕಾಶ್ಮೀರ್ ಧಾಳಿ ಇರಬಹುದು ಅಥವಾ ದೇಶದ ಬೇರೆ ಬೇರೆ ಭಾಗದಲ್ಲಿ ಉಗ್ರಗಾಮಿಗಳ ಚಟುವಟಿಕೆಗಳು ನಡೆಯುತ್ತಿವೆ. ದೇಶದ್ರೋಹಿ ಚಟುವಟಿಕೆಗಳು ನಡೆಯುತ್ತಿವೆ, ಅದಕ್ಕಾಗಿ ಈ ಹಣ ಉಪಯೋಗವಾಗುತ್ತಿದೆ. ಎನ್ನುವ ಒಂದು ಮಾಹಿತಿ ಇದೆ. ಕಳೆದ ಎರಡು ವರ್ಷಗಳ ಹಿಂದೆ ಸರ್ಕಾರದಲ್ಲಿ ಮಾಹಿತಿ ಇದ್ದಾಗ್ಯೂ ಇದನ್ನು ನೀವು ಏಕೆ ಕೇಂದ್ರ ಸಕಾರಕ್ಕೆ ತಿಳಿಸಲಿಲ್ಲ? ಇದು ನಮ್ಮ ಕಡೆಯಿಂದ ಆಗುವುದಿಲ್ಲ, ಇದು ನಮ್ಮ ವ್ಯಾಪ್ತಿಯೊಳಗಡೆ ಬರುವುದಿಲ್ಲ ಅದಕ್ಕಾಗಿ ಇದನ್ನು ನಾವು ಸಿಬಿಐ ತನಿಖೆಗೆ ಕೊಡುತ್ತೇವೆಂದು ಆವಾಗ ಹೇಳಬೇಕಾಗಿತ್ತು. ಏಕೆ ಹೇಳಲಿಲ್ಲ ಎನ್ನುವಂಥ ಒಂದು ಪ್ರಶ್ನೆ ಬರುತ್ತಿದೆ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳ ಮತ್ತು ಮಾನ್ಯ ಗೃಹ ಮಂತ್ರಿಗಳ ಜವಾಬ್ದಾರಿಯ ಒಂದು ನಿರ್ವಹಣೆಯಲ್ಲಿ ಲೋಪವಾಗಿದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ; neglignece on the part of the Chief Minister and on the part of the Home minister- ಇದು ಬಹಳ ಗುರುತರವಾದಂಥದ್ದು. ಇದಕ್ಕಾಗಿ ಇದನ್ನು ಸಿಬಿಐ ತನಿಖೆಗೆ ಕೊಡಬೇಕು ಎನ್ನುವಂಥದ್ದನ್ನು ಒತ್ತಾಯ ಮಾಡಿಕೊಂಡು ಬಂದಿರುತ್ತೇವೆ. ಇಲ್ಲಿ ಮತ್ತೊಂದು ವಿಷಯವನ್ನು ಹೇಳುತ್ತಾರೆ. ಈ ರಿಮಾಂಡ್ ಅಪ್ಲಿಕೇಶನ್‌ನ್ನು ಕೊಟ್ಟಾಗ ಸಹಿತ ತಕರಾರು ಅರ್ಜಿಯನ್ನು ಹಾಕಿದಾಗ ಸಹಿತ ಸಕಾರದಿಂದ ಕೆಲವೊಂದು ಮಾಹಿತಿಗಳನ್ನು ಕೋರ್ಟಿಗೆ ಒದಗಿಸುತ್ತಾರೆ.

11.30 ಎ.ಎಂ

ಇಲ್ಲಿ ಏನು ಹೇಳುತ್ತಾರೆಂದರೆ,

"It has came to known that this illegal business recket has spread to the major cities of the country like Mumbai, Calcutta, Delhi, Hyderabad, Vishakapattanam, Gujarat including Bangalore. Further it

is learnt that this racket has connection with the neighbouring countries of India like Nepal, Bangla Desh. Furthere, there is a definite information that the prime accused in this case Abdul Kareem Telgi had connections with the underworld people. All these informations have to be investigated."

ಇದು ಅಸಿಸ್ಟೆಂಟ್ ಪೊಲೀಸ್ ಕಮೀಷನರ್‌ರವರು ಕೋರ್ಟಿಗೆ ಸಲ್ಲಿಸಿರುವಂತಹ ಮಾಹಿತಿಯಾಗಿದೆ. ಡಿಸೆಂಬರ್ 13–2001ರಲ್ಲಿ ಉಪ್ಪಾರಪೇಟೆ ಪೊಲೀಸ್ ಸ್ಟೇಷನ್‌ನಿಂದ ಕೋರ್ಟಿಗೆ ಸಬ್‌ಮಿಟ್ ಮಾಡಿದ್ದಾರೆ. ಇದರಲ್ಲಿಯೂ ಸಹಿತ ಈ ಮಾಹಿತಿ ಇದೆ. ಹೀಗಾಗಿ ಇಷ್ಟೊಂದು ಮಾಹಿತಿಗಳನ್ನು ಇಟ್ಟುಕೊಂಡು ನಮ್ಮ ರಾಜ್ಯಸರ್ಕಾರದ ಪೊಲೀಸ್ ಅಧಿಕಾರಿಗಳು ವಿದೇಶಕ್ಕೆ ಹೋಗಲು ಸಾಧ್ಯವೇ? ಅದಕ್ಕೆ ಇಂಟರ್‌ಪೋಲ್ ಸಪೋರ್ಟ್ ಬೇಕು, ವಿದೇಶಕ್ಕೆ ಹೋಗಲು ಪರ್ಮಿಶನ್ ಬೇಕು, ಅವೆಲ್ಲವನ್ನೂ ನೀವು ಮಾಡಿಕೊಂಡು ಇಷ್ಟೆಲ್ಲವನ್ನೂ ನಿಮ್ಮ ಅಡಿಯಲ್ಲಿ ಇಟ್ಟುಕೊಂಡು ಹಾಗೆಯೇ ಕುಳಿತಿದ್ದರೆ ನಿಮ್ಮ ಜವಾಬ್ದಾರಿಯ ಲೋಪ ಆಗುತ್ತದೆಯೋ ಅಲ್ಲವೋ ಎಂಬುದನ್ನು ಸರ್ಕಾರ ಹೇಳಬೇಕಾಗುತ್ತದೆ. ಇದರಲ್ಲಿ ರಾಜ್ಯಸರ್ಕಾರದಿಂದ ಲೋಪವಾಗಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾನು ಇನ್ನೊಂದು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವುದೆಂದರೆ ತಾವು ಮೊನ್ನೆ ಡಿಸೆಂಬರ್ 26ಕ್ಕೆ ಹಿಯರಿಂಗ್ ನಡೆದಾಗ ಸುಪ್ರೀಂಕೋರ್ಟ್‌ಗೆ ಅಫಿಡವಿಟ್‌ನ್ನು ಕೊಟ್ಟಿದ್ದೀರಿ.

ಶ್ರೀ ಕೆ.ಹೆಚ್. ರಂಗನಾಥ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಇದೊಂದು ಸಾವರಿನ್ ಸ್ಟೇಟ್, ನಮ್ಮಲ್ಲಿ ಕಾನೂನುಗಳಿವೆ, ಸಿಬಿಐ ಕಾನೂನು ಅದು ದೆಹಲಿಯ ಆ್ಯಕ್ಟ್. ಅದನ್ನು ಅನ್ವಯ ಮಾಡಬೇಕೋ ಅಥವಾ ಬಿಡಬೇಕೋ ಅದು ನಮ್ಮ ನಿರ್ಧಾರಕ್ಕೆ ಬಿಟ್ಟಿರುವಂತಹದ್ದು. ನಾವು ಹೇಳತಕ್ಕದ್ದು ನಮ್ಮ ವಿಚಾರಕ್ಕೆ ಸಂಬಂಧಪಟ್ಟಿರುವಂತಹದ್ದು, ಮಾನ್ಯ ವಿರೋಧಪಕ್ಷದ ನಾಯಕರು ಹೇಳುತ್ತಿದ್ದಾರೆ. ಆದರೆ ಅದನ್ನು ಸಿಬಿಐಗೆ ಕೊಡಬೇಕೆಂದು ಕಾನೂನು ಎಲ್ಲಿ ಇದೆ? ಅದು ಯಾವ ಕಾನೂನಿನಲ್ಲಿದೆ? ನಮ್ಮದು ಸಾವರಿನ್ ಸ್ಟೇಟ್ ಫೆಡರಲ್ ಸ್ಟ್ರಕ್ಚರ್‌ನೊಳಗಡೆ ನಮ್ಮದು ಸಾವರಿನ್ ಸ್ಟೇಟ್. We have to exercise our powers ಹೀಗಿರುವಾಗ ಅದೇ ರೀತಿಯಾಗಿ ಮಾಡಬೇಕು, ಇದೇ ರೀತಿಯಾಗಿ ಮಾಡಬೇಕು ಎಂದು ನಿಮಗೆ ಹೇಳುವುದಕ್ಕೆ ಏನು ಅಧಿಕಾರವಿದೆ?

ಶ್ರೀ ರಾಜೇಂದ್ರ ವರ್ಮ : ಮಾನ್ಯ ಅಧ್ಯಕ್ಷರೆ, ನಾವು ಹೇಳುವುದಕ್ಕಾಗಿಯೇ ಇಲ್ಲಿಗೆ ಬಂದಿರುವುದು.

ಶ್ರೀ ಕೆ.ಹೆಚ್. ರಂಗನಾಥ್ : ಇಲ್ಲಿ ಕೂಗುವುದು ಬೇಡ, ನನಗೂ ಕೂಡ ಗಟ್ಟಿಯಾಗಿ ಕೂಗುವುದಕ್ಕೆ ಬರುತ್ತದೆ. ಇಲ್ಲಿ ಪ್ರಶ್ನೆ ಏನೆಂದರೆ, ಇದು ಕಾನೂನಿನ ಪ್ರಶ್ನೆ ಅದು ಇರುವಾಗ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸಾವಿರಾರು ಸಲ ಹೇಳಿದ್ದಾರೆ. ಇಲ್ಲಿಯೂ ಕೂಡ ಹೇಳಿದ್ದಾರೆ, ನಾನೂ ಸಹ ಮಾನ್ಯ ವಿರೋಧಪಕ್ಷದ ನಾಯಕರಿಗೆ ಪ್ರಶ್ನೆಯನ್ನು ಕೇಳುತ್ತೇನೆ. ತೆಹಲ್ಕಾದು ನಿರ್ದೋಷಿ ಎಂದು ತೀರ್ಮಾನವಾಗಿದೆಯೋ? ಅವರು ಮಂತ್ರಿಮಂಡಲದಲ್ಲಿ ಇದ್ದಾರಲ್ಲಾ, ಅವರು ಏತಕ್ಕಾಗಿ ಇದ್ದಾರೆ? ನಾವೂ ಸಹ ಕೇಳುತ್ತೇವೆ, We are also a part of the federal structure. ನಾವು ಕೇಳುತ್ತೇವೆ.

ಶ್ರೀ ರಾಜೇಂದ್ರ ವರ್ಮ : ನಿಮ್ಮ ಪಕ್ಷದ ನಾಯಕರು ಲೋಕಸಭೆಯಲ್ಲಿದ್ದಾರೆ. ಅವರಿಗೆ ಮಾತನಾಡುವುದಕ್ಕೆ ಹೇಳಿ. ನಿಮ್ಮ ನಾಯಕರು ಅಲ್ಲಿ ಏನು ಮಾಡುತ್ತಿದ್ದಾರೆ?

(ಗೊಂದಲ)

ಶ್ರೀ ರಾಜೇಂದ್ರ ವರ್ಮ : ನಿಮ್ಮ ನಾಯಕರು ಅಲ್ಲಿ ಏತಕ್ಕಾಗಿ ಸುಮ್ಮನೆ ಕುಳಿತಿದ್ದಾರೆ. ಲೋಕಸಭೆಗೆ ಹೋಗಿ ನೀವು ಅಲ್ಲಿ ಚರ್ಚೆ ಮಾಡಿ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ಬರುವ ಲೋಕ ಸಭಾ ಎಲೆಕ್ಷನ್‌ನಲ್ಲಿ ಲೋಕಸಭೆಗೆ ಆಯ್ಕೆಯಾಗಿ ಹೋಗಿ.

ಶ್ರೀ ಕೆ.ಹೆಚ್. ರಂಗನಾಥ್ : ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಆರಗ ಜ್ಞಾನೇಂದ್ರ : ಈಗ ಎಲ್ಲಾ ಸಾಕ್ಷ್ಯಾಧಾರಗಳನ್ನು ಮುಚ್ಚಿಟ್ಟಮೇಲೆ ಸಿಬಿಐಗೆ ಕೊಡಬೇಕು ಎಂದು ನಿಮಗೆ ಅನಿಸಿತೇ?

ಅಧ್ಯಕ್ಷರು : ಮಾನ್ಯ ಹಿರಿಯ ಮಂತ್ರಿಗಳು ಏನು ಹೇಳುತ್ತಿದ್ದಾರೆ ಕೇಳಿ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಜ್ಞಾನೇಂದ್ರರವರೆ, ಕೊಶ್ಚನ್ ಹವರ್‌ನ್ನು ಸಸ್ಪೆಂಡ್ ಮಾಡಿ ಚರ್ಚೆ ಪ್ರಸ್ತಾಪ ಮಾಡುವಂತಹ ಆತ ಜರೂರು ಆಗಿರತಕ್ಕ ವಿಚಾರವೇ..

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನೀವು ಅಲೋ ಮಾಡಿದ ಮೇಲೆ ಮಾನ್ಯ ಹಿರಿಯ ಸಚಿವರು ನಿಮ್ಮ ರೂಲಿಂಗ್‌ನ್ನು ಪ್ರಶ್ನೆ ಮಡುತ್ತಿದ್ದಾರೆ. ಅವರು ಸ್ಪೀಕರ್ ಆಗಿದ್ದಂತಹವರು ನಿಮ್ಮ ರೂಲಿಂಗ್‌ನ್ನು ಕೊಶ್ಚನ್ ಮಾಡುತ್ತಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್ : ಅದು ಈ ಸದನ ಒಪ್ಪಿರುವಂತಹದ್ದು ಕಾನೂನು ಇರುವಂತಹದ್ದು, ನಾನು ತಮ್ಮನ್ನು ಕೇಳತಕ್ಕ ಹಕ್ಕು ನನಗೆ ಇದೆ. ಅದನ್ನು ಕೇಳಬೇಡ ಎಂದು ತಾವು ಹೇಳುವುದಾದರೇ ನಾನು ಕೇಳುವುದೇ ಇಲ್ಲಾ.

ಅಧ್ಯಕ್ಷರು : ಅದನ್ನು ನಾನು ಏತಕ್ಕಾಗಿ ಹೇಳಲಿ.

ಶ್ರೀ ಕೆ.ಹೆಚ್. ರಂಗನಾಥ್ : ಅವರೇ ಹೇಳುವುದಾದರೆ, ಆಗಬಹುದು, ಅದನ್ನು ಸಭೆಯು ತೀರ್ಮಾನ ಮಾಡಿದರೆ ಅದು ಆಗಬಹುದು. ಅದಕ್ಕೆ ನನ್ನದೇನೂ ವಿರೋಧವಿಲ್ಲ. ಆದರೆ ಇದು ಒಂದು ಸಾವರಿನ್ ಸ್ಟೇಟ್, ಈ ಸಭೆಗೆ ಯಾರು ಆರಿಸಿ ಕಳುಹಿಸಿದ್ದಾರೆ? ಕೇಂದ್ರ ಸರ್ಕಾರಕ್ಕೆ ಯಾರು ಆರಿಸಿ ಕಳುಹಿಸಿದ್ದಾರೋ ಅವರೇ ನಮ್ಮನ್ನು ಆರಿಸಿ ಕಳುಹಿಸಿದ್ದಾರೆ ಹೀಗಿರುವಾಗ ನಾವು ನಮ್ಮ ಕಾನೂನಿನಲ್ಲಿ ಮಡತಕ್ಕದ್ದು, ಅದು ಸರ್ಕಾರದ ವಿವೇಚನೆಗೆ ಸೇರಿರತಕ್ಕಂತಹ ವಿಚಾರ, ಪ್ರಸ್ತಾಪ ಮಾಡತಕ್ಕಂತಹ ವಿಚಾರವಿರಬಹುದು, ಅದು ದೊಡ್ಡದಾಗಿರತಕ್ಕಂತಹ ವಿಚಾರ ಇರಬಹುದು ಮಾನ್ಯ ಸದನದ ಸದಸ್ಯರಾಗಿರತಕ್ಕಂತಹವರು ಮಾಜಿ ಮಂತ್ರಿಯಾಗಿರತಕ್ಕಂತಹ ರೋಷನ್ ಬೇಗ್‌ರವರು ಮೊನ್ನೆ ದಿವಸ ಪತ್ರಿಕೆಯಲ್ಲಿ ಹೇಳಿದ್ದಾರೆ. ಅವರು ಪತ್ರಿಕೆಯವರು ಕೇಳಿದಂತಹ ಪ್ರತಿಯೊಂದು ಪ್ರಶ್ನೆಗೂ ಉತ್ತರ ಹೇಳಿದ್ದಾರೆ. ದಿನಾ ಬೆಳಿಗ್ಗೆಯಾದರೆ ಇದೆಯಲ್ಲಾಪ್ಪಾ ಗೋಳು, ಅದಕ್ಕೋಸ್ಕರ ಇದು ಶಮನವಾಗಲಿ ಎಂದು ಹೇಳಿದ್ದಾರೆ. ನಾನು ಅದಕ್ಕೆ ಕೇಳಿದ್ದು, ನನಗೆ ಮಾನ್ಯ ಫರ್ನಾಂಡೀಸ್ ರವರ ಮೇಲೆ ಅತೀವವಾದಂತಹ ಗೌರವವಿದೆ.

ಶ್ರೀ ಆರಗ ಜ್ಞಾನೇಂದ್ರ : ಇಷ್ಟು ಹೊತ್ತಿಗಾಗಲೇ ಅವರನ್ನು ಜೈಲಿಗೆ ಕಳುಹಿಸಬೇಕಾಗಿತ್ತು.

Mr. Speaker : You please hear me.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಅವರು ಮನಸ್ಸಿಗೆ ಬಂದ ಹಾಗೆ ಮಾನ್ಯ ಮಂತ್ರಿಗಳು ಮಾತನಾಡುತ್ತಿದ್ದಾರೆ. ನಮ್ಮ ನಾಯಕರು ಎದ್ದು ಮಾತನಾಡುತ್ತಿದ್ದಾರೆ. ತಾವು ಅಲ್ ಮಾಡಿದ್ದೀರಿ.

(ಗೊಂದಲ)

ಅಧ್ಯಕ್ಷರು : ನಿಮಗೆ ಎಷ್ಟು ಹಕ್ಕು ಇದೆಯೋ, ಅವರಿಗೂ ಅಷ್ಟು ಹಕ್ಕು ಇದೆ, ದಯವಿಟ್ಟು ಯಾರೂ ಮಧ್ಯ ಡಿಸ್ಟರ್ಬ್ ಮಾಡಬೇಡಿ. ಮಾನ್ಯ ಶೆಟ್ಟರ್‌ರವರೇ you please continue

(ಗೊಂದಲ)

Sri K.H. Ranganath: I will not be cowdown by the shoutings ಈ ಸದನದಲ್ಲಿ ಕಾನೂನನ್ನು ಎತ್ತಿ ಹಿಡಿಯತಕ್ಕಂತಹದ್ದು, ತಾವು ಇನ್ನೂ ಕೊಶ್ಚನ್ ಹವರ್ ಸಸ್ಪೆಂಡ್ ಮಾಡಿಲ್ಲ, ಅದಕ್ಕೆ ನಾನು ತಮ್ಮನ್ನು ಕೇಳುತ್ತಿದ್ದೆ. ಅದು ಅಷ್ಟು ಪ್ರಮುಖವಾದಂತಹ ವಿಚಾರ. ನನಗೆ ಮಾನ್ಯ ಫರ್ನಾಂಡೀಸ್‌ರವರ ಮೇಲೆ ಅತೀವವಾದಂತಹ ಗೌರವವಿದೆ. ಆದರೆ ನಾವು ಹೀಗೆಯೇ ಮಾತನಾಡುತ್ತಾ ಹೋದರೆ ಒಂದಕ್ಕೊಂದು ತಾಳೆ ಬರುತ್ತದೆ. ಅದನ್ನು ನಾನು ಕೇಳತಕ್ಕಂತಹ ಪ್ರಶ್ನೆ ಬರುತ್ತದೆ.

ಅಧ್ಯಕ್ಷರು : ಕೊಶ್ಚನ್ ಹವರ್ ಸಸ್ಪೆಂಡ್ ಮಾಡಿಯೇ ನಾನು ಅಲೋ ಮಾಡುತ್ತಿದ್ದೇನೆ.

ಶ್ರೀ ಬೆಲ್ಲದ್ ಚಂದ್ರಕಂತ್ ಗುರಪ್ಪ : ಲೋಕಸಭೆಗೆ ಹೋಗುವುದು ಒಳ್ಳೆಯದು ನೀವು.

ಶ್ರೀ ಕೆ.ಹೆಚ್. ರಂಗನಾಥ್ : ಈಗ ನೀವು ಗಾಜಿನ ಮನೆಯಲ್ಲಿರುವವರು, ಬೇರೆಯವರ ಕೈಯಲ್ಲಿ ಕಲ್ಲು ಹಾಕಬಾರದು. ಅದು ತಪ್ಪಾಗುತ್ತದೆ. They are living in a glass house.

ಅಧ್ಯಕ್ಷರು : ಪ್ಲೀಸ್ ಮಧ್ಯದಲ್ಲಿ ಯಾರೂ ಡಿಸ್ಟರ್ಬ್ ಮಾಡಬೇಡಿ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ ಮಾತನಾಡಬೇಕಾದವರು ಸದನದಲ್ಲಿ ಇಲ್ಲ ಅವರು ಪರದೇಶಕ್ಕೆ ಹೋಗಿ ಬಿಟ್ಟಿದ್ದಾರೆ. ಇದೇ ಸಚಿವರೆಲ್ಲಾ ಸೇರಿ ಯಾರು ಸದನದಲ್ಲಿ ಮಾತನಾಡಬೇಕಿತ್ತು ಅವರನ್ನು ಪರದೇಶಕ್ಕೆ ಕಳುಹಿಸಿಬಿಟ್ಟಿದ್ದಾರೆ.

ಅಧ್ಯಕ್ಷರು : ಮಾನ್ಯ ಸದಾನಂದಗೌಡರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ. ಮಾನ್ಯ ಹಿರಿಯ ಸಚಿವರಾದ ಕೆ.ಹೆಚ್. ರಂಗನಾಥರವರು ಸಿಬಿಐ ಬಗ್ಗೆ ಮಾತನಾಡಿದ್ದಾರೆ. ನಾವು ಅದನ್ನೇ ಹೇಳುತ್ತಿದ್ದೇವೆ. ಇಲ್ಲಿ ನಾನು ಯಾವ ಉದ್ದೇಶಕ್ಕಾಗಿ ರೆಫರ್ ಮಾಡಿದ್ದೇನೆಂದರೆ. ಇದನ್ನು ಸಿಬಿಐಗೆ ಕೊಡಬೇಕೋ ಅಥವಾ ಬೇಡವೋ ಎಂಬುದನ್ನು ನಮ್ಮ ರಾಜ್ಯ ಸರ್ಕಾರದ ರೈಟ್ ಎಂದು ಹೇಳುತ್ತಿದ್ದಾರೆ. ನಿಮಗೆ ರೈಟ್ ಇದೆ, ಅದಕ್ಕೆ ತಾವು ಕೊಡುತ್ತಿಲ್ಲ, ಅದಕ್ಕೆ ಪರ್ಮಿಶನ್ ಕೊಡಿ ಎಂದು ನಾವು ಕೇಳುತ್ತಿರುವುದು. ನಾವು ಸಿಬಿಐಗೆ ಕೊಡಿ ಎಂದು ನಾವು ಹೇಳುತ್ತಿರುವುದು, ಅದಕ್ಕಾಗಿ ಒತ್ತಾಯವನ್ನು ಸಹ ಮಾಡುತ್ತಿದ್ದೇವೆ.

ಶ್ರೀ ಕೆ.ಹೆಚ್.ರಂಗನಾಥ್: ಸರ್ಕಾರ ಕೊಡಬಾರದು ಎಂದು ಮಾಡಿರುವ ತೀರ್ಮಾನ ಅದು ಮೊನ್ನೆಯದಲ್ಲಾ. ಹಿಂದೆ ದಿವಂಗತ ದೇವರಾಜ ಅರಸ್‌ರವರ ಸರ್ಕಾರದಲ್ಲೂ ಕೂಡ ಇಂತಹದೇ ಒಂದು ಪ್ರಶ್ನೇ ಬಂದಾಗ, ಸಿಬಿಐಗೆ ಕೊಡುವುದಿಲ್ಲವೆಂದು ಸರ್ಕಾರ ತೀರ್ಮಾನವನ್ನು ತೆಗೆದುಕೊಂಡಿತ್ತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮಾನ್ಯ ಹಿರಿಯ ಮಂತ್ರಿಗಳನ್ನು ಎದ್ದು ನಿಲ್ಲಿಸಿ ಮಧ್ಯದಲ್ಲಿ ಇಂಟರಪ್ಷನ್ ಮಾಡಿಸಬೇಕೆಂಬ ಯೋಜನೆ ಆಗಿದ್ದರೆ ಹೇಳಲಿ ಅಧ್ಯಕ್ಷರೆ. ನಮ್ಮ ನಾಯಕರು ಮಾತನಾಡುವುದಕ್ಕೆ ಅಡ್ಡಿಪಡಿಸಬೇಕೆಂಬ ಯೋಚನೆಯಿದ್ದರೆ ಹೇಳಲಿ.

ಅಧ್ಯಕ್ಷರು: ತಾವು ದಯವಿಟ್ಟು ಕಂಟಿನ್ಯೂ ಮಾಡಿ.

ಶ್ರೀ ಆರಗ ಜ್ಞಾನೇಂದ್ರ: ಎರಡು ವರ್ಷದಲ್ಲಿ ಮಾತನಾಡಲಿಕ್ಕೆ ಇದೇ ರೀತಿ ಮಾಡಿದರು ನಮ್ಮ ನಾಯಕರು ಮಾತನಾಡುವಾಗ ಅವರು ಅಡ್ಡಿಪಡಿಸುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಅವರು ಮಾತನಾಡಲು ಪರ್ಮಿಶನ್ ಕೊಟ್ಟಿದ್ದೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ. ಇಂಗ್ಲೀಷ್‌ನಲ್ಲಿ ಒಂದು ಗಾದೆ ಇದೆ. ' Save me from my friends. I will take care of my enemies.' ಅಂತ ಇದೆ. ಅದು ಜಗದೀಶ್ ಶೆಟ್ಟರೆ ಸಾಹೇಬರಿಗೆ ಅನ್ವಯಿಸುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಹಿರಿಯ ಸಚಿವರಾದ ಶ್ರೀ ರಂಗನಾಥ ಅವರು ಹಿರಿಯ ಅನುಭವಿಗಳು ಅವರು ಸ್ವಲ್ಪ ತಡವಾಗಿ ಸಭೆಗೆ ಬಂದರು. ಅಷ್ಟರೊಳಗೆ ತಾವು ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಿ ರೂಲಿಂಗ್ ಕೊಟ್ಟಿದ್ದೀರಿ, ಅದು ಏಕೆ ಅಂತ ಪ್ರಶ್ನೆ ಮಾಡಿದರು ಅವರು. ಆಯಿತು ನಾನು ಇಷ್ಟರೊಳಗೆ ಮುಗಿಸುತ್ತೇನೆ, ನಾನೇನು ಡಿಸ್ಟರ್ಬ್ ಮಾಡಲಿಲ್ಲ.

ಶ್ರೀ ಕೆ.ಹೆಚ್. ರಂಗನಾಥ : ಆದರೂ ಎಷ್ಟು ಕೇಳಬೇಕೋ ಅಷ್ಟನ್ನು ಕೇಳಬೇಕಾಗುತ್ತದೆ ಸುಮ್ಮನೆ ಲಂಬಿಸುವುದರಲ್ಲಿ ಏನು ಅರ್ಥವಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಹಾಗೆ ಇಲ್ಲ, ನಾನು ವಿತ್ ಡಾಕ್ಯುಮೆಂಟ್ಸ್ ರೆಫರ್ ಮಾಡುತ್ತಿದ್ದೇವೆ.

Sri K.H.Ranganath: I am not questioning your ruling.

ಶ್ರೀ ಜಗದೀಶ್ ಶೆಟ್ಟರ್: ಅವರಿಗೆ ಎಷ್ಟು ಬೇಕೋ ಅಷ್ಟನ್ನು ಮಾತನಾಡಿಬಿಡುತ್ತೇವೆ, ಈಗ ಒಂದೇ ಒಂದು ಪ್ರಶ್ನೆ ಇಲ್ಲಿ ಇದೆ. ಮಾನ್ಯ ಹಿರಿಯ ಸಚಿವರು ಒಂದು ಪ್ರಶ್ನೆಯನ್ನು ರೈಸ್ ಮಾಡಿದರು ಅದೇನೆಂದರೆ ಸಿ.ಬಿ.ಐ. ತನಿಖೆಗೆ ಕೊಡುವಂತಹ ಹಕ್ಕು ರಾಜ್ಯಸರ್ಕಾರದ್ದು ಎನ್ನುವಂತಹ ಮಾತನ್ನು ಹೇಳಿದರು. ನಾನು ಅದನ್ನು ಒಪ್ಪಿಕೊಳ್ಳುತ್ತಿದ್ದೇನೆ, ಆದರೆ ನೀವು ಏಕೆ ಸಿ.ಬಿ.ಐ. ಗೆ ಕೊಡಬೇಕೆಂದು ಕೇಳುತ್ತಿದ್ದೀರಿ ಎಂದು ಪ್ರಶ್ನೆ ಮಾಡುತ್ತಿದ್ದೀರಿ. ಈಗಾಗಲೇ ಸಿ.ಬಿ.ಐ.ಗೆ ಕೊಡಬೇಕೆಂದು ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ನಿರ್ಣಯ ತೆಗೆದುಕೊಂಡಿದ್ದು ಮತ್ತೆ ನೀವು ಆ ಪ್ರಶ್ನೆಯನ್ನು ಏಕೆ ರೈಸ್ ಮಾಡುತ್ತಿದ್ದೀರಿ. ನೀವು ಬಹಳ ತಡವಾಗಿ ಕೊಟ್ಟಿದ್ದೀರಿ ಅಂತ ನಾವು ಕೇಳುತ್ತಿರುವುದು.

ಶ್ರೀ ಕೆ.ಹೆಚ್.ರಂಗನಾಥ್: ಸಿ.ಬಿ.ಐ.ಗೆ ಕೊಟ್ಟಿದ್ದು ತಪ್ಪು ಅಂತ ನಾನು ಹೇಳಲಿಲ್ಲ ಕೊಡಬಾರದಾಗಿತ್ತು ಅಂತ ಹೇಳಲಿಲ್ಲ. ಸರ್ಕಾರದ ವಿವೇಚನೆಗೆ ಸೇರಿದ ವಿಚಾರವೆಂದು ಹೇಳಿದೆ.

ಶ್ರೀ ಜಗದೀಶ್ ಶೆಟ್ಟರ್: ಅದಕ್ಕೆ ನಾವು ಇದುವರೆಗೆ ಕೈ ಹಾಕಲಿಲ್ಲ. ಏಕೆ ತಡ ಮಾಡಿದಿರಿ ಅಂತ ಕೇಳುತ್ತಿದ್ದೇನೆ. ನಿಮ್ಮ ವಿವೇಚನೆಯ ನಿರ್ಣಯ ಬಹಳ ತಡವಾಯಿತು. ಇದನ್ನು ರಾಜ್ಯಸರ್ಕಾರದ ಅಧಿಕಾರಿಗಳಿಂದ ಮಾಡಲಿಕ್ಕೆ ಸಾಧ್ಯವೇ ಹೇಗೆ?

ಶ್ರೀ ಕೆ.ಹೆಚ್. ರಂಗನಾಥ್: ತೆಹಲ್ಕಾದಲ್ಲಿ ನಿರ್ದೋಷಿ ಎಂದು ಸಾಬೀತಾಗಿದೆಯೇ ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಲೋಕಸಭೆಯಲ್ಲಿ ಹೋಗಿ ಕೇಳಿ. ನಿಮ್ಮ ಪ್ರತಿ ಪಕ್ಷದ ನಾಯಕರು.

ನಿಮ್ಮ ಎಂ.ಪಿ.ಗಳೆಲ್ಲಾ ಎನು ಮಾಡುತ್ತಿದ್ದಾರೆ ಕೇಳಿ?

ಶ್ರೀ ಕೆ.ಹೆಚ್. ರಂಗನಾಥ್ : ಅದಕ್ಕೆ ಪಾರ್ಲಿಮೆಂಟಿನಲ್ಲಿ ಅವರೆಲ್ಲಾ ಬಾಯ್‌ಕಾಟ್ ಮಾಡುತ್ತಿರುವುದು.

ಶ್ರೀ ಜಗದೀಶ್ ಶೆಟ್ಟರ್: ಪಾರ್ಲಿಮೆಂಟಿನಲ್ಲಿ ನಿಮ್ಮ ಎಂ.ಪಿ.ಗಳು ಬರೇ ಬಾಯ್‌ಕಾಟ್ ಮಾಡುವುದೇ ಆಯಿತು. ಅವರಿಗೆ ಚರ್ಚೆ ಮಾಡಲಿಕ್ಕೆ ತಯಾರಿಲ್ಲ. ಅವರು ಪಾರ್ಲಿಮೆಂಟ್‌ನಲ್ಲಿ ಯಾವುದೇ ಚರ್ಚೆ ಮಾಡಲಿಕ್ಕೆ ತಯಾರಿಲ್ಲ. ಇವರ ಹಣೆಬರಹ ಏನೆಂದು ಎಲ್ಲರಿಗೂ ಗುರುತಿದೆ. ನಾನು ಇಲ್ಲಿ ಯಾವ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತಿದ್ದೇನೆಂದರೆ, ಇವತ್ತು ಸಿ.ಬಿ.ಐ.ಗೆ ತನಿಖೆಗೆ ನೀವು ಈ ಪ್ರಕರಣವನ್ನೇನೋ ಕೊಟ್ಟಿದ್ದೀರಿ. ಇದಕ್ಕೋಸ್ಕರ ನಾವು ಎರಡು ವರ್ಷಗಳಿಂದ ಒತ್ತಾಯ ಮಾಡುತ್ತಿದ್ದೇವೆ. ಭೂಗತ ವ್ಯಕ್ತಿಗಳ ಜೊತೆ ಸಂಬಂಧ ಹೊಂದಿರುವ ಕರೀಂಲಾಲ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಲ್ಲಾ ಮಾಹಿತಿಗಳು ನಿಮ್ಮಲ್ಲಿವೆ. ಮಾನ್ಯ ಮುಖ್ಯಮಂತ್ರಿಗಳ ಅಧೀನದಲ್ಲಿರತಕ್ಕಂತಹ ಇಂಟೆಲಿಜೆನ್ಸಿ ಇರಬಹುದು ಅಥವಾ ಗೃಹ ಇಲಾಖೆಯ ಅಧೀನದಲ್ಲಿರುವಂತಹ ಪೋಲಿಸ್ ಇಲಾಖೆಯಿರಬಹುದು. ಈ ಎಲ್ಲಾ ವಿಶೇಷ ತನಿಖಾ ತಂಡ ಇವೆಲ್ಲಾ ನಿಮ್ಮ ಅಧೀನದಲ್ಲಿ ಕೆಲಸವನ್ನು ಮಾಡುತ್ತಿದೆ. ಇಷ್ಟೆಲ್ಲಾ ಮಾಹಿತಿ ಇದ್ದಾಗ್ಯೂ ಸಹ ಈ ವಿಷಯವನ್ನು ಏಕೆ ಮುಚ್ಚಿಟ್ಟಿದ್ದೀರಿ? ಈ ಪ್ರಕರಣಕ್ಕೆ ಎರಡು ವರ್ಷಗಳಿಂದ ಏಕೆ ಪ್ರೋತ್ಸಾಹ ಕೊಟ್ಟಿದ್ದೀರಿ? ಇಷ್ಟೊಂದು ಬಹಳ ಸೂಕ್ಷ್ಮವಾದ ವಿಷಯವನ್ನು ಯಾರಿಗೆ ತಲುಪಿಸಬೇಕಾಗಿತ್ತೋ? ಈ ಮಾಹಿತಿಯನ್ನು ಸಾರ್ವಜನಿಕರಿಗೆ ಏಕೆ ತಲುಪಿಸಲಿಲ್ಲ. ಇದರಲ್ಲಿ ನಿಮ್ಮ ಜವಾಬ್ದಾರಿ ಬಹಳಷ್ಟು ಲೋಪವಾಗಿದೆಯೆಂದು ಹೇಳುತ್ತೇನೆ. ಈ ಪ್ರಕರಣವನ್ನು ಎರಡು ವರ್ಷದ ಕೆಳಗೆ ಸಿ.ಬಿ.ಐ.ಗೆ ಕೊಟ್ಟಿದ್ದರೆ ತೀವ್ರ ಗತಿಯಲ್ಲಿ ಈ ಪ್ರಕರಣದ ತನಿಖೆ ಆಗಬಹುದಾಗಿತ್ತು. ಇದರಿಂದ ಈ ಭೂಗತ ವ್ಯಕ್ತಿಗಳ ಜೊತೆ ಕರೀಂಲಾಲನಿಗೆ ಸಂಬಂಧವಿದೆ ಎಂಬುದು ಸಿ.ಬಿ.ಐ. ತನಿಖೆಯ ಮುಖಾಂತರ ಗೊತ್ತಾಗಲು ಸಾಧ್ಯವಿತ್ತು. ಈ ವಿಷಯವನ್ನು ತಾವು ಏಕೆ ಮುಚ್ಚಿಟ್ಟಿದ್ದೀರಿ? ಎರಡು ವರ್ಷಗಳ ನಂತರ ಈ ಪ್ರಕರಣದ ಬಗ್ಗೆ ನಿರ್ಣಯ ತೆಗೆದುಕೊಂಡಿದ್ದೀರಿ. ಅದು ಇದರ ಬಗ್ಗೆ ಒತ್ತಡ ಬಂದ ಮೇಲೆ, ಸಾರ್ವಜನಿಕರಲ್ಲಿ ಅಭಿಪ್ರಾಯ ಮೂಡಿದ ಮೇಲೆ ಸಾಕಷ್ಟು ಹೋರಾಟವೆಲ್ಲಾ ಆಯಿತು. ಡಿಸೆಂಬರ್ 26ಕ್ಕೆ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಈ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ಒಪ್ಪಿಸಲಿಕ್ಕೆ ನಿರ್ಣಯ ತೆಗೆದುಕೊಂಡಿದ್ದೀರಿ. ಇದರಲ್ಲಿ ಎಷ್ಟು ನಿಜಾಂಶವಿದೆ ಎಂಬುದು ಗೊತ್ತಾಗುತ್ತದೆ. ಡಿಸೆಂಬರ್ 26ಕ್ಕೆ ನಿರ್ಣಯಿಸಿದರೂ ಸಹ ಈ ಕ್ಷಣದವರೆಗೂ ಸಿ.ಬಿ,ಐ.ಗೆ ನಿಮ್ಮಿಂದ ಒಂದು ಪತ್ರ ಕೂಡ ಬರೆದಿಲ್ಲ. ಈ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ಹ್ಯಾಂಡ್‌ಓವರ್ ಮಾಡಿಲ್ಲ. ಈ ಮಾಹಿತಿಗಳನ್ನೆಲ್ಲಾ ತೆಗೆದುಕೊಂಡು ನೀವು ತನಿಖೆ ಪ್ರಾರಂಭ ಮಾಡಿ, ನಮ್ಮ ಸ್ಟಾಂಪಿಟ್‌ನವರು ನಿಮಗೆ ಸಹಕಾರ ಕೊಡುತ್ತಾರೆಂದು ಒಂದು ಸಣ್ಣ ಪತ್ರವನ್ನು ಸಹ ನೀವು ಸಿ,ಬಿ,ಐ.ಗೆ ಬರೆದಿಲ್ಲ. ಹಾಗೆ ಬರೆಯಲಿಕ್ಕೆ ನಿಮಗೆ ಧೈರ್ಯ ಇಲ್ಲ. ಒಂದು ನಿರ್ಣಯ ತೆಗೆದುಕೊಂಡು ಅದನ್ನು ಇಂಪ್ಲಿಮೆಂಟ್ ಮಾಡುವುದಿಲ್ಲ. ಸುಪ್ರೀಂಕೋರ್ಟ್‌ಗೆ ಅಫಿಡವಿಟ್ ಕೊಟ್ಟಿದ್ದೀರಿ. ಮೊನ್ನೆ ನೀವು ಒಂದು ಸುಪ್ರೀಂಕೋರ್ಟ್ ಹಿಯರಿಂಗ್. ರಿಟ್ ಪಿಟಿಷನ್ ನಂ. 522:2003 ಇದರಲ್ಲಿ ನೀವು ಒಂದು ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರ ಪ್ರತಿ ನನ್ನ ಮುಂದಿದೆ, ಅದರಲ್ಲಿ ನೀವು ಹೇಳುತ್ತಿರುವುದೇನೆಂದರೆ: ಪ್ಯಾರಾ ನಂ.8 ರಲ್ಲಿ

" This Affidavit is being filed by the State of Karnataka to make its stand known and to constructively respond to the state-

ment of the Union Finance Minister in Parliament that the sale and distribution or fake stamp papers has assumed the dimensions of a national problems having serious economic consequences in several States of the Union and expressing his desire to have the matter investigated and dealt with by a centralised investigation and presentation agency. In the course of the said statement in Parliament, the Hon'ble Minister has acknowledged the investigative work done by Karnataka and the proactive attitude of the State Government in addressing the matter."

"Para 9: Accordingly. the Karnataka State cabinet at its Meeting held on 26.12.2003 decided to give its consent to a CBI investigation of the matter."

ಯೂನಿಯನ್ ಫೈನಾನ್ಸ್ ಮಿನಿಸ್ಟರ್ ಪಾರ್ಲಿಮೆಂಟಿನಲ್ಲಿ ಮಾತನಾಡಿದಂತಹ ಮಾತುಗಳನ್ನು ನೀವು ಹೇಳಿದಿರಿ. ಅವರು ಅಭಿಪ್ರಾಯಪಟ್ಟಂತೆ ಈ ಪ್ರಕರಣವನ್ನು ಒಪ್ಪಿಸಲು ಅದಕ್ಕೆ ಪೂರಕವಾಗಿ ನ್ಯಾಷನಲ್ ಇಂಟರೆಸ್ಟ್, ಫೈನಾನ್‌ಷಿಯಲ್ ಕ್ರೈಸಸ್ ಇಷ್ಟೆಲ್ಲಾ ದೃಷ್ಟಿಕೋನ ಇಟ್ಟುಕೊಂಡು ನಾವು ಸಿ.ಬಿ.ಐ.ಗೆ ಈ ಪ್ರಕರಣವನ್ನು ಒಪ್ಪಿಸಲು ನಿರ್ಣಯವನ್ನು ಡಿಸೆಂಬರ್ 26ರಂದು ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ತೆಗೆದುಕೊಂಡಿದ್ದೇವೆಂದು ಹೇಳಿದಿರಿ. ಆ ರೀತಿ ಕೊಡಬೇಕೆನ್ನುವ ನಿಮ್ಮ ಸ್ಟಾಂಡ್ ಇದ್ದಾಗ ನೀವೇಕೆ ನೇರವಾಗಿ ಸಿ.ಬಿ.ಐ.ಗೆ ಪತ್ರ ಬರೆಯಲಿಲ್ಲ ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಏಕೆಂದರೆ ಇದು ಕೇವಲ ತೋರಿಕೆ ಐವಾಷ್. ಸಿ.ಬಿ.ಐ. ತನಿಖೆಗೆ ಈ ಪ್ರಕರಣವನ್ನು ಒಪ್ಪಿಸಿದರೆ ಇದರಲ್ಲಿ ಯಾರ್‍ಯಾರ ಹಣೆಬರಹ ಏನಾಗುತ್ತದೋ. ಯಾರ್‍ಯಾರ ಹೆಸರು ಹೊರಗಡೆ ಬರುತ್ತದೆನ್ನುವ ಭಯ ನಿಮ್ಮ ಮನಸ್ಸಿನಲ್ಲಿದೆ. ಆದುದರಿಂದ ಈ ಪ್ರಕರಣವನ್ನು ಇದುವರೆಗೆ ನೀವು ಸಿ.ಬಿ.ಐ.ಗೆ ಹ್ಯಾಂಡ್ ಓವರ್ ಮಾಡಲಿಲ್ಲ. ಒಂದು ಪತ್ರವನ್ನು ಬರೆದಿಲ್ಲ. 5ನೇ ತಾರೀಖು ಪ್ಯಾರಾ 12 ಅಫಿಡವಿಟ್‌ನಲ್ಲಿ ನೀವು ಹೀಗೆ ಹೇಳುತ್ತೀರಿ,:

'To maintain continuity of investigations and ensure that the benefit of such investigation and information so far collected is neither lost nor diluted, the following steps appear to be necessary;

1) That the CBI take over the investigations as expeditiously as possible from the Karnataka agencies so that there will be no vaccum in the interregnum. This step is vitally necessary in order to preserve and promote the efficiency and value of the investigations so far. Karnataka, for its part, will extend the CBI all the co-operation required and share all information and integlliagence gathered by it so far."

ಅಫಿಡವಿಟ್‌ನಲ್ಲಿ ಇಷ್ಟೆಲ್ಲಾ ಹೇಳುತ್ತೀರಿ. ಆದರೆ ಇದುವರೆಗೆ ಸಿ.ಬಿ.ಐ.ಗೆ ನೀವು ಪತ್ರ ಕೊಡಲಿಕ್ಕೆ ಆಗಲಿಲ್ಲ. ಸುಪ್ರೀಂಕೋರ್ಟ್‌ಗೆ ಹಾಜರಾಗುತ್ತೀರಿ. ಆಗ ಸುಪ್ರೀಂಕೋರ್ಟ್ ನಿಮಗೆ ನೋಟಿಸ್

ಇಷ್ಯೂ ಮಾಡಿಲ್ಲ. ಇದರ ಬಗ್ಗೆ ಕೊನೆಯ ಪ್ಯಾರಾದಲ್ಲಿ ಹೀಗೆ ಹೇಳುತ್ತೀರಿ:

> 'Although Karnataka has not been notified of the above peti tion and other allied petitions, in view of the cabinet decision taken on 26.12.2003.it has entered its appearence before this Hon'ble Court. even before notice so that this Hon'ble Court may take note of the stand of the State of Karnataka in dealing with the petitions."

5ನೇ ತಾರೀಖಿಗೆ ಸುಪ್ರೀಂಕೋರ್ಟ್ ನೋಟಿಸ್ ಇಷ್ಯೂ ಮಾಡಲಿಕ್ಕೆ ನಿಮಗೆ ಪ್ರಿಲಿಮನರಿ ಹಿಯರಿಂಗ್ ದಿನಾಂಕವನ್ನು ನಿಗದಿಪಡಿಸಿದ್ದರು. ಹಾಗಾಗಿ ನಿಮಗೆ ಸುಪ್ರೀಂಕೋರ್ಟ್‌ನಿಂದ ಇನ್ನೂ ನೋಟೀಸ್ ಸರ್ವ ಆಗಿರಲಿಲ್ಲ. ಆದರೆ ನೀವು ಆಫಿಡವಿಟ್ ಅನ್ನು ಸುಪ್ರೀಂ ಕೋರ್ಟಿಗೆ ನೀಡಿದ್ದು ವಾಲಂಟರಿಯಾಗಿ ಹೋಗಿ ಅಲ್ಲಿ ಹಾಜರಾಗುತ್ತಿದ್ದೀರಿ ಅಫಿಡವಿಟ್ ಸಲ್ಲಿಸುತ್ತಿದ್ದೀರಿ ಇದು ತಪ್ಪಲ್ಲ. ಸಿ.ಬಿ.ಐ. ತನಿಖೆಗೆ ಈ ಪ್ರಕರಣವನ್ನು ಕೊಡಲಿಕ್ಕೆ ನಾವು ತಯಾರಿದ್ದೇವೆ ಎಂದು ಹೇಳಿದ್ದೀರಿ. ಆದರೂ ಇದುವರೆಗೆ ನೀವು ಸಿ.ಬಿ.ಐ ಅಧಿಕಾರಿಗಳ ಜೊತೆಗೆ ಸಂಪರ್ಕ ಮಾಡಿಲ್ಲ. ಈ ಬಗ್ಗೆ ಸಿ.ಬಿ.ಐ. ಅಧಿಕಾರಿಗಳ ಒಂದು ಸ್ಟೇಟ್‌ಮೆಂಟ್ ಇವತ್ತಿನ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಪುಟ 3 ರಲ್ಲಿ ಮುದ್ರಣವಾಗಿ ಬಂದಿದೆ, ಏನೆಂದರೆ:

> "The Central Bureau of Investigation (CBI) which is expected to start probing the stamp paper racket, may not rely on the extensive investigation done by Karnataka stamp IT and will conduct its own probe.The agencey is currently probing the racket in Gujarat and Andhra pradesh on request by the respective governments. Though Karnataka recently took a decision to refer the case the CBI, it is yet to issue a notification."

ಇದುವರೆಗೆ ನೀವು ನೋಟಿಫಿಕೇಷನ್ ಹೊರಡಿಸಲಿಲ್ಲ, ಸಿ.ಬಿ.ಐ. ಗೆ ಹ್ಯಾಂಡ್ ಓವರ್ ಮಾಡಿಲ್ಲ.ಇದು ನಿಮ್ಮ ಬೋನಾಫೈಡ್ ತೋರಿಸುತ್ತದೆಯೇ ಹೇಗೆ ? ಇದು ಮಾಲಾಫೈಡ್ ತೋರಿಸುತ್ತಿದೆ. ನೀವು ಬಹಿರಂಗವಾಗಿ ಸಾರ್ವಜನಿಕರಿಗೆ ಈ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ಒಪ್ಪಿಸಿದ್ದೇವೆ. ಈ ಬಗ್ಗೆ ಕ್ಯಾಬಿನೆಟ್ ನಿರ್ಣಯವಾಗಿದೆ ನಮ್ಮದೇನೂ ತಪ್ಪಿಲ್ಲ. ಸಿ.ಬಿ.ಐ.ನವರು ತನಿಖೆ ಮಾಡಲಿ ಎಂದು ಹೇಳುವಂತಹುದು. ನಮ್ಮ ಮತ್ತೊಂದು ಕಡೆ ಇದು ಡಿಲೇ ಟ್ಯಾಕ್‌ಟಿಕ್ಸ್ ಈಗ ಸುಪ್ರೀಂ ಕೋರ್ಟಿನಲ್ಲಿ ನಾಲ್ಕುವಾರ ಮುಂದೆ ಹೋಯಿತು. ಎಷ್ಟು ದಿವಸ ಇದು ಡಿಲೇ ಆಗಲಿಕ್ಕೆ ಸಾಧ್ಯವೋ ಅಷ್ಟು ಡಿಲೇ ಮಾಡುವಂಥಾದ್ದು. ನಾನು ಹೇಳುವುದೇನೆಂದರೆ ಸರ್ಕಾರ ಸ್ಪಷ್ಟವಾದ ಒಂದು ಸ್ಪಷ್ಟೀಕರಣವನ್ನು ಕೊಡಲಿ ನಿಮಗೆ ಇರುವಂಥ ತೊಂದರೆ ಏನು? ಇವತ್ತು ನೇರವಾಗಿ ಸಿ.ಬಿ.ಐ.ಗೆ ಹ್ಯಾಂಡ್ ಓವರ್ ಮಾಡಲಿಕ್ಕೆ ನೋಟಿಫಿಕೇಶನ್ ಹೊರಡಿಸಲಿಕ್ಕೆ, ಪತ್ರ ಬರೆಯಲಿಕ್ಕೆ ನಿಮಗೆ ಇರುವಂಥ ಅಡಚಣೆಗಳೇನು, ತೊಂದರೆಗಳೇನು? ನಿಮಗೆ ನಿಜವಾಗಿಯೂ ಬೊನಾಫೈಡ್ ಇದ್ದರೆ 26ನೇ ತಾರೀಖು ಕ್ಯಾಬಿನೆಟ್ ತೀರ್ಮಾನ ನಿಜವಾಗಿಯೂ ಆಗಿದ್ದರೆ, ಅದನ್ನು ಈಗಾಗಲೇ ಇಂಪ್ಲಿಮೆಂಟ್ ಮಾಡುತ್ತಿದ್ದಿರಿ. ಆದರೆ

ಅದು ಇನ್ನೂವರೆಗೂ ಆಗಲಿಲ್ಲ. ಹಾಗಾಗಿ ಇದರಲ್ಲಿ ಕೇವಲ ಡಿಲೇ ಟ್ಯಾಕ್‌ಟಿಕ್ಸ್ ಮಾಡುವಂಥಾದ್ದು ಮತ್ತು ಸಿ.ಬಿ.ಐ.ಗೆ ಹೋಗದೇ ಇರುವಂಥ ಮೊದಲಿನ ಸ್ಟ್ಯಾಂಡ್ ಇದೆಯಲ್ಲಾ, ಇದರಲ್ಲಿ ಯಾರು ಕೆಲವೊಂದು ಭ್ರಷ್ಟ ವ್ಯಕ್ತಿಗಳು ಇದ್ದಾರೆ, ಯಾರು ಕರೀಂಲಾಲ್‌ನ ಜತೆ ಶಾಮೀಲಿದ್ದಾರೆ ಅವರ ರಕ್ಷಣೆ ಮಾಡುವಂಥ ಪ್ರಕ್ರಿಯೆ ಮೊದಲಿನಿಂದಲೂ ಏನು ಇದೆ, ಅದನ್ನೇ ನೀವು ಮುಂದುವರೆಸಿಕೊಂಡು ಹೋಗುತ್ತಿದ್ದೀರಿ. ಹೀಗಾಗಿ ಇದು ನಿಮ್ಮ ಬೊನಾಫೈಡ್‌ನ್ನು ಸಂಶಯದಿಂದ ನೋಡುವುದಕ್ಕೆ ಕಾರಣವಾಗುತ್ತದೆ. ಮತ್ತೊಂದು ಮಾತನ್ನು ಇಲ್ಲಿ ನಾನು ಹೇಳುತ್ತಿದ್ದೇನೆ. ಇವತ್ತು ಇದರ ಬಗ್ಗೆ ವಿಚಾರಣೆ ಸಲುವಾಗಿ ತಾವು ಸ್ಪೆಷಲ್ ಕೋರ್ಟ್‌ನ್ನು ಮಾಡಿದ್ದೀರಿ. ಈ ಸ್ಪೆಷಲ್ ಕೋರ್ಟ್‌ನ್ನು ಯಾವಾಗ ನೀವು ಅನೌನ್ಸ್ ಮಾಡಿದ್ದು? ನವೆಂಬರ್ 22, 2003 ಇದು ಜಡ್ಜ್ ಅವರನ್ನು ನೇಮಕ ಮಾಡಿರುವಂಥಾದ್ದು. ಅದಕ್ಕಿಂತ ಮುಂಚೆ ಫೆಬ್ರವರಿ 15, 2001 ರಂದು ನಿಮ್ಮ ಸರ್ಕಾರದ ಆಜ್ಞೆ ಹೊರಟಿದೆ. ನಿಮ್ಮ ಸರ್ಕಾರದ ಆಜ್ಞೆ ಪ್ರಕಾರ ಎಲ್‌ಎಡಬ್ಲ್ಯೂ 347 ಎಲ್‌ಸಿಎ ಅದರ ಪ್ರಕಾರ 15ನೇ ಫೆಬ್ರವರಿ 2001ರಂದು ವಿಶೇಷ ನ್ಯಾಯಾಲಯ ಸ್ಥಾಪನೆ ಮಾಡುವುದಕ್ಕೆ ಆಜ್ಞೆ ಆಗಿತ್ತು. ಆಮೇಲೆ ಸ್ಪೆಷಲ್ ಕೋರ್ಟ್‌ನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದು ಯಾವಾಗ? ನೀವು ಹೈಕೋರ್ಟಿಗೆ ಬರೆದು ಅವರು ಸ್ಪೆಷಲ್ ಜಡ್ಜ್‌ನ್ನು ನೇಮಕಮಾಡಿ ಅದು ಅನುಷ್ಟಾನಕ್ಕೆ ಬಂದಿದ್ದು ಯಾವಾಗ? ಅದು ಆಗಿದ್ದು ನವೆಂಬರ್ 22, 2003ಕ್ಕೆ 2001 ಎಲ್ಲಿ, 2003ರ ನವೆಂಬರ್ 22 ಎಲ್ಲಿ? ಅಂದರೆ ಒಂದೊಂದು ಸ್ಪೆಷಲ್ ಕೋರ್ಟನ್ನು ಸ್ಥಾಪನೆ ಮಾಡುವುದು ಅದಕ್ಕೊಬ್ಬರು ನ್ಯಾಯಾಧೀಶರನ್ನು ನೇಮಕ ಮಾಡುವುದು, ಇದೆಲ್ಲಾ ಪ್ರಕ್ರಿಯೆ ಮಾಡಲಿಕ್ಕೆ ನಿಮಗೆ ಎರಡೂವರೆ ವರ್ಷ ಬೇಕು. ಅಂದರೆ ಸರ್ಕಾರ ಅನ್ನುವಂಥಾದ್ದು ಇದೆಯಾ ಎಂದು ನಾನು ಕೇಳುತ್ತಿದ್ದೇನೆ. ಇಂತಹ ಗುರುತರವಾದ ಆಪಾದನೆಗಳು ಇರುವಂತಹ, ಭ್ರಷ್ಟಾಚಾರದ ದೊಡ್ಡ ಹಗರಣ ಇರುವಾಗ ಇದರ ಬಗ್ಗೆ ವಿಶೇಷ ನ್ಯಾಯಾಲಯ ಮಾಡುತ್ತೇವೆ ಎಂದು ಹೇಳುವುದು. ಸಾರ್ವಜನಿಕರಿಗೂ ಅನ್ನಿಸಿರಬೇಕು, ಹೌದಪ್ಪ ಏನೋ ಮಾಡುತ್ತಿದ್ದಾರೆ. ವಿಶೇಷ ನ್ಯಾಯಾಲಯವನ್ನು ಮಾಡುತ್ತಿದ್ದಾರೆ. ಪಾಪ, ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಆದರೆ ಪ್ರತಿಪಕ್ಷದವರು ಸುಮ್ಮನೆ ಏನೇನೋ ಹೇಳಿಕೊಳ್ಳುತ್ತಾ ಹೋಗಿದ್ದಾರೆ ಎಂದು ಸಾರ್ವಜನಿಕರು ಕಲ್ಪನೆ ಮಾಡಿಕೊಂಡು ಹೋಗುವುದು. ಆದರೆ ಇಲ್ಲಿ ನೋಡಿದರೆ ಏನೇನೂ ಇಲ್ಲ. ಇಷ್ಟೆಲ್ಲಾ ಆದಮೇಲೆ ಹೋಗಲಿ, ವಿಶೇಷ ನ್ಯಾಯಾಲಯದ ಹಣೆಬರಹವಾದರೂ ಏನಾಗಿದೆ? ನವೆಂಬರ್ ಆದಮೇಲೆ ಒಬ್ಬರು ಡಿಸ್ಟ್ರಿಕ್ಟ್ ಜಡ್ಜ್ ಲೆವಲ್‌ನ, ಆ ಸ್ಟೇಟಸ್ ಇರತಕ್ಕಂಥ ಶ್ರೀ ಮನೋಳಿ ಅನ್ನುವಂಥ ಒಬ್ಬ ನ್ಯಾಯಾಧೀಶರನ್ನು ನೇಮಕ ಮಾಡಿದರು. ಅವರು ಬಹಳ ಒಳ್ಳೆಯವರು ಇದ್ದಾರೆ. ಈ ನೇಮಕವಾದ ಮೇಲೆ ಇವತ್ತು ಪರಿಸ್ಥಿತಿ ಹೇಗೆ ಇದೆಯೆಂದರೆ, ಅವರಿಗೆ ಇವತ್ತಿಗೂ ಒಂದು ಹಿಯರಿಂಗ್ ಕೂಡ ಮಾಡುವುದಕ್ಕೆ ಆಗಲಿಲ್ಲ. ಏಕೆಂದರೆ ಅವರ ಕೈಯಲ್ಲಿ ಸಿಬ್ಬಂದಿನೇ ಇಲ್ಲ. ಅವರಿಗೆ ಸಿಬ್ಬಂದಿ ಕೊಡುವ ಬಗ್ಗೆ ಒಂದು ಆರ್ಡರ್‌ನ್ನು ಮಾಡಿದ್ದರು. ಸಿಬ್ಬಂದಿ ಎಂದರೆ ಜುಡಿಶಿಯರಿಯಲ್ಲಿ ಅನುಭವ ಇದ್ದಂಥ ಸಿಬ್ಬಂದಿಯ ನೇಮಕ ಆಗಬೇಕು. ಆದರೆ ಇವರು ಏನೋ ನ್ಯಾಯಾಲಯ ಅಂತ ಮಾಡಿ ಒಂದಿಷ್ಟು ಮಂದಿಯನ್ನು ತುರುಕಿಬಿಟ್ಟರು. ಅವರು ಯಾವ್ಯಾವುದೋ ಡಿಪಾರ್ಟ್‌ಮೆಂಟ್‌ನವರು. ಅವರಿಗೇನೂ ಆ ಜುಡಿಶಿಯರಿಯ ವ್ಯವಹಾರಗಳು ಗೊತ್ತಿಲ್ಲ, ಜಯಡಿಶಿಯರಿಯದ್ದು ಎ.ಬಿ.ಸಿ.ಡಿ. ಗೊತ್ತಿಲ್ಲ. ಪ್ಲೆಂಟ್ ಎಂದರೆ ಗೊತ್ತಿಲ್ಲ, ಆಫಿಡಿವಿಟ್ ಎಂದರೆ ಗೊತ್ತಿಲ್ಲ ಯಾವ ಕಾಗದವನ್ನು ಯಾವ ಫೈಲಿನಲ್ಲಿ ಇಡಬೇಕೆಂದು ಗೊತ್ತಿಲ್ಲ. ಇಂತಹ ಸಿಬ್ಬಂದಿಯನ್ನು ತೆಗೆದುಕೊಂಡು ಹೋಗಿ ಅಲ್ಲಿಗೆ ಹಾಕಿದರು.

ಅಂದರೆ ನಿಮ್ಮ ಬೋನಾಫೈಡ್ ಏನು ಅಂತ? ಇದಕ್ಕೆ ನವೆಂಬರ್ 21ಕ್ಕೆ ಒಂದು ಆರ್ಡರ್‌ನ್ನು ಮಾಡುತ್ತೀರಿ. Government of Karnataka, Stores Purchase Department, Directorate of Stores Purchase." ಇಲ್ಲಿ ಏನು ಹೇಳುತ್ತಾರೆ?

"With reference to the above subject and references cited above, the following officials are sent on deputation to the special Court to try fake stamp papers, As per Government Orders cited above, they are relieved to - day. They are directed to report to the above itself on 21.11.2003."

ಎಷ್ಟೆಂದರೆ ಒಂಬತ್ತು ಜನ ಗೋವಿಂದರಾಜು, ಮಂಜುನಾಥ ಅಂತ ಹೀಗೆ ಒಂಬತ್ತು ಜನರನ್ನು ನೀವು ನೇಮಕ ಮಾಡುತ್ತೀರಿ. ಆಮೇಲೆ ಅಲ್ಲಿ ಹೇಳುತ್ತೀರಿ.....

"The above-mentioned officials are instructed to report immedicatly to the Special Court to try fake stamp papers."

ಇವರು ಸ್ಟೋರ್ಸ್ ಪರ್ಚೇಸ್ ಡಿಪಾರ್ಟ್‌ಮೆಂಟ್‌ನವರು. ಇವರಿಗೆ ಜುಡಿಶೀಯರಿ ಬಗ್ಗೆ ಎ.ಬಿ.ಸಿ.ಡಿ. ಗೊತ್ತಿಲ್ಲ. ನಿಮಗೆ ಜುಡಿಷಿಯರಿಯಲ್ಲಿ ಸಿಬ್ಬಂದಿ ಸಿಗಲಿಲ್ಲವೇ ಹೇಗೇ? ನಿಮಗೆ ಅಷ್ಟೊಂದು ಕೊರತೆಯಾ? ಇದೊಂದು ವಿಶೇಷ ಪ್ರಕರಣ. ಬೇಕಾದರೆ ಬೇರೆ ಒಂದೆರಡು ಕೋರ್ಟುಗಳು ತಮ್ಮ ಕೆಲಸವನ್ನು ನಿಲ್ಲಿಸಲಿ. ಒಂದಿಷ್ಟು ಕೇಸುಗಳು ಒಂದು ವರ್ಷ ನಿಂತರೆ ಏನೂ ಆಗುವುದಿಲ್ಲ. ಎಷ್ಟೋ ಸಿವಿಲ್ ಕೋರ್ಟ್, ಮುನ್ಸಿಫ್ ಕೋರ್ಟುಗಳು ಖಾಲಿ ಇವೆ. ಸಿಬ್ಬಂದಿ ಕೊರತೆಯಿಂದ, ಟೈಪಿಸ್ಟ್ ಕೊರತೆಯಿಂದ ಇವತ್ತು ಅಲ್ಲಿ ಕೆಲಸ ನಡೆಯುತ್ತಿಲ್ಲ. ಇನ್ನೂ ಒಂದೆರಡು ಕೋರ್ಟುಗಳು ಬಂದ್ ಆಗಿದ್ದರೂ ತೊಂದರೆ ಏನೂ ಆಗುತ್ತಿರಲಿಲ್ಲ. ಆ ಸ್ಟೋರ್ ಪರ್ಚೇಸ್ ಇಲಾಖೆಯಲ್ಲಿ ಇದ್ದಂಥವರನ್ನು, ಜುಡಿಶಿಯರಿ ಬಗ್ಗೆ ಎ.ಬಿ.ಸಿ.ಡಿ. ಗೊತ್ತಿಲ್ಲದಂಥವರನ್ನು ಆ ಸಿಬ್ಬಂದಿಯನ್ನು ನೀವು ಪಾಪ, ವಿಶೇಷ ನ್ಯಾಯಾಧೀಶರಿಗೆ ಕೊಟ್ಟರೆ ಅವರ ಹಣೆಬರಹ ಏನಾಗಬೇಕು? ನ್ಯಾಯಾಧೀಶರಿಗೆ ಮುಂಜಾನೆಯಿಂದ ಸಂಜೆಯವರೆಗೆ ಅವರಿಗೆ ತರಬೇತಿ ಕೊಡುವುದೇ ಆಗುತ್ತದೆ. ಈ ಸ್ಪೆಷಲ್ ಕೋರ್ಟ್ ಕೇಸುಗಳನ್ನು ನಡೆಸುವುದಿಲ್ಲ. ಅದರ ಬದಲು ಆ ಸಿಬ್ಬಂದಿಗೆ ಟ್ರೈನಿಂಗ್ ಕೊಡುವುದು ಅಲ್ಲಿ ಚಾಲೂ ಆಗುತ್ತದೆ. ಇಷ್ಟು ಹಣೆ ಬರಹ ನಿಮ್ಮ ಸ್ಪೆಷಲ್ ಕೋರ್ಟಿನದ್ದು. ಇವತ್ತು ಆ ಕೋರ್ಟಿನಲ್ಲಿ ಮಾನ್ಯ ಮನೋಳಿ ಅವರು ಒಬ್ಬರೇ ಕುಳಿತಿದ್ದಾರೆ. ಇವತ್ತು ಯಾರಾದರೂ ಒಬ್ಬರು ಹೋಗಿ ನೋಡಿ. ಅವರು ಕೋರ್ಟಿಗೆ ಬರುತ್ತಾರೆ, ತಮ್ಮ ಕಚೇರಿಗೆ ಬರುತ್ತಾರೆ ಮತ್ತು ಹೋಗುತ್ತಾರೆ. ಒಂದು ಫೈಲ್ ತರಲಿಕ್ಕೆ ಒಬ್ಬ ಸಿಬ್ಬಂದಿಯೂ ಅವರ ಕೈಯಲ್ಲಿ ಇಲ್ಲ. ಇವತ್ತು ಆ ಸಿಬ್ಬಂದಿ ಎಲ್ಲಾ ವಾಪಸ್ಸು ಹೋಗಿದ್ದಾರೆ. ನಮಗೆ ಇಲ್ಲಿ ಅನುಭವ ಇಲ್ಲ, ನಮಗೇನೂ ಗೊತ್ತಿಲ್ಲ ಅಂತ ಹೇಳಿ ಆ ಒಂಬತ್ತು ಮಂದಿ ಸಿಬ್ಬಂದಿಯೂ ನಮಗೆ ಈ ನೌಕರಿ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿ ವಾಪಸ್ಸು ಹೋಗಿದ್ದಾರೆ, ಹಾಗಂತ ಅವರು ಬರೆದು ಕೊಟ್ಟಿದ್ದಾರೆ. ಅಂದರೆ ನಿಮ್ಮದು ಏನು ಪರಿಸ್ಥಿತಿ? ನಿಮ್ಮ ಸರ್ಕಾರ ಯಾವ ರೀತಿ ನಡೆಯುತ್ತಿದೆ? ಹೀಗಾಗಿ ನಿಮ್ಮ ಸರ್ಕಾರದ ನಡವಳಿಕೆ ಏನಿದೆಯಲ್ಲಾ, the conduct of your behaviour, ಇದು ಏನು ತೋರಿಸುತ್ತದೆ ಎಂದೆ ನಿಮಗೆ ಇದರ ಬಗ್ಗೆ ಯಾವುದಕ್ಕೂ ನಂಬಿಕೆ ಇಲ್ಲ. ಸುಮ್ಮನೆ ಈ ಕಡೆ ಒತ್ತಾಯ ಮಡುತ್ತಿದ್ದಾರೆ, ಇದಕ್ಕೆ ಏನೋ ಒಂದು ಮಾಡಿದ ಹಾಗೆ

ಮಾಡುವುದು. ನಮ್ಮ ಕಡೆ ಹಾಡುವ ದೇವರ ಕಾಟ ಅಂತ ಹೇಳುತ್ತಾರೆ ಹಾಗಾಗಿದೆ ಈ ಪರಿಸ್ಥಿತಿ ಇವತ್ತು ಒತ್ತಾಯ ಮಡುತ್ತಿದ್ದಾರೆ, ಇದಕ್ಕೆ ಏನೋ ಒಂದು ಮಾಡಬೇಕು. ಇದು ನಡೆಯುತ್ತಿದೆ. ಆದ್ದರಿಂದ ಇವತ್ತು ಸರ್ಕಾರದ ಬೋನಾಫೈಡ್ ಬಗ್ಗೆ ನಮಗೆ ಸಂದೇಹ ಇದೆ. ಈ ಎಲ್ಲಾ ವ್ಯಕ್ತಿಗಳನ್ನು ರಕ್ಷಣೆ ಮಾಡುವಂಥ ಕೆಲಸ ಸರ್ಕಾರದ ಕಡೆಯಿಂದ ಆಗುತ್ತಿದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿದ್ದೇನೆ. ಇನ್ನೊಂದು ಇಲ್ಲಿ ಬಹಳ ಮುಖ್ಯವಾದದ್ದು ಎಂದರೆ ಇವತ್ತು ಇಡೀ ದೇಶದಲ್ಲಿ ಈ ಪ್ರಕರಣ ನಡೆದಿದೆ. ಮಹಾರಾಷ್ಟ್ರದಲ್ಲಂತೂ ಇದರ ಬಗ್ಗೆ ಬಹಳ ತ್ವರಿತಗತಿಯಿಂದ ವಿಚಾರಣೆ ನಡೆಯುತ್ತಿದ್ದು ಕೆಲವೊಂದು ಶಾಸಕರು ಮಾತ್ರವಲ್ಲ ಮುಂಬೈನ ಪೋಲೀಸ್ ಆಯುಕ್ತರೇ ಇವತ್ತು ವಿಚಾರಣೆಗೆ ಒಳಪಟ್ಟಿದ್ದಾರೆ ಅಂಥಾದ್ದು ಇಲ್ಲಿ ಏನೂ ನಡೆದಿಲ್ಲ. ಏನೋ ಸಣ್ಣಪುಟ್ಟ ವ್ಯಕ್ತಿಗಳನ್ನು ಅರೆಸ್ಟ್ ಮಾಡುವಂಥಾದ್ದು, ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂಥಾದ್ದು, ಕ್ರಿಮಿನಲ್ ಕೇಸ್ ಹಾಕುವಂಥದ್ದು ನಡೆಯುತ್ತಿದೆ. ತಿಮಿಂಗಿಲಗಳು ಇದ್ದಾವೆ. ಅವು ಇನ್ನೂ ಸಿಕ್ಕಿಲ್ಲ. ಮಹಾರಾಷ್ಟ್ರದಲ್ಲಿ ಅವೆಲ್ಲಾ ಸಿಗ್ತಾ ಇವೆ. ಅಲ್ಲಿ ಏಕೆ ಹಾಗೆ ಮತ್ತು ಇಲ್ಲಿ ಏಕೆ ಹೀಗೆ ಎನ್ನುವಂಥಾದ್ದು ಇವತ್ತು ವಿಚಾರ ಆಗಬೇಕಾಗುತ್ತದೆ. ಇಲ್ಲಿ ಮತ್ತೊಂದು ವಿಷಯವನ್ನು ನಾನು ಹೇಳುತ್ತಿದ್ದೇನೆ. ಈ ರೀತಿ ಮಹಾರಾಷ್ಟ್ರದಲ್ಲಿ ತ್ವರಿತಗತಿಯಿಂದ ತನಿಖೆ ನಡೆಯುತ್ತಿದೆ. ಮತ್ತೆ ಆಂಧ್ರ ಪ್ರದೇಶದಲ್ಲೂ ಇದರ ಬಗ್ಗೆ ಪ್ರಕರಣಗಳು ದಾಖಲಾಗಿವೆ. ಹಗೆಯೇ ಇನ್ನು ಹಲವಾರು ರಾಜ್ಯಗಳಲ್ಲಿ ಗುಜರಾತ್ ಇರಬಹುದು, ಪಶ್ಚಿಮ ಬಂಗಾಳ ಇರಬಹುದು, ಅಲ್ಲಿ ಇವತ್ತು ಕೇಸ್‌ಗಳು ಫೈಲ್ ಆಗಿವೆ. ಆಯಿತು. ಈ ರೀತಿ ಕೇಸುಗಳು ಫೈಲ್ ಆದಮೇಲೆ ಇವತ್ತು ಕರೀಮಲಾಲ್‌ನನ್ನು ಬೇರೆಬೇರೆ ಕಡೆಗೆ ವಿಚಾರಣೆಗಾಗಿ ಕರೆದುಕೊಂಡು ಹೋಗಬೇಕಾಗುತ್ತದೆ. ಅವನು ನಿಮ್ಮ ರಾಜ್ಯದ ಸ್ವತ್ತು ಅಲ್ಲ. ಅವನನ್ನು ಬೇರೆ ಬೇರೆ ಕಡೆಗೆ ವಿಚಾರಣೆಗೆ ಬಿಡಬೇಕಾಗುತ್ತದೆ. ಅಂದರೆ ನಿಜವಾದ ಅಂಶಗಳು ಹೊರಬರಲಿಕ್ಕೆ ಸಾಧ್ಯವಿದೆ. ಆದರೆ ನಿಮ್ಮ ಸರ್ಕಾರ ಹೇಗೆ ತಿಳಿದುಕೊಂಡಿದೆ ಎಂದರೆ, ಆ ಕರೀಂಲಾಲ್ ರಾಜ್ಯ ಬಿಟ್ಟು ಎಲ್ಲಿಯಾದರೂ ಹೋದರೆ ನಮ್ಮ ರಾಜ್ಯದವರದ್ದು ಏನಾದರೂ ಹಣೆಬರಹ ಹೊರಗೆ ಬರುತ್ತದೆ ಅಂತಹೇಳಿ. ಹೀಗಾಗಿ ಅವನನ್ನು ಬಿಡುವುದಕ್ಕೆ ನೀವು ತಯಾರಿಲ್ಲ. ಅವನು ನಿಮ್ಮ ಕಸ್ಟಡಿಯೊಳಗೇ ಇರಬೇಕು, ನಿಮ್ಮ ರಾಜ್ಯದಲ್ಲೇ ಉಳಿಯಬೇಕು ಅಂತ ಅವನನ್ನು ಹೊರಗೆ ಬಿಡಲಿಕ್ಕೆ ನೀವು ತಯಾರಿಲ್ಲ. ಇವತ್ತು ಏನಾಗಿದೆ ಎಂದರೆ ಕ್ರಿಮಿನಲ್ ಪ್ರೊಸಿಜರ್ ಕೋಡ್ 268ರ ಪ್ರಕಾರ ಇವತ್ತು ಒಂದು ಆರ್ಡರ್‌ನ್ನು ಹೊರಡಿಸಿದ್ದೀರಿ. ಈ 268 ಏನು ಹೇಳುತ್ತದೆ?

Power of State Government to exclude certain persons from operation of Section 267."

267 ಏನು ಹೇಳುತ್ತದೆ?

"Power to require attendance prisoners: Wherever in the course of an enquiry, trial or other proceedings under this Code, it appears to a Criminal Court that a person confined or detained in a prison should be brought before the Court for answering to a charge of an offence or for the purpose of any proceedings against him that it is necessary for the ends of justice to examine such person as a witness"

ಅಂದರೆ ಬೇರೆ ಕೋರ್ಟಿನಲ್ಲಿ ಹೋಗಲಿಕ್ಕೆ ಅವಕಾಶ ಇದೆ. ಆದರೆ ಇವತ್ತು ನೀವು ಏನು ಮಾಡಿದ್ದೀರಿ? ಸೆಕ್ಷನ್ 267 ರ ಪ್ರಕಾರ ಇರುವಂತಹ ಹಕ್ಕು ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಬೇರೆ ಬೇರೆ ರಾಜ್ಯಗಳಿಗೆ ಏನು ಸಿಕ್ಕಿದೆ ಆ ಹಕ್ಕನ್ನೇ ಮೊಟಕುಗೊಳಿಸುವಂಥ ಕೆಲಸವನ್ನು ನೀವು ಮಾಡಿದ್ದೀರಿ. ಇವತ್ತು ಸೆಕ್ಷನ್ 267ರ ಪ್ರಕಾರ ಏನು ಹೇಳುತ್ತದೆ?

"The State Government may at any time, having regards to the matters specified in sub-section (2) by general or special order, direct that any person or class of persons shall not be removed from the prison in which he or they may be confined or detained and there upon; So long as the order remains in force, no order made under Section 267 whether before or after the order of the State Government shlal have effect in respect of such person or class of persons."

12.00 ಪಿ.ಎಂ

ಸೆಕ್ಷನ್ 267 ಪ್ರಕಾರ ಆರ್ಡರ್ ಮಾಡುತ್ತಾರೆ. ಅದು ಏನೆಂದರೆ, ನೀವು ಏನು ಆರ್ಡರ್ ಮಾಡಿದ್ದೀರಿ, ಅದರ ಬಗ್ಗೆ ಹೇಳುತ್ತೇನೆ.

Before making an order under sub-section (1), the State Government shall having regard to the following matters, namely:

(a) The nature of the offence for which, or the grounds on which, the person or class of persons has been ordered to be confined or detained in prison.

(b) The likelihood of the disturbance of public order if the person or class of persons is allowed to be removed from the prison;

(c) The public interest, generally.

ಅಂತ ಹೇಳುತ್ತಾರೆ. ಇನ್ನೊಂದು ಹೇಳುತ್ತಾರೆ, the public interest, generally ಅಂದರೆ, ಈತನನ್ನು ಬೇರೆ ರಾಜ್ಯಕ್ಕೆ ಬೇರೆ ಕೋರ್ಟಿನ ವಿಚಾರಣೆಗೆ ಕಳುಹಿಸಿದರೆ ಏನಾದರೂ public distubance ಆಗುವಂತಾದ್ದು ಇದೆ ಏನೋ ಏಕೆ; ಈ ಸೆಕ್ಷನ್ 268 provision invoke ಮಾಡಿದಿರಿ ಎನ್ನುವಂತಾದ್ದು. ಇಲ್ಲಿ ಆರ್ಡರ್ ಮಾಡಿದಿರಿ ತಾವು. ಫೆಬ್ರವರಿ 21–2–2003ರಲ್ಲಿ ರಾಜ್ಯ ಸರ್ಕಾರ ಒಂದು ಆಜ್ಞೆ ಮಾಡುತ್ತದೆ.

"Now therefore considering the entire matter and having regard to the provisions of the Section 268 of the Code of Criminal Procedure 1973, the Government of Karnataka is satisfied that the accused Abdul Karim Telgi should not be removed from the Bangalore Central Prison, Parappana Agrahara, where he is confined now. Now, therefore in exercise of the powers conferred by the Section 268 of the

Code of Criminal Procedure, the Government of Karnataka hereby direct that the accused Abdul Karim Telgi with ETP No. 4148 confined at the Central Prision, Parappana Agrahara, Bangalore shall not be removed from the prision in which he is now confined, so long as this order is in force."

ಈ ಆರ್ಡರ್ ಇಲ್ಲಿಯವರೆಗೂ ಫೋರ್ಸ್‌ನಲ್ಲಿದೆ. ಸೆಕ್ಷನ್ 268 ಪ್ರಕಾರ ನೀವು ಅಧಿಕಾರವನ್ನು ಉಪಯೋಗ ಮಾಡಿ ಈ ಆರ್ಡರ್ ಹೊರಡಿಸಿದಿರಿ. ಅಂದರೆ ಈ ಕರೀಂಲಾಲನನ್ನು ನೀವು ಕರ್ನಾಟಕ ರಾಜ್ಯ ಬಿಟ್ಟು ಬೇರೆ ಎಲ್ಲಿಯೂ ಕಳುಹಿಸುವಂತಿಲ್ಲ. ಆದರೆ 267ರಲ್ಲಿ ಏನು ಕಾರಣಗಳು ಇವೆ? ಏನಾದರೂ ಪಬ್ಲಿಕ್ ಡಿಸ್ಟರ್‌ಬೆನ್ಸ್, ಪೀಸ್ ಡಿಸ್ಟರ್‌ಬೆನ್ಸ್, ಇದ್ದಾಗ ಕಳುಹಿಸುವುದಕ್ಕೆ ಬರುವುದಿಲ್ಲ. ಈ ಒಂದು ಸೆಕ್ಷನ್ ಅನ್ನು ನೀವು ಅಡಾಪ್ಟ್ ಮಾಡಿಕೊಳ್ಳಬೇಕಾಗುತ್ತದೆ. ಆದರೆ ಯಾವುದೇ ಕಾರಣ ಇಲ್ಲದೆ, ಇವತ್ತು ಸೆಕ್ಷನ್ 268ರ ಪ್ರಕಾರ ಅವನನ್ನು ಕನ್‌ಫೈನ್ ಮಾಡಿದಿರಿ. ನಿಮ್ಮ ಕರ್ನಾಟಕ ರಾಜ್ಯಕ್ಕೆ ಮಾತ್ರ ಕನ್‌ಫೈನ್ ಮಾಡಿದಿರಿ ಇದರ ಮೇಲೆ ಸಂಶಯಗಳು ಶುರುವಾಗುತ್ತವೆ. ಬೇರೆ ಕೋರ್ಟಿನ ಆರ್ಡರ್‌ಗಳು ಬಂದರೆ, ಬೇರೆ ರಾಜ್ಯದವರು ನಾವು ಇನ್‌ವೆಸ್ಟಿಗೇಶನ್ ಮಾಡುತ್ತೇವೆಂದರೆ ನಮ್ಮ ವಶಕ್ಕೆ ಕೊಡಿ ಎಂದು ಹೇಳಿದರೆ ಅವನನ್ನು ಕೊಡಲಿಕ್ಕೆ ಆಗುವುದಿಲ್ಲವೆಂದು ಹೇಳುತ್ತಿದ್ದೀರಿ. ಅಂದರೆ ಇದರ ಅರ್ಥವೇನು? ಆ ಕರೀಂಲಾಲ ಬೇರೆ ರಾಜ್ಯದ ಇನ್‌ವೆಸ್ಟಿಗೇಶನ್ ಆಫೀಸರ್ ಕೈಯಲ್ಲಿ ಸಿಕ್ಕರೆ, ಇನ್‌ವೆಸ್ಟಿಗೇಶನ್ ಆದರೆ ಹಲವಾರು ವಿಷಯಗಳು ಬೆಳಕಿಗೆ ಬರಬಹುದು, ರಾಜ್ಯ ಸರ್ಕಾರದ ಅಧಿಕಾರಿಗಳು ಅಥವಾ ಉನ್ನತ ಮಟ್ಟದ ಮಂತ್ರಿಗಳು ಇರಬಹುದು, ಅಥವಾ ಇನ್ನಿತರೆ ರಾಜಕಾರಣಿಗಳು ಇವರುಗಳ ಹೆಸರುಗಳು ಹೊರಗೆ ಬರಬಹುದು ಎನ್ನುವಂತಹ ಹೆದರಿಕೆ ನಿಮಗೆ ಇದೆ. ಅದಕ್ಕಾಗಿ ಕರೀಂಲಾಲನನ್ನು ನಿಮ್ಮ ರಾಜ್ಯದಿಂದ ಹೊರಗೆ ಕಳುಹಿಸಲಿಕ್ಕೂ ಸಹ ಕಾನೂನಿನ ಒಂದು ರಕ್ಷಣೆಯನ್ನು ನೀವು ತೆಗೆದುಕೊಳ್ಳುತ್ತಿದ್ದೀರಿ. ಹೀಗಾಗಿ ಇದರ ಮೇಲೆ ಏನು ತೋರಿಸುತ್ತದೆ, ಒಂದು ಸಿ.ಬಿ.ಐ. ವಿಚಾರಣೆಗೆ ಒಲ್ಲೆ ಅಂದಿರಿ. ಈಗ ಆ ಕರೀಂಲಾಲನನ್ನು ಹೊರಗೆ ಕಳುಹಿಸುವುದಕ್ಕೆ ತಯಾರಿಲ್ಲ. ಇದು ಏನಾಗುತ್ತದೆ. ಅಂದರೆ ಇವತ್ತು ಎಲ್ಲಾ ರೀತಿಯಿಂದ, ಆತ ಯಾವುದೇ ರೀತಿಯಿಂದ ಬಾಯಿ ಬಿಡಬಾರದು ಎಲ್ಲಿಯೂ ಯಾವುದೇ ಇನ್‌ವೆಸ್ಟಿಗೇಶನ್ ಅಥಾರಿಟಿಗೆ ಸಿಗಬಾರದು ಎನ್ನುವಂತಾದ್ದು ನಿಮ್ಮದು ಏನು ಇದೆ ಇದು ಮಾಲಾಫೈಡಿನೆಸ್ ತೋರಿಸುತ್ತದೆ. ಹೀಗಾಗಿ ಈ ಒಂದು ಭ್ರಷ್ಟ ವ್ಯವಸ್ಥೆಯನ್ನು ರಕ್ಷಣೆ ಮಾಡುವಂತಹ ಕೆಲಸವನ್ನು ರಾಜ್ಯ ಸರ್ಕಾರ ಮಡುತ್ತಿದೆ ಎಂದು ನಾನು ನೇರವಾಗಿ ಆರೋಪವನ್ನು ಮಾಡುತ್ತಿದ್ದೇನೆ. ಇದೆಲ್ಲಾ ನಿಮ್ಮ ಕಂಡೆಕ್ಟ್ ಇನ್ನೊಂದು ಇಲ್ಲಿ ಪ್ರಮುಖವಾದಂತಾದ್ದು, ನಾವು ಕಳೆದು ಎರಡು ವರ್ಷಗಳಿಂದ ಆಪಾದನೆ ಮಾಡುತ್ತಿದ್ದೇವೆ. ಏನೆಂದರೆ ಈ ಕರೀಂಲಾಲ ಜೈಲಿನಲ್ಲಿದ್ದಾಗಲೂ ಸಹ ಆತನಿಗೆ ಒಬ್ಬ ಸಾಮಾನ್ಯ ಮನುಷ್ಯ. ಆತ ಇವತ್ತು ಹೊರಗಡೆ ಇದ್ದ ಹಾಗೆ ಎಲ್ಲಾ ಲಗ್ಸುರೀಯಸ್ ಫೆಸಿಲಿಟೀಸ್ ಸಿಗುವಂತಾದ್ದು, ನಡೆಯುತ್ತಿದೆ. ಇವತ್ತು ಅತ ಜೈಲಿನಲ್ಲಿದ್ದಾಗಲೂ ಸಹ ಮೊಬೈಲ್ ಫೋನ್ ಕೊಟ್ಟಿದ್ದೀರಿ. ಮೊಬೈಲ್ ಫೋನ್ ಸರ್ವೀಸ್, ಆ ಮೊಬೈಲ್ ಮೂಲಕ ಆತ ಅಲ್ಲೇ ಕುಳಿತು ಸಾಕಷ್ಟು ವ್ಯವಹಾರ ಮಾಡಿದ್ದಾನೆ. ಆತನಿಗೆ ದಿನನಿತ್ಯ ಸ್ಟಾರ್ ಹೋಟೇಲ್‌ನಿಂದ ಊಟ. ಆಮೇಲೆ ಆತನಿಗೆ ಕಲರ್ ಟಿ.ವಿ. ಫೆಸಿಲಿಟಿ. ಇದು ಯಾರಾದರೂ ಅಪರಾಧಿಗೆ ಕೊಡುವಂತಹ ಪ್ರಾವಿಜನ್ ಇದೆಯೋ ಎಂದು ಕೇಳುತ್ತಿದ್ದೇನೆ ಅವನಿಗೆ ಏಕೆ ಇಷ್ಟೆಲ್ಲಾ

ಫೆಸಿಲಿಟಿಸ್ ಇದೆಯೆಂದು ನಾನು ರಾಜ್ಯ ಸರ್ಕಾರಕ್ಕೆ ಕೇಳುತ್ತಿದ್ದೇನೆ. ಆತನಿಗೆ ಏಕೆ ಇಷ್ಟೆಲ್ಲಾ ಫೆಸಿಲಿಟೀಸ್ ಕೊಟ್ಟಿರಿ? ಆತ ದೊಡ್ಡ ವಿ.ಐ.ಪಿ. ದೊಡ್ಡ ಪೊಲಿಟಿಕಲ್ ಪ್ರಿಜನರ್ ಅಥವಾ ಮತ್ಯಾನೇದಾರೂ ಇದ್ದಾನೆಯೇ? ಏಕೆ ಇದೆಲ್ಲ ಫೆಸಿಲಿಟೀಸ್? ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ? ಸರ್ಕಾರ ಇಲ್ಲ ಎಂದು ಹೇಳಲಿ. ನಾವು ಮೊಬೈಲ್ ಫೋನ್ ಸರ್ವೀಸ್ ಕೊಟ್ಟರಲಿಲ್ಲ. ಕಲರ್ ಟಿ.ಬಿ. ಫೆಸಿಲಿಟಿ ಕೊಟ್ಟಿರಲಿಲ್ಲ. ಅವನಿಗೆ ಹೊರಗಡೆಯಿಂದ ಊಟ ತರಿಸಿ ಕೊಡುತ್ತಿರಲಿಲ್ಲವೆಂದು ಸರ್ಕಾರ ಇದರ ಬಗ್ಗೆ ಸ್ಪಷ್ಟೀಕರಣ ಕೊಡಲಿ. ಸರ್ಕಾರದವರು ಇದರ ಬಗ್ಗೆ ಏನು ಹೇಳುತ್ತಾರೆ? ಹಾಗಾದರೆ ಕರೀಂಲಾಲ ಸುಮಾರು 30 ಸಾವಿರ ಕೋಟಿ ರೂಪಾಯಿಗಳ ಭ್ರಷ್ಟಾಚಾರದ ವ್ಯಕ್ತಿ, ಸಮಾಜ ದ್ರೋಹಿ, ಇಂತಹ ವ್ಯಕ್ತಿಗೆ ಮೊಬೈಲ್ ಸರ್ವೀಸ್? ಏನು ರಾಜ್ಯ ಸರ್ಕಾರದ ನಡವಳಿಕೆ ಏನು ಇವತ್ತು? ಇದು ಮಾನ್ಯ ಗೃಹ ಮಂತ್ರಿಗಳ ಗಮನಕ್ಕೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬರಲಿಲ್ಲವೇ ಎಂದು ನಾನು ಕೆಳಬೇಕಾಗುತ್ತದೆ. ಆಮೇಲೆ ಆ ಮೊಬೈಲ್ ಸರ್ವೀಸ್‌ನಿಂದ ಎಲ್ಲೆಲ್ಲಿ ಮೊಬೈಲ್ ಮಾಡಿದ್ದಾನೆ? ಆತ ಅಲ್ಲಿಯೇ ಕುಳಿತು ವ್ಯವಹಾರ ಮಾಡಿದ್ದಾನೆ. ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಜೈಲಿನಲ್ಲಿ ಕುಳಿತುಕೊಂಡೇ ಮಾಡಿದ ಅಂದರೆ ಸರ್ಕಾರದ ಒಂದು ಕಟ್ಟಡ, ಸರ್ಕಾರದ ಜೈಲು, ಆ ಜೈಲಿನಲ್ಲಿಯೇ ಕುಳಿತು ಅತ್ಯಂತ ಸುರಕ್ಷಿತವಾಗಿ ಆ ಮೊಬೈಲ್ ಮುಖಾಂತರ ನೂರಾರು ಕೋಟಿ, ಸಾವಿರಾರು ಕೋಟಿ ರೂಪಾಯಿಗಳ ವ್ಯವಹಾರವನ್ನು ಮಾಡುತ್ತಾನೆ. ಈ ಕರೀಂಲಾಲ್. ಅಂತಹವನಿಗೆ ನೀವು ಅವಕಾಶ ಕೊಡುತ್ತೀರಿ. ಹಾಗಾದರೆ ಸಕಾರ ಇದೆಯೋ ಇಲ್ಲವೋ ಎಂದು ನಾನು ಕೇಳಬೇಕಾಗುತ್ತದೆ. ಈ ರಾಜ್ಯದಲ್ಲಿ, ನಿಮ್ಮ ಗೃಹ ಖಾತೆ ಇದೆಯೋ ಇಲ್ಲವೋ, ನಿಮ್ಮ ಇಂಟಲಿಜೆನ್ಸಿ ಡಿಪಾರ್ಟ್‌ಮೆಂಟ್ ಇದೆಯೋ ಇಲ್ಲವೋ ಎಂದು ಕೇಳಬೇಕಾಗುತ್ತದೆ. ಏಕೆ ಹೀಗೆ ನಡೆದುಕೊಳ್ಳುತ್ತಿದ್ದೀರಿ ಎಂದು ನಾವು ಕೇಳಬೇಕಾಗುತ್ತದೆ. ಇಲ್ಲಿ ಏನಾಗಿದೆ ಜೈಲರ್ ಯಾರಿದ್ದರು ಆ ಇಬ್ಬರನ್ನು ನೀವು ಮೊನ್ನೆ ಸಸ್ಪೆಂಡ್ ಮಾಡಿದಿರಿ. ನಂಜಯ್ಯ ಅಂತ ಹೇಳಿ ಒಬ್ಬರು ಇನ್ನೊಬ್ಬರು ಜಯಸಿಂಹ ಅಂತ ಹೇಳಿ. ಆ ಇಬ್ಬರು ಅಧಿಕಾರಿಗಳನ್ನು ನೀವು ಸಸ್ಪೆಂಡ್ ಮಾಡಿದಿರಿ. ಅದೂ ಎಲ್ಲಾ ಪ್ರಕರಣಗಳು ಹೊರಗೆ ಬಂದು, ಎಲ್ಲಾ ಅಲಿಗೇಶನ್ ಆಗಿ, ಎಲ್ಲಾ ಆದಮೇಲೆ ನಾವು ಮೊದಲಿನಿಂದಲೂ ಹೇಳುತ್ತಿದ್ದೇವೆ. ಜೈಲಿನಲ್ಲಿ ಅವನಿಗೆ ಮೊಬೈಲ್ ಫೆಸಿಲಿಟಿ, ಕಲರ್ ಟೀವಿ ಇದೆ ಎಂದು ಹೇಳುತ್ತಿದ್ದೇವೆ. ಆದರೆ ಯಾವಾಗ ನಿಮಗೆ ಜ್ಞಾನೋದಯವಾಯಿತು, ಇತ್ತೀಚೆಗೆ, ಇವೆಲ್ಲಾ ಡಾಕ್ಯುಮೆಂಟ್ಸ್ ಹೊರಗೆ ಬರುವುದಕ್ಕೆ ಶುರುವಾಯಿತು ಆಗ. ಆಗ ಆ ಇಬ್ಬರು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿರಿ. ಜಯಸಿಂಹ ಮತ್ತು ನಂಜಯ್ಯ ಅಂತ ಹೇಳಿ. ಅದು ಎಲ್ಲಿಯವರೆಗೂ ಹೋಯಿತು? ನಂಜಯ್ಯ ಅವರ ಕಡೆ ಏನು ಒಂದು ಮೊಬೈಲ್ ಇತ್ತು ಆ ಮೊಬೈಲ್ ಯಾರ ಹೆಸರಿನಲ್ಲಿ ಇತ್ತು ಏನೋ ಗೊತ್ತಿಲ್ಲ ಅದರಲ್ಲಿದ್ದಂತಹ ಸಿಮ್ ಕಾರ್ಡ್, ಆ ಮೊಬೈಲ್, ಆ ಮೊಬೈಲ್ ಅನ್ನು ಸುಟ್ಟು ಹಾಕುವಂತಹ ಪರಿಸ್ಥಿತಿ. ನಾನು ವಿತ್ ಡಾಕ್ಯುಮೆಂಟ್ ಪ್ರಕಾರ ಹೇಳುತ್ತಿದ್ದೇನೆ. ಇಲ್ಲಿ ವಿಚಾರಣೆ ಮಾಡಿದ ಮೇಲೆ ಪೊಲೀಸ್ ವರದಿ ಇದೆ. ವಿಚಾರಣೆಯಿಂದ ಎ-33 ಆರೋಪಿ ನಂಜಪ್ಪನವರು 2002ನೇ ಸಾಲಿನಲ್ಲಿ ಈ ಮೇಲ್ಕಂಡ ಕೇಸ್‌ಗೆ ಸಂಬಂಧಿಸಿದಂತೆ ಒಂದು ಮೊಬೈಲ್ ಫೋನನ್ನು ಸೆಂಟ್ರಲ್ ಜೈಲಿನ ಆವರಣದಲ್ಲಿ ಎ-32 ಆರೋಪಿ ಜಯಸಿಂಹರ ಆದೇಶದಂತೆ ಸುಟ್ಟು ಹಾಕಿರುವುದಾಗಿ ಹೇಳಿಕೆಯನ್ನು ನೀಡಿದ್ದು ಸದರಿ ಸ್ಥಳವನ್ನು ಪರಿಶೀಲಿಸುವ ಸಲುವಾಗಿ ಪಂಚನಾಮೆ ಮಾಡಲು ಯಾರಾದರೂ ಸಿಬ್ಬಂದಿಯನ್ನು ಕಳುಹಿಸುವಂತೆ ಉತ್ತರ ತಾಲ್ಲೂಕು ತಹಸೀಲ್ದಾರ್‌ರವರಿಗೆ ದಿನಾಂಕ 17-12-2003

ರಂದು ಬೆಳಿಗ್ಗೆ ಮನವಿ ಸಲ್ಲಿಸಿದ್ದು ಆ ಮನವಿಯ ಮೇರೆಗೆ ಸಂಜೆ 4–15 ಗಂಟೆಗೆ ಉತ್ತರ ತಾಲ್ಲೂಕು ತಹಶೀಲ್ದಾರ್ ಕಛೇರಿಯಿಂದ ಶ್ರೀ ಚಿಕ್ಕಯ್ಯ ಬಿನ್ ಎಲ್ಲಪ್ಪ 57 ವರ್ಷದ ಶ್ರೀ ವಿಜಯಣ್ಣ ಬಿನ್ ವೆಂಕಟಪ್ಪ ಎಂಬ ಇಬ್ಬರು ರೆವಿನ್ಯೂ ಇನ್ಸ್‌ಪೆಕ್ಟರ್‌ಗಳನ್ನು ಕಳುಹಿಸಿಕೊಟ್ಟಿದ್ದು, ಆರೋಪಿಗಳನ್ನು ಮೊದಲೇ ನ್ಯಾಯ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದರಿಂದ ಪಂಚಾಯತ್‌ದಾರರು ಒಂದುಗೂಡಿ ಮಡಿವಾಳದಲ್ಲಿರುವ ನ್ಯಾಯ ವಿಜ್ಞಾನ ಪ್ರಯೋಗಾಲಯದ ಬಳಿ ಹೋಗಿ ಅಲ್ಲಿ ಎ–33 ಆರೋಪಿಯನ್ನು ಕರೆದುಕೊಂಡು ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಹೋಗಿದ್ದು ಅಲ್ಲಿ ಆರೋಪಿ ನಂಜಪ್ಪನವರು ಜೈಲಿನ ಆವರಣದಲ್ಲಿರುವ ಮೊಬೈಲ್ ಫೋನನ್ನು ಸುಟ್ಟು ಹಾಕಿದ್ದಾಗಿ ತಿಳಿಸಿದ್ದು ಸದರಿ ಸ್ಥಳವನ್ನು ಪಂಚರ ಸಮಕ್ಷಮ 5–20 ಗಂಟೆಯಿಂದ 6–20 ಗಂಟೆಯವರೆಗೆ ಈ ನಡುವೆ ಪಂಚನಾಮ ಮಾಡಿ, ಪಂಚನಾಮೆಯನ್ನು ಬರೆಧುಕೊಳ್ಳಲಾಗಿದೆ. ಇದು ಪತ್ರಿಕೆಯಲ್ಲಿ ಬಂದಿತ್ತು. ನಾವು ನಂಬಿರಲಿಲ್ಲ. ಆದರೆ ಕಾಗದಪತ್ರಗಳ ವರದಿ ನಮ್ಮ ಮುಂದೆ ಇದೆ. ಹಾಗಾದರೆ ಆ ನಂಜಪ್ಪ ಸುಟ್ಟು ಹಾಕಿದ್ದು ಮೊಬೈಲ್, ಏಕೆ ಸುಟ್ಟು ಹಾಕಿದ? ಹಾಗಾದರೆ ಇವತ್ತು ನೀವು ನಂಜಪ್ಪನನ್ನು ಆರೆಸ್ಟ್ ಮಾಡಿದಿರಿ, ಜಯಸಿಂಹನನ್ನು ಅರೆಸ್ಟ್ ಮಡಿದಿರಿ, ಆ ಜಯಸಿಂಹನ ಆದೇಶದ ಪ್ರಕಾರ ಈ ನಂಜಪ್ಪ ಮೊಬೈಲ್ ಸುಟ್ಟು ಹಾಕುತ್ತಾನೆ, ನೀವು ಅರೆಸ್ಟ್ ಮಾಡಿದ ತಕ್ಷಣ ಆತನ ಕಡೆ ಇರುವಂತಹ ಮೊಬೈಲ್ ತಕ್ಷಣ ಸೀಜ್ ಮಾಡಿಕೊಳ್ಳಬೇಕಾಗಿತ್ತಾಲ್ಲಾ. ಏಕೆ ಸೀಜ್ ಮಾಡಲಿಲ್ಲ ಎನ್ನುವಂತಹ ಪ್ರಶ್ನೆ ಬರುತ್ತದೆ. ಏಕೆ ಮಾಡಲಿಲ್ಲ ಇಲ್ಲಿಯವರೆಗೂ ಅಲ್ಲಿಸುಟ್ಟು ಹಾಕಿದ್ದಾರೆ ಅಲ್ಲಿ ಒಂದು ಎವಿಡೆನ್ಸ್ ಹೋಯಿತು. ಕೆಲವರು ಹೇಳುತ್ತಾರೆ ಏನ್ರಿ ಮೊಬೈಲ್ ಪೋನ್, ಸಿಮ್ ಕಾರ್ಡ್ ಸುಟ್ಟು ಹಾಕಿದರೆ ಅವರು ಯಾವ ನಂಬರ್‌ಗೆ ಫೋನ್ ಮಾಡಿರುತ್ತಾರೋ ಅದರ ನಂಬರ್‌ಗಳು ಇರುತ್ತವೆ ಎಂದು ಹೇಳಿ, ಆದರೆ ಆ ನಂಜಪ್ಪನ ಕಡೆ, ಆ ಜಯಸಿಂಹನ ಕಡೆ ಇದ್ದಂತಹ ಮೊಬೈಲ್ ಅದು ಯಾವ ನಂಬರ್‌ದ್ದು ಏನೂ ಗುರುತಿಲ್ಲ. ಅದು ಯಾರ ಹೆಸರಿನಲ್ಲಿತ್ತು ಎನ್ನುವುದು ಗುರುತಿಲ್ಲ. ನಂಜಪ್ಪನ ಹೆಸರಿನಲ್ಲಿದ್ದರೆ ಅಡ್ಡಿಯಿಲ್ಲ ರೆಕಾರ್ಡ್ಸ್ ಇರುತ್ತವೆ. ಆತ ಬೇರೆಯವರ ಹೆಸರಿನಲ್ಲಿದ್ದಂತಹ ಮೊಬೈಲ್ ಉಪಯೋಗ ಮಾಡಿದರೆ, ಆ ಮೊಬೈಲ್‌ನ ಸಿಮ್ ಕಾರ್ಡ್ ಸುಟ್ಟು ಹಾಕಿದರೆ ನಮಗೆ ಯಾವುದೂ ರೆಕಾರ್ಡ್ ಸಿಗುವುದಕ್ಕೆ ಸಾಧ್ಯವಿಲ್ಲ. ಇದು ಬಹಳ ಮುಖ್ಯವಾದ ಎವಿಡೆನ್ಸ್. ಇವತ್ತು ನಮ್ಮ ಕಡೆಯಿಂದ ಹೋಗಿದೆ. ಆ ಕರೀಂಲಾಲ ಇದ್ದಂತಹ ಸಂದರ್ಭದಲ್ಲಿ ಅಲ್ಲಿ ನಂಜಪ್ಪ, ಜಯಸಿಂಹ ಇದ್ದಂತಹ ಸಂದರ್ಭದಲ್ಲಿ ಅವರು ಆ ಮೊಬೈಲ್‌ನಲ್ಲಿ ಯಾರ್‍ಯಾರ ಜೊತೆ ಮಾತನಾಡಿದರು, ಕರೀಂಲಾಲ ಜೊತೆ ಏನು ಮಾತನಾಡಿದ, ಇವೆಲ್ಲಾ ಹೊರಗೆ ಬರುತ್ತಿದ್ದವಲ್ಲಾ ವಿಷಯ. ಏಕೆ ಇದನ್ನೆಲ್ಲಾ ಮುಚ್ಚಿಡುವಂತಹ ಪ್ರಯತ್ನ ನಡೆಯುತ್ತಿದೆ? ಇದಕ್ಕೆ ಏಕೆ ನೀವು ಅಡೆತಡೆ ಮಾಡಲಿಲ್ಲ. ಇಲ್ಲಿಯವರೆಗೂ ಹೇಗೆ ಸಹಿಸಿಕೊಂಡು ಕುಳಿತ್ತಿದ್ದೀರಿ? ನಾನು ಹೇಳುತ್ತಿದ್ದೇನೆ ಒಂದು ಲಾ ಅಂಡ್ ಆರ್ಡರ್. ಇವತ್ತು ಯಾರು ಕರೆಪ್ಟ್ ಆಫೀಸರ್ ಇದ್ದರು ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಿ. ಅವರನ್ನು ಸಸ್ಪೆಂಡ್ ಮಾಡಿ, ತಕ್ಷಣ ಇದೆಲ್ಲಾ ಆಗಬೇಕಾಗಿದೆ. ನಿಮ್ಮ ಧರ್ಮ ಯುದ್ಧ ಎಲ್ಲಿ ಹೋಯಿತು? ಆದರೆ ಇವರಿಬ್ಬರೇ ಅಲ್ಲ.

ಇನ್ನೂ ಇದರಲ್ಲಿ ಡಿ.ಜಿ. ಇವರೆಲ್ಲರೂ ಇದ್ದಾರೆ. ಅವರೂ ಇದರಲ್ಲಿ ಇನ್‌ವಾಲ್ವ್ ಇದ್ದಾರೆ ಮೇಲಿನ ಅಧಿಕಾರಿಗಳ ಸಪೋರ್ಟ್ ಇಲ್ಲದೇ, ಇವರು ಮಾಡುವುದುಕ್ಕೆ ಸಾಧ್ಯವಿಲ್ಲ. ಮೇಲಿನ ಅಧಿಕಾರಿಗಳ ಆಶೀರ್ವಾದ ಇರುತ್ತದೆ. ಆಗ ಇವುಗಳನ್ನೆಲ್ಲಾ ಮಾಡುವುದಕ್ಕೆ ಸಾಧ್ಯ. ಇವರು ಮೇಲಿನ

ಅಧಿಕಾರಿಗಳನ್ನು ಇದುವರೆಗೆ ಅರೆಸ್ಟ್ ಮಾಡಲಿಲ್ಲ. ಅದರ ಬಗ್ಗೆ ಈಗಾಗಲೇ ಕೋರ್ಟಿನಲ್ಲಿ ಎವಿಡೆನ್ಸ್ ಆಗಿದೆ; ಸಾಕ್ಷ್ಯ ಬಂದಿದೆ. ಯಾರು ಮೇಲಾಧಿಕಾರಿಗಳು ಇದ್ದಾರೆ, ಡಿ.ಜಿ. ಮಟ್ಟದ ಅಧಿಕಾರಿಗಳು ಇದ್ದಾರೆ, ಅವರೂ ಇದರಲ್ಲಿ ಇನ್‌ವಾಲ್ವ್ ಇದ್ದಾರೆ. ಆದರೆ ಇನ್ನೂವರೆಗೆ ಅವರನ್ನು ಅರೆಸ್ಟ್ ಮಾಡಲಿಲ್ಲ, ಸಸ್ಪೆಂಡ್ ಮಾಡಲಿಲ್ಲ ಇದು ಏನಾಗುತ್ತಾ ಇದೆಯೆಂದರೆ, ಇವತ್ತು ನಾವು ಲೋಕಾಯುಕ್ತದ ಬಗ್ಗೆ ಬಹಳಷ್ಟು ಮಾತನಾಡುತ್ತೇವೆ. ಲೋಕಾಯುಕ್ತರು ಅಲ್ಲಿ ರೈಡ್ ಮಾಡಿದರು, ಇಲ್ಲಿ ರೈಡ್ ಮಾಡಿದರು, ಭ್ರಷ್ಟಾಚಾರದ ಬಗ್ಗೆ ಸಾಕಷ್ಟು ಉತ್ತಮ ಕೆಲಸವನ್ನು ಮಾಡುತ್ತ ಇದ್ದಾರೆ, ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುವುದಕ್ಕೆ ಲೋಕಾಯುಕ್ತರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಎನ್ನುವಂಥದ್ದು. ಅವರ ಬಗ್ಗೆ ಎಲ್ಲಾ ಕಾರ್ನರ್‌ನಿಂದ ಮೆಚ್ಚುಗೆ ಬರುತ್ತಾ ಇದೆ. ಮುಖ್ಯಮಂತ್ರಿಗಳು ಮೆಚ್ಚುಗೆ ವ್ಯಕ್ತ ಮಾಡಿದರು, ಪ್ರತಿಪಕ್ಷದವರೂ ಮೆಚ್ಚುಗೆ ವ್ಯಕ್ತಮಾಡಿದರು. ಆದರೆ, ಇವತ್ತು ಲೋಕಾಯುಕ್ತದವರು ಎಷ್ಟು ಜನರನ್ನು ರೈಡ್ ಮಾಡಿದ್ದಾರೆ, ನೀವು ಎಷ್ಟು ಜನರನ್ನು ಸಸ್ಪೆಂಡ್ ಮಾಡಿದ್ದೀರಿ? ಒಂದು ಸಣ್ಣ ಉದಾಹರಣೆ, ಮೊನ್ನೆ ಮೈಸೂರಿನಲ್ಲಿ ಒಬ್ಬ ಡಿ.ಜಿ. ಮಟ್ಟದ ಅಧಿಕಾರಿ ಒಂದು ಲಕ್ಷ ರೂಪಾಯಿ ತೆಗೆದುಕೊಂಡು ರೆಡ್ ಹ್ಯಾಂಡ್ ಸಿಕ್ಕಿದ. ಆದರೆ, ಇನ್ನೂವರೆಗೆ ನೀವು ಅವರನ್ನು ಸಸ್ಪೆಂಡ್ ಮಾಡಲಿಲ್ಲ. ಮೈಸೂರಿನಲ್ಲಿ ಡಿ.ಜಿ. ಮಟ್ಟದ ಅಧಿಕಾರಿಯನ್ನು ಲೋಕಾಯುಕ್ತದವರು ಹೋಗಿ ಒಂದು ಲಕ್ಷ ರೂಪಾಯಿ ಮಾಲು ಸಮೇತ ಹಿಡಿದರೂ ಇನ್ನೂವರೆಗೆ ತಾವು ಅವರನ್ನು ಸಸ್ಪೆಂಡ್ ಮಾಡಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವನು ಪೊಲೀಸ್ ಆಫೀಸರ್ ಅಲ್ಲ.

He belongs to Registration Department. Director of Registration ಏಕೆಂದರೆ ಕನ್‌ಫ್ಯೂಷನ್ ಆಗಬಾರದು.

ಶ್ರೀ ಎಸ್.ಎಂ. ಕೃಷ್ಣ : ತಾವು ಯಾವುದನ್ನು ಉದಾಹರಿಸುತ್ತಾ ಇದ್ದೀರಿ, ಈಗಾಗಲೇ ಅವರನ್ನು ಸಸ್ಪೆಂಡ್ ಮಾಡಲಾಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಇರಲಿ, ನಿನ್ನೆ ರಾತ್ರಿಯವರೆಗೆ ನನಗೆ ಮಾಹಿತಿ ಇತ್ತು. ರಿಜಿಸ್ಟ್ರೇಷನ್ ಆಫೀಸಿನಲ್ಲಿ ಯಾರು ಡಿ.ಜಿ. ಮಟ್ಟದ ಅದಿಕಾರಿ ಇದ್ದಾರೆ, ಅವರು ಸಸ್ಪೆಂಡ್ ಆಗಿಲ್ಲ, ಒಂದುವೇಳೆ ಆಗಿದ್ದರೂ ಮತ್ತೆ ರಿವೋಕ್ ಆಗಿದೆ ಅನ್ನುವಂಥ ಮಾಹಿತಿ ಇತ್ತು.

ಶ್ರೀ ಎಸ್.ಎಂ. ಕೃಷ್ಣ : ನಾನು ಸ್ಪಷ್ಟವಾಗಿ, ಅವರನ್ನು ಸಸ್ಪೆಂಡ್ ಮಾಡಬೇಕೆನ್ನುವ ಆರ್ಡರನ್ನು ಜಾರಿ ಮಾಡಿದ್ದೇನೆ. ರಿವೋಕೇಷನ್ ಪ್ರಶ್ನೆ ಉದ್ಭವಿಸುವುದೇ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಆ ರೀತಿಯಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ನಾನು ಹೇಳುವಂಥಾದ್ದು. ಇವತ್ತು ಇಲ್ಲಿ ಯಾರು ಜೈಲಿನಲ್ಲಿ ಇಬ್ಬರು ಅಧಿಕಾರಿಗಳು ಸಿಕ್ಕಿದ್ದಾರೆ ಇವರಿಗಿಂತ ಮೇಲೆಯೂ ಇದ್ದಾರೆ, ಇವರಿಗಿಂತ ದೊಡ್ಡ ಬಾಸಸ್ ಇದ್ದಾರೆ. ಅವರ ಮೇಲೆಯೂ ಕ್ರಮ ಕೈಗೊಳ್ಳಿ. ನೀವು ಬೇಕಾದರೆ ಎನ್‌ಕ್ವೈರಿ ಮಾಡಿ. ಸ್ಟ್ಯಾಂಪಿಟ್‌ರವರನ್ನು ಬೇಕಾದರೂ ಕೇಳಿ. ಇದರಲ್ಲಿ ಇನ್ನೂ ದೊಡ್ಡ ತಿಮಿಂಗಿಲಗಳು ಇವೆ. ಆ ಅಧಿಕಾರಿಗಳೂ ಹೋಗಬೇಕು. ಕೊನೆಗೆ ಎಲ್ಲಿಗೆ ಬರುತ್ತದೆಂದರೆ, ಈ ಸಣ್ಣಮಟ್ಟ ಅಧಿಕಾರಿಗಳು ಬಲಿಪಶುಗಳಾಗುತ್ತಾರೆ. ಮೇಲಿನ ಯವುದೋ ಒಂದು ಡೈರಕ್ಷನ್ ಪ್ರಕಾರ, ಓರಲ್ ಇನ್‌ಸ್ಟ್ರಕ್ಷನ್ ಪ್ರಕಾರ ಇವೆಲ್ಲಾ ಮಾಡುತ್ತಿದ್ದಾರೆ. ಹಣವನ್ನು ಎಲ್ಲರೂ ಹಂಚಿಕೊಳ್ಳುತ್ತಿದ್ದಾರೆ. ಮತ್ತೆ ಯಾರು ಯಾರು; ಎಷ್ಟೆಷ್ಟು ಹಣ ಕೊಟ್ಟಿದ್ದಾರೆಂಬುದನ್ನೂ ನಾನು ತೋರಿಸುತ್ತಿದ್ದೇನೆ. ಹೀಗಾಗಿ ಇವತ್ತು ಸಣ್ಣಮಟ್ಟ ಅಧಿಕಾರಿಗಳು ಬಲಿಪಶುವಾಗುವಂಥಾದ್ದು ದೊಡ್ಡ ದೊಡ್ಡ ತಿಮಿಂಗಿಲಗಳು

ಪಾರಾಗಿ, ಇವತ್ತು ರಾಜಾರೋಷವಾಗಿ ಅಡ್ಡಾಡುವಂಥಾದ್ದನ್ನು ನಾವು ನೋಡುತ್ತೇವೆ. ಇದು ಆಗಬಾರದು ಎನ್ನುವಂಥಾದ್ದು ನನ್ನದು. ಹೀಗಾಗಿ ಇಲ್ಲಿ ಕೆಲವೊಂದು ಪೇಪರ್ಸನ್ನು ಹಾಜರು ಮಾಡಿದೆ, ಇದರ ಪ್ರಕಾರ ಸರ್ಕಾರದಲ್ಲಿ ಇವತ್ತೇನು ನಡೆಯುತ್ತಾ ಇದೆ. ಎನ್ನುವಂಥಾದ್ದು ಬೆಳಕಿಗೆ ಬರುವಂಥದ್ದು ಆಗಬೇಕು. ಇನ್ನು ಈಗಾಗಲೇ ಒಂದು ವಿಷಯ ಪ್ರಕಟವಾಗಿದೆ. ಈ ಒಂದು ಕಾಗದಪತ್ರಗಳು ಸಾರ್ವಜನಿಕವಾಗಿ ಈಗಾಗಲೇ ಪ್ರಕಟವಾಗಿದೆ. ಈ ಪಾಲಿಗ್ರಾಫಿಕ್ ಎಕ್ಸಾಮಿನೇಷನ್ ಬಗ್ಗೆ, ಈಗಾಗಲೇ ಸಾರ್ವಜನಿಕವಾಗಿ ಪ್ರಕಟವಾದಂಥ ಈ ಕಾಗದ ಪತ್ರ. ಅದರ ವಿಷಯ ಈಗಾಗಲೇ ಹೊರಗೆ ಬಂದಿದೆ. ಇಲ್ಲಿ ಏನು ಹೇಳುವಂಥದ್ದು, ಇವತ್ತು ಈ ವರದಿಯನ್ನು ಡಾ: ಬಿ. ಮಾಲಿನಿ ಎಂಬುವರು, ಅಸಿಸ್ಟೆಂಟ್ ಡೈರೆಕ್ಟರ್ Forensic Psychology Division, Madivala, Bangalore Laboratory, ಇಲ್ಲಿ ವರದಿ ಮಾಡಿರುವಂಥಾದ್ದು. ಇದನ್ನು ಅವರು ಯಾರಿಗೆ ಅಡ್ರೆಸ್ ಮಡುತ್ತಾರೆಂದರೆ ಅಸಿಸ್ಟೆಂಟ್ ಕಮೀಷನರ್ ಆಫ್ ಪೊಲೀಸ್, ಸಿ.ಸಿ.ಬಿ. ಉಪ್ಪಾರಪೇಟೆ ಪೊಲೀಸ್ ಸ್ಟೇಷನ್ ಬೆಂಗಳೂರು ಇವರಿಗೆ ಕೊಟ್ಟಂಥ ರಿಪೋರ್ಟ್. ಇದು ಈಗಾಗಲೇ ಸಾರ್ವಜನಿಕವಾಗಿ ಪ್ರಕಟವಾದಂಥಾದ್ದು ಇಲ್ಲಿ ಏನು ಹೇಳುತ್ತಾರೆಂದರೆ, Persuant to the request made accused Mr. Mohamedsadiq was brought for poligraphic exmaination on 18th. Therefore he was subjected to for interrogative poligraphic examination on 18th February 2002, at Forensic Science Laboratory, Bangalore. ಅಂದರೆ, ಫೆಬ್ರವರಿ 2002, 18ನೇ ತಾರೀಖು ಪಾಲಿಗ್ರಾಫಿಕ್ ಎಕ್ಸಾಮಿನ್ ಮಾಡಿದಂಥದ್ದು. ಇದರಲ್ಲಿ ಅವರು ಏನು ಕೆಲವೊಂದು ವಿಷಯಗಳನ್ನು ಡಿಸ್‌ಕ್ಲೋಸ್ ಮಾಡಿದ್ದಾರೆ, ಇವತ್ತು ಅದು ಸಾರ್ವಜನಿಕವಾಗಿ ಚರ್ಚೆಯಾಗುತ್ತಾ ಇದೆ. 18ನೇ ತಾರೀಖು ಅವರು ಎಕ್ಸಾಮಿನ್ ಮಾಡಿ, 20ನೇ ತಾರೀಖಿಗೆ ರಿಪೋರ್ಟ್ ಕಳುಹಿಸುತ್ತಾರೆ. ಆ ವರದಿಯಲ್ಲಿ ಕೆಲವೊಂದು ಪ್ರಶ್ನೆಗಳನ್ನು ಅವರು ಕೇಳುತ್ತಾರೆ. ಇದರಲ್ಲಿ ಮೂರು ಹಂತದ್ದು, Polygraphic Examination, chemographic Examination and Narco Analysis. ಈ ಮೂರು ಎಕ್ಸಾಮಿನೇಷನ್ಸ್ ಇವೆ. ಅದರಲ್ಲಿ ಪಾಲಿಗ್ರಾಫಿಕ್ ಎಕ್ಸಾಮಿನೇಷನ್ ಈ ಒಂದು ಆರೋಪಿ ಮೇಲೆ ಆ ಡಾಕ್ಟರು ಮಾಡುತ್ತಾರೆ. ಆ ಸಂದರ್ಭದಲ್ಲಿ ಕೆಲವೊಂದು ಪ್ರಶ್ನೆಗಳನ್ನು ಕೇಳಿ, ಕೆಲವೊಂದು ಉತ್ತರಗಳನ್ನು ಪಡೆದುಕೊಂಡಿದ್ದಾರೆ. ಅವು ಈ ವರದಿಯಲ್ಲಿ ಸ್ಪಷ್ಟವಾಗಿ ಇದೆ. ಪ್ರಶ್ನೆ ಸಂಖ್ಯೆ : 4, ಅವರು ಏನು ಪ್ರಶ್ನೆ ಕೇಳಿದ್ದಾರೆ, ASI, V.A. Khan and PSI, Vali Basha and Sangram Singh were paid regularly by you. ಅದಕ್ಕೆ ಆ ಆರೋಪಿ ಉತ್ತರ ಕೊಡುತ್ತಾನೆ. I have carried up to Rs. 20,000 in a wrapped newspaper to vali Basha and in case highere amounts are needed, they used to call up Karim Lala over phone and in turn he used to direct us to make the payment up to Rs. 50,000 from our divisions. For huge money, they used to meet him personally at Hotel Airlines, some times at Mumbai, where they used to collect from Karim Lala directly. ಮುಂದೆ ಪ್ಯಾರಾ ನಂ.9, ಇದು ಬಹಳ ಮುಖ್ಯವಾದುದು. ಅಲ್ಲೊಂದು ಏನು ಪ್ರಶ್ನೆ ಕೇಳುತ್ತಾರೆ, Do you know the name of important politicians, police with whom Karim Lala had regu-

lar contacts? Home Minister earlier to Mr. Roshan Beig and Mr. Roshan Beig used to visit him often at Hotel Airlines, Harsha, Oberoi etc., at the centre, Ramadas, Jetmalani used to contact and visit Karim Lala frequently. ಹೀಗಾಗಿ ಇವತ್ತು ರೋಷನ್ ಬೇಗ್‌ರವರು ಹೆಸರು ಬಂತು. ನಾವು ಹಿಂದೆ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೆವು. ಆಗ ನಾವೇನು ಪ್ರಸ್ತಾಪ ಮಡಿದ್ದೆವು ಎಂದರೆ, ನಾವು ನೇರವಾಗಿ ರೋಷನ್ ಬೇಗ್‌ರವರಿಗೆ ಆಪಾದನೆ ಮಾಡಿರಲಿಲ್ಲ. ನಾವು ಒಂದೇ ಮಾತು ಹೇಳಿದೆವು. ಇವತ್ತು ಈ ಪ್ರಕರಣದಲ್ಲಿ ನಿಮ್ಮ ಸಹೋದರ ಡಾ: ರೆಹಾನ್ ಬೇಗ್‌ರ ಹೆಸರು ಬರುತ್ತಾ ಇದೆ. ಈ ಕರೀಂಲಾಲನ ಜೊತೆ ಆತನ ಸಂಪರ್ಕ ಇದೆ. ಆ ರೆಹಾನ್‌ಬೇಗ್‌ರವರಿಗೆ ಇದ್ದಂಥ ಪ್ರಾಪರ್ಟಿಯನ್ನು ಉಚಿತವಾಗಿ ಕರೀಂಲಾಲಾಗೆ ಕೊಟ್ಟಿದ್ದೀರಿ ಮತ್ತು ಸೀಮೆಎಣ್ಣೆ ಅಥವಾ ಪೆಟ್ರೋಲ್ ಇದರ ಬಗ್ಗೆ ವ್ಯವಹಾರಗಳು ಆ ಕರೀಂಲಾಲಾನ ಜೊತೆ ಈ ರೆಹಾನ್‌ಬೇಗ್‌ರವರಿಗೆ ಇದೆ ಎಂಬುದನ್ನು ನಾವು ನೇರವಾಗಿ ಆಪಾದನೆ ಮಾಡಿದ್ದೆವು. ಅದಕ್ಕೆ ಉಚಿತವಾಗಿ ಕೊಟ್ಟಂಥ, ಇನ್‌ಕಮ್ ಟ್ಯಾಕ್ಸ್‌ಗೆ ಸಬ್‌ಮಿಟ್ ಮಾಡಿದಂಥ ಕಾಗದ ಪತ್ರಗಳು, ಇವುಗಳನ್ನು ನಾವಿಲ್ಲ ಪ್ರೊಡ್ಯೂಸ್ ಮಾಡಿದ್ದೇವೆ. ಆಗ ಮುಖ್ಯಮಂತ್ರಿಗಳು, ಗೃಹಮಂತ್ರಿಗಳು ಅದನ್ನು ಡಿನೈ ಮಾಡಿದರು. ಎಲ್ಲಿಯವರೆಗೆ ರೋಷನ್ ಬೇಗ್‌ರವರು ಹೋಗಿದ್ದಾರೆಂದರೆ, ಆ ಇನ್‌ಕಮ್ ಟ್ಯಾಕ್ಸ್ ಆಫೀಸಿಗೆ ಕೊಟ್ಟಂಥ ಲೆಟರ್ ನಾವು ಉಚಿತವಾಗಿ ಕೊಟ್ಟಿದ್ದೇವೆ ಎನ್ನುವಂಥಾದ್ದು, ಅದರಲ್ಲಿದ್ದಂತಹ ಸಿಗ್ನೇಚರ್, ಇದು ನಿಮ್ಮ ಸಹೋದರ ಕೊಟ್ಟೇ ಇಲ್ಲ ಅನ್ನುವಂಥ ಡಿನೈ ಮಾಡಿದರು. ಆದರೆ, ಇವತ್ತು ಆ ರೆಹಾನ್‌ಬೇಗ್‌ರವರ ಪಾಸ್‌ಪೋರ್ಟ್ ರದ್ದುಮಾಡಿ, ಪ್ರಾಪರ್ಟಿ ಸೀಜ್ ಮಾಡಿ, ಅಕೌಂಟ್ ಸೀಜ್ ಮಾಡಿ ಎಂದು ಹೇಳಿದೆವು. ಆದರೆ, ಮಾಡಲಿಲ್ಲ. ಕೊನೆಗೆ, ನೀವು ರೆಹಾನ್ ಬೇಗ್‌ರವರನ್ನು ಅರೆಸ್ಟ್ ಮಾಡಿದಿರಿ. ಈಗ ಕಾನೂನಿನ ಕ್ರಮಗಳನ್ನು ಕೈಗೊಳ್ಳುವುದಕ್ಕೆ ವಿಚಾರಣೆ ನಡೆಸುತ್ತಾ ಇದ್ದೇವೆ ಎಂದು ಹೇಳುತ್ತಿದ್ದೀರಿ. ಕಳೆದ ಎರಡು ವರ್ಷಗಳಿಂದ ಭಾರತೀಯ ಜನತಾ ಪಾರ್ಟಿಯಿಂದ ನಾವೇನು ಆಪಾದನೆ ಮಾಡುತ್ತಾ ಇದ್ದೆವು, ಅದು ಇವತ್ತು ಹೊರಗೆ ಬರುತ್ತಾ ಇದೆಯಲ್ಲ. ನಾವು ಅವತ್ತು ರೋಷನ್ ಬೇಗ್‌ರವರಿಗೆ ಒಂದೇ ಮಾತು ಹೇಳಿದೆವು. ನಿಮ್ಮ ಸಹೋದರರ ಮೇಲೆ ಈ ರೀತಿ ಆಪಾದನೆ ಬಂದುದರಿಂದ, ಒಂದು ನೈತಿಕ ಹೊಣೆ ಹೊತ್ತು ನೀವು ಈ ಸಚಿವ ಸ್ಥಾನದಿಂದ ಹೊರಗೆ ಬನ್ನಿ, ನೀವು ನಿರಪರಾಧಿ ಎಂದು ಪ್ರೂವ್ ಆದಾಗ ಮತ್ತೆ ಮಂತ್ರಿಯಾಗಿ ಎಂದು ನಾವು ಹೇಳಿದ್ದೆವು. ಆಗ, ಅವರು ರಾಜೀನಾಮೆ ಕೊಡಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಆಗ ಅವರ ರಾಜೀನಾಮೆ ತೆಗೆದುಕೊಳ್ಳಬೇಕಾಗಿತ್ತು, ಆದರೆ ತೆಗೆದುಕೊಳ್ಳಲಿಲ್ಲ. ಎಲ್ಲಾ ಮುಗಿಯಿತು, ಎರಡು ವರ್ಷ ಇದಕ್ಕಾಗಿಯೇ ಹೋರಾಟ. ಸಾರ್ವಜನಿಕ ಅಭಿಪ್ರಾಯ ಕ್ರೋಢೀಕರಣ ಮಾಡುವಂಥಾದ್ದು, ಇವೆಲ್ಲಾ ನಡೆಯಿತು. ಇವತ್ತು ಅವರು ರಾಜೀನಾಮೆ ಕೊಡುವಂಥ ಪರಿಸ್ಥಿತಿ ನಿರ್ಮಾಣವಾಯಿತು. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಬೇರೆ ಬೇರೆ ಕಾರಣಗಳನ್ನು ಏನೇಹೇಳಲಿ. ಆದರೆ, ಇವತ್ತು ಸಾರ್ವಜನಿಕರಿಗೆ ಮತ್ತು ಎಲ್ಲರಿಗೂ ಗೊತ್ತಿದೆ. ಮಾನ್ಯ ರೋಷನ್ ಬೇಗ್‌ರವರು ಏಕೆ ರಾಜೀನಾಮೆ ಕೊಟ್ಟರು ಎಂಬುದು ಗೊತ್ತಾಗಿದೆ. ಇದು ಎಲ್ಲರಿಗೂ ಗೊತ್ತಾದಂಥ ವಿಷಯ. ಹಾಗಾದರೆ, ರೋಷನ್ ಬೇಗ್‌ರವರು ರಾಜೀನಾಮೆ ಕೊಟ್ಟಮೇಲೆ ಮುಗಿಯಿತೇ ಹಾಗಾದರೆ, ಇದರಲ್ಲಿ ಹಿಂದಿದ್ದ ವ್ಯಕ್ತಿಗಳು ಯಾರು? ದೊಡ್ಡ ದೊಡ್ಡ ವ್ಯಕ್ತಿಗಳು ಯಾರು, ರಾಜಕಾರಣಿಗಳು ಯಾರು, ಇನ್ನೂ ಕೆಲವೊಂದು ಐಪಿಎಸ್, ಐಎಎಸ್ ಇದ್ದಾರೆಂಬ ಹೆಸರುಗಳು

ಹೊರಗೆ ಬರುತ್ತಾ ಇವೆ. ಅವರುಗಳು ಯಾರು? ಅವರ ಹೆಸರುಗಳೆಲ್ಲಾ ಹೊರಗೆ ಬರಬೇಕಲ್ಲಾ ಅವರ ಬಗ್ಗೆ ತನಿಖೆಯಾಗಬೇಕಲ್ಲಾ....

ಹಾಗಾದರೆ ವಿಷಯ ಇಲ್ಲಿಗೆ ಮುಗಿಯುತ್ತದೋ? ತಮ್ಮಲ್ಲಿ ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಕಳೆದ ಐದನೇ ತಾರೀಖಿನಿಂದ ಇಲ್ಲಿ ಸದನವು ನಡೆಯುತ್ತಾ ಇದೆ. ಇದನ್ನು ನೀವು 15 ದಿನಗಳ ಮೊದಲೇ ಸೂಕ್ತ ರೀತಿಯಲ್ಲಿ ನೋಟೀಸ್ ಕೊಟ್ಟು ತಿಳುವಳಿಕೆ ನೀಡಿದ್ದೀರಿ. ಆಗ ಯಾರೇ ಒಬ್ಬ ಸದಸ್ಯರು ಸದನಕ್ಕೆ ಹಾಜರಾಗಲು ಸಾಧ್ಯವಾಗದಿದ್ದರೆ ತನ್ನ ಕಾರಣವನ್ನು ಕೊಟ್ಟು ನಾನು ಈ ಸದನದಲ್ಲಿ ಇಷ್ಟು ದಿನ ಹಾಜರಾಗಲು ಆಗುವುದಿಲ್ಲ, ನನಗೆ ಅನಾರೋಗ್ಯದ ಕಾರಣ ಹಾಜರಾಗಲು ಆಗುವುದಿಲ್ಲವೆಂದು ಕಾರಣ ಕೊಟ್ಟು ತಮಗೆ ಮನವಿಯನ್ನು ಸಲ್ಲಿಸಬೇಕಾಗುತ್ತದೆ. ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿನ ಕಾಲಂ 203 ನಲ್ಲಿ ಒಂದು ಪ್ರಾವಿಜನ್ ಇದೆ.

Applications for leave of absence: 203.(1)A member desiring permission of the House to remain absent fromsitting thereof nunder clause (4) of article 190 of the Constitution shall make an application in writing to the Speaker, specifying th period for which he may be permitted to be absent from the meetings of the House indicating also the grounds for it.

ಹೀಗೆ ಕಾರಣಗಳ ಸಹಿತ ಕೇಳಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು:- ಅವರು ತಮ್ಮ ಗೈರುಹಾಜರಿಯ ಬಗ್ಗೆ ಪತ್ರವನ್ನು ನನಗೆ ಬರೆದಿದ್ದಾರೆ.

ಶ್ರೀ ಜಗದೀಶ ಶೆಟ್ಟರ್:- ಆ ಮೇಲೆ ಸೆಕ್ಷನ್ (2) After the receipt of an application under sub-rule (1) of this rule the Speaker shall as soon as may be, read out the application to the House and ask: "Is it the pleasure of the House that permission be granted to such and such a member for remaining absent from all meetings of the House for such an such a period." If no one dissents, the speaker shall say: "Permission to remain absent is granted." But if any dissentient voice is heard, the Speaker shall take sense of the House and there upon declare the determination of the House. This is very important. This is a mandatory provision.ಹೀಗಿರುವಾಗ ಒಬ್ಬ ಜವಾಬ್ದಾರಿಯುತ ಮಂತ್ರಿಯಾಗಿ ನಾಲ್ಕು ವರ್ಷಗಳ ಕಾಲ ಕೆಲಸ ಮಾಡಿರುವವರು ಹೀಗೆ ಮಾಡಿದರೆ ಅವರಿಗೆ ಒಂದು ಬೇಸಿಕ್ ಪ್ರಿನ್ಸಿಪಲ್, ಬೇಸಿಕ್ ರೂಲ್ಸ್ ಗೊತ್ತಿಲ್ಲವೆಂದರೆ ನಮಗೆ ಆಶ್ಚರ್ಯವಾಗುತ್ತದೆ. ಈ ವಿಷಯದಲ್ಲಿ ಮಾನ್ಯ ಚಂದ್ರೇಗೌಡರು ನಮಗೆಲ್ಲಾ ಬುದ್ಧಿ ಹೇಳುತ್ತಾರೆ. ಅವರು ಪಾರ್ಲಿಮೆಂಟರಿ ಸಚಿವರು, ಅವರಾದರೂ ಅವರಿಗೆ ಈ ವಿಷಯದಲ್ಲಿ ಬುದ್ಧಿವಾದವನ್ನು ಹೇಳಬೇಕಾಗಿತ್ತು. ಯಾಕೆ ಹೀಗಾಯಿತು ಎಂದು ನನಗೆ ಅರ್ಥವಾಗುತ್ತಾ ಇಲ್ಲ. ಇವೊತ್ತು ರೋಶನ್ ಬೇಗ್‌ರವರು ರಾಜೀನಾಮೆ ಕೊಟ್ಟು ನನಗೆ ಬಹಳ ತ್ರಾಸ್ ಆಗಿದೆ. ನನಗೆ ಬಹಳ ಒತ್ತಡ ಉಂಟಾಯಿತು, ಎಂದು ಕನ್ನಡ ಪ್ರಭ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಗಳಲ್ಲಿ ಸ್ಟೇಟ್‌ಮೆಂಟ್‌ನ್ನ ಕೊಟ್ಟಿದ್ದರು. ಬಹಳ ಒತ್ತಡ ತಂದರು, ನನಗೆ ತ್ರಾಸ್ ಆಯಿತು ಅದಕ್ಕಾಗಿ ನಾನು

ರಾಜೀನಾಮೆ ಕೊಟ್ಟು ಬಂದೆ ಎಂದು ಹೇಳಿದರು. ಅವರು ಮೆಕ್ಕಾಕ್ಕೆ ಹೋಗಿದ್ದಾರೆ. ಅವರು ಅಲ್ಲಿಂದಲೇ ಪತ್ರಿಕೆಗಳಿಗೆ ಫೋನ್ ಮಾಡುತ್ತಾರೆ. ನನಗೆ ಹ್ಯುಮಿಲೇಶನ್ ಆಗಿದೆ ಎಂದು ಆ ಮೂಲಕ ಹೇಳುತ್ತಾರೆ. ಟೈಮ್ಸ್ ಆಫ್ ಇಂಡಿಯಾದಲ್ಲಿ ಬರುತ್ತದೆ. ಅಲ್ಲಿಂದಲೇ ಇಂಟರ್‌ವ್ಯೂ ಕೊಡುತ್ತಾರೆ. ಇಲ್ಲಿ ಐದನೇ ತಾರೀಖಿನಿಂದ ಸದನವು ನಡೆಯುತ್ತಾ ಇದೆ. ಅವರು 14ನೇ ತಾರೀಖಿನ ನಂತರವೇ ಹೋಗಬಹುದಾಗಿತ್ತು. ನಂತರ ಅವರು ಮೆಕ್ಕಾ ಅಥವಾ ಬೇರೆ ಎಲ್ಲಿಗಾದರೂ ಹೋಗಬಹುದಾಗಿತ್ತು. ಆದರೆ ಅವರು ಹೀಗೆ ಏಕೆ ಹೋದರು ? Without permission of this session, why he has gone to Mecca ? ಇದು ಪ್ರಶ್ನೆ ಬರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮೆಕ್ಕಾವು ಸೌದಿ ಅರೇಬಿಯದಲ್ಲಿದೆಯಲ್ಲಾ? ಅದಕ್ಕಾಗಿ ಅಲ್ಲಿಗೆ ಹೋಗ ಬೇಕು. ಅವರು ಅಲ್ಲಿಗೆ ಯಾಕೆ ಹೋಗಿದ್ದಾರೆಂದು ಬಂದ ಮೇಲೆ ಎಕ್ಸ್‌ಪ್ಲನೇಶನ್ ಕೊಡುತ್ತಾರೆ. There is a time.

ಶ್ರೀ ಎಸ್.ಎಂ.ಕೃಷ್ಣ : ನಮಗೆ ವೈಕುಂಠ ಏಕಾದಶಿಗೆ ತಿರುಪತಿಗೆ ಹೋಗುವ ಅವಕಾಶವಿತ್ತು. ಆದರೆ ಅವರು ಅಲ್ಲಿಗೆ ಬಹಳ ದೂರ ಹೋಗ ಬೇಕಾಯಿತು.

ಶ್ರೀ ಡಿ.ವಿ.ಸದಾನಂದ ಗೌಡ : ಪಾಪ., ಅವರು ಅಲ್ಲಿಗೆ ಹೋಗಿ ಅವರು ಮಾಡಿದಂಥ ಪಾಪ ಕರ್ಮಗಳನ್ನೆಲ್ಲಾ ಕಳೆದುಕೊಂಡು ಇನ್ನು ಮುಂದೆ ಅಂಥ ಕೆಲಸಗಳನ್ನು ಮಾಡದ ಹಾಗೆ ಆ ದೇವರು ಅವರಿಗೆ ಒಳ್ಳೆಯ ಬುದ್ಧಿಯನ್ನು ಕೊಡಲಿ ಎಂದು ನಾವು ಪ್ರಾರ್ಥನೆ ಮಾಡಿಕೊಳ್ಳುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು ಅಲ್ಲಿಗೆ ಹೋಗಿ ನಿಮಗೆ ಒಳ್ಳೆಯ ಬುದ್ಧಿಯನ್ನು ದೇವರು ಕೊಡಲಿ ಎಂದು ಬೇಡಿಕೊಳ್ಳುವುದಕ್ಕೆ ಹೋಗಿದ್ದಾರೆ.

ಶ್ರೀ ಡಿ.ಬಿ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೆ. ಇಲ್ಲಿರುವಂಥ ಸೆಕ್ಷನ್ 203ನಲ್ಲಿನ ಸಬ್‌ರೂಲ್ (2) ಏನು ಹೇಳುತ್ತದೆಂದರೆ, It is a mandatory provision. The Speaker shall read out the letter....

ಅಧ್ಯಕ್ಷರು : ಹಜ್ ಯಾತ್ರೆಗೆ ಹೋಗಿ ವಾಪಸ್ ಬರುತ್ತೇವೆ ಎಂದು ಅವರು ಪತ್ರದಲ್ಲಿ ಬರೆದಿದ್ದಾರೆ.

Sri D.B. SADANANDA GOWDA : That is apart. That ought to have been brought before this House.

MR.SPEAKER : No if it exceeds more than 10 days I have to place it on the floor.

SRI D.B. SADANANDA GOWDA: If there is any dissent, what should be done?

ಅಧ್ಯಕ್ಷರು : ಹತ್ತು ದಿನಗಳ ಒಳಗೆ ನಾವು ಇಲ್ಲಿ ಪ್ಲೇಸ್ ಮಾಡಬೇಕಾಗಿಲ್ಲ ಹಜ್ ಯಾತ್ರೆಗೆ ಹೋಗಿ ವಾಪಸ್ ಬರುತ್ತೇವೆಂದು ತಿಳಿಸಿದ್ದಾರೆ.

Sri D.B. SADANANDA GOWDA : I do concede that. I don't dispute that fact. But still ನಾನು ಇದನ್ನು ಯಾತಕ್ಕೆ ಹೇಳುತ್ತಿದ್ದೇನೆಂದರೆ, ಈಗ ಅವರು ಇಷ್ಟು ದೊಡ್ಡ ಸಸ್ಪಿಶನ್‌ನಲ್ಲಿ ಬಿದ್ದಿರುವಾಗ ಈ ಒಂದು ರೂಲ್ ಅವರಿಗೆ ಗೊತ್ತಿದ್ದರೂ ಇದನ್ನು ಏಕೆ ನಿರ್ಲಕ್ಷ್ಯ ಮಾಡಿದ್ದಾರೆ ?

ಅಧ್ಯಕ್ಷರು : ನೀವು ಹಜ್ ಯಾತ್ರೆಗೆ ಹೋಗಬೇಡಿ ಎಂದು ನಾನು ಹೇಳುವುದಕ್ಕೆ ಆಗುತ್ತದೆಯೇ? How can I direct him?

ಶ್ರೀ ಡಿ.ಬಿ. ಸದಾನಂದಗೌಡ : ನಾವು ಕೂಡ ಅವರಿಗೆ ಹೋಗಬೇಡಿ ಎಂದು ಹೇಳುವುದಿಲ್ಲ ಹೋಗಿ ಎಂದೇ ಹೇಳುತ್ತೇವೆ. ಅವರು ಮಾಡಿದ ಕರ್ಮಗಳೆಲ್ಲವೂ ಹೋಗಬೇಕೆಂದಾದರೆ ಅವರು ಅಂಥ ಸ್ಥಳಗಳಿಗೆ ಹೋಗಬೇಕು. ಅಂಥ ಪವಿತ್ರಸ್ಥಾನಗಳಿಗೆ ಹೋದರೆ ಮಾತ್ರ ಅವರು ಮಾಡಿದ ಪಾಪ ಕರ್ಮಕಾಂಡಗಳಿಗೆ ಬೇರೆ ಎಲ್ಲಿಯೂ ತಿಲಾಂಜಲಿಯಾಗುವುದಿಲ್ಲ.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೆ. ಆ ರೂಲ್‌ಗಳ ಪ್ರಕಾರ ಅದನ್ನು ತಾವು ಸದನದಲ್ಲಿ ಮಂಡನೆ ಮಾಡಿ ಅದಕ್ಕೆ ಸದನದ ಒಪ್ಪಿಗೆಯನ್ನು ತೆಗೆದುಕೊಂಡು Voice ತೆಗೆದುಕೊಳ್ಳುವಂಥದ್ದು ಆಗಬೇಕಾಗಿತ್ತು ಅದು ಆಗಿಲ್ಲ. ಅದು ತಮಗೆ ಬಿಟ್ಟಂಥ ವಿಚಾರವಾದ ಕಾರಣ ನಾನು ಆ ಕುರಿತು ಡೀಪ್ ಆಗಿ ಹೋಗುವುದಿಲ್ಲ. ಆದರೆ ಇದರಲ್ಲಿ ಕಂಡಕ್ಟ್ ಹೇಗಿದೆ ಎಂಬುದನ್ನು ತೋರಿಸುತ್ತದೆ. ನಾವು ಎರಡು ವರ್ಷಗಳ ಹಿಂದೆ ಏನು ಒತ್ತಾಯ ಮಾಡಿದ್ದೆವು ? ರೆಹಾನ್ ಅರೆಸ್ಟ್ ಮಾಡಬೇಕೆಂದು ಒತ್ತಾಯಿಸಿದ್ದೆವು. ಕ್ರಿಮಿನಲ್ ಕೇಸ್ ಫೈಲ್ ಮಾಡಿ ಎಂದು ಒತ್ತಾಯಿಸಿದ್ದೆವು. ಆದರೆ ಅದನ್ನು ಎರಡು ವರ್ಷಗಳಿಂದ ಮಾಡದೆ ಇತ್ತೀಚೆಗೆ ಮಾಡಿದರು ಇವೊತ್ತು ನಾವು ಅದನ್ನೇ ಹೇಳುತ್ತಾ ಇದ್ದೇವೆ. ಇವತ್ತು ಇಷ್ಟೊಂದು ತರಾತುರಿಯಿಂದ ರೋಷನ್‌ಬೇಗ್‌ರವರು ಬಾಂಬೆಗೆ ಹೋಗಿ ಏಕೆ ಮೆಕ್ಕಾಕ್ಕೆ ಹೊಂದರು ಎನ್ನುವಂತಾದ್ದು ಪ್ರಶ್ನೆ ಇದರ ಹಿನ್ನಲೆಯೇನು ? ಅದನ್ನು ನಾವು ಇವೊತ್ತು ಕೇಳಬೇಕಾಗುತ್ತದೆ.

ಅಧ್ಯಕ್ಷರು : ಕೌಲ್ ಅಂಡ್ ಶಕ್ದರ್ ಪಾರ್ಲಿಮೆಂಟರಿ ಪ್ರಾಕ್ಟೀಸ್ ಅಂಡ್ ಪ್ರೊಸಿಜರ್‌ನಲ್ಲಿ ಏನು ಹೇಳುತ್ತಾರೆ It is not necessary to apply for a leave of absence where the period of absence is less than 15 days. Strictly speaking under the provisions of the constitution, it is not necessary to take the permission of the House for leave of absence for less than 60 days, but it is safer for the Member to do so ಎಂದು ಹೇಳುತ್ತಾರೆ. so if it exceeds 60 days....

ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ಅದಕ್ಕೆ ಹೇಳುತ್ತಿರುವುದೇನೆಂದರೆ, ವಿಷಯವನ್ನು ತಮಗೆ ಬಿಟ್ಟಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ರೋಶನ್‌ಬೇಗ್‌ರವರು ಮೆಕ್ಕಾಕ್ಕೆ ಏಕೆ ಹೋಗಿದ್ದಾರೆಂದು ಪದೇ ಪದೇ ಕೇಳುತ್ತಿದ್ದಾರೆ. ಆದರೆ ಮೊನ್ನೆ ಮಾನ್ಯ ಅದ್ವಾನಿಯವರು ಬಂದು ವೈಕುಂಠ ಏಕಾದಶಿ ಎಂದು ಹೇಳಿಕೊಂಡು ನಾಲ್ಕುತಾಸು ತಿರುಪತಿಯಲ್ಲಿ ಯಾರಿಗೂ ಗೊತ್ತಿರಲಾರದಂತೆ ಕುಳಿತಿದ್ದರು. ಅವರು ಯಾಕೆ ಬಂದಿದ್ದರು ಎಂದು ಹೇಳಿಲ್ಲವಲ್ಲಾ?

ಶ್ರೀ ಎಸ್. ಸುರೇಶ್ ಕುಮಾರ್ : ಕಾರಣ ಏನೆಂದು ಹೇಳುತ್ತೇವೆ. ಆಗ ಪಾರ್ಲಿಮೆಂಟ್ ಸೆಷನ್ ನಡೆಯುತ್ತಾ ಇರಲಿಲ್ಲ. ಹಾಗೆಯೇ ರಾಜೀನಾಮೆ ಕೊಟ್ಟು ತಿರುಪತಿಗೆ ಬಂದಿರಲಿಲ್ಲ.

ಶ್ರೀ ಎಸ್.ಎಂ. ಕೃಷ್ಣ : ಇಲ್ಲಿ ವಿರೋಧಿ ಪಕ್ಷದ ನಾಯಕರದ್ದೇನೂ ತಪ್ಪು ಇರಲಿಲ್ಲ. ಅವರ ಡೆಪ್ಯೂಟಿ ಲೀಡರ್ ಮತ್ತು ಇತರರು ರೂಲ್ ಪುಸ್ತಕ ಓದಿ ಬಿಟ್ಟು ಯಾವುದೋ ಒಂದು ಪರ್ಟಿಕ್ಯುಲರ್ ರೂಲ್ ಹೇಳಿ. ಈಗ ತಮ್ಮ ಬಾಯಲ್ಲಿ 14 ದಿವಸಗಳಿಗೆ ಮೇಲ್ಪಟ್ಟು ಒಬ್ಬ ಸದಸ್ಯರು, ಗೌರವಾನ್ವಿತ

ಸದಸ್ಯರು ಈ ಸದನದಿಂದ absent ಆಗಬೇಕಾಗಿದ್ದರೆ ತಮ್ಮ ಅವಗಾಹನೆಗೆ ತರಬೇಕು, ತಾವು ಮೆಂಡಿಟೆರಿಯಾಗಿ, ಅದನ್ನು ಈ ಸಭೆಯ ಗಮನಕ್ಕೆ ತರಬೇಕು, ಆನಂತರ ಯಾರಾದರೂ ಒಬ್ಬರು, ಸುರೇಶ್ ಕುಮಾರ್‌ರಂಥವರು ಒಬ್ಬರು ಅದನ್ನು ಆಗುವುದಿಲ್ಲವೆಂದು ಹೇಳಿದಾಗ sense of the House. ತೆಗೆದುಕೊಳ್ಳಬೇಕು ಎಂದು ಸ್ಪಷ್ಟವಾಗಿ ನಮೂದು ಆಗಿದೆ.

ಶ್ರೀ ಡಿ.ವಿ. ಸದಾನಂದಗೌಡ : ಈ ವಿಚಾರಗಳ ಬಗ್ಗೆ ನಮ್ಮ ಡಿಸ್ಪ್ಯೂಟ್ ಇಲ್ಲ. ಹುಟ್ಟು ಹಬ್ಬ ಆಚರಣೆಗೆ ತಿರುಪತಿಗೆ ಹೋಗಿತ್ತೀರಿ ಅದ್ವಾನಿಯವರು ತಿರುಪತಿಗೆ ಹೋಗುತ್ತಾರೆ, ಮುಂತಾಗಿ ಇರುತ್ತದೆ. ಅದರ ಬಗ್ಗೆ ನಮ್ಮ ಡಿಸ್‌ಪ್ಯೂಟ್ ಇಲ್ಲ. ನಾವೇನು ಹೇಳುತ್ತಿದ್ದೇವೆಂದರೆ, ಈ ಸಂದರ್ಭದಲ್ಲಿ ಅವರು ತತ್‌ಕ್ಷಣ ರಾಜೀನಾಮೆ ಕೊಟ್ಟು ಹೊರದೇಶಕ್ಕೆ ಹೋಗಿರುವಂತಾದ್ದು ಅಥವಾ ಯಾತ್ರೆಗೆ ಹೋಗಿರುವಂತಹದ್ದು ಇಂತಹ ಸಂದರ್ಭಗಳಲ್ಲಿ ಅವರು ಕೊಟ್ಟ ಪತ್ರವನ್ನು ಸದನದ ಗಮನಕ್ಕೆ ತಂದಿದ್ದರೆ ಆ ಮೂಲಕ ಸಂಶಯಕ್ಕೆ ಸ್ವಲ್ಪಮಟ್ಟಿನ ತಿಲಾಂಜಲಿಯಾಗುತ್ತಾ ಇತ್ತು ಎಂಬುದು ನಮ್ಮ ವಾದ.

ಅಧ್ಯಕ್ಷರು : ನಾನು 70 ವರ್ಷಗಳು ಆದ ಮೇಲೆ ನನ್ನ ಹುಟ್ಟಿದ ಹಬ್ಬವನ್ನು ಆಚರಿಸುವುದನ್ನು ಬಿಟ್ಟುಬಿಟ್ಟಿದ್ದೇನೆ. ಏಕೆಂದರೆ I want to forget about that ಅದಕ್ಕೋಸ್ಕರವೇ ನಾನು ಹೊರಟು ಹೋಗುತ್ತಾ ಇದ್ದೇನೆ.

ಅಧ್ಯಕ್ಷರು : ಮಾನ್ಯ ಶೆಟ್ಟರ್‌ರವರೇ ತಮ್ಮ ಭಾಷಣವು 1 ಗಂಟೆ 10 ನಿಮಿಷ ಆಗಿದೆ. ಬೇರೆ ಪಕ್ಷಗಳವರು ಕೂಡ ಮಾತನಾಡುವವರು ಇದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಇನ್ನು ಒಂದೆರಡು ವಿಷಯಗಳನ್ನು ಮಾತ್ರ ಹೇಳಬಯಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಅವರಿಗೆ ಮುಕ್ತವಾದಂಥ ಅವಕಾಶವನ್ನು ಕೊಡಬಹುದು. ಅವರು ಇಡೀ ದಿವಸ ಬೇಕಾದರೂ ಮಾತನಾಡಲಿ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ ಮಾನ್ಯ ಖರ್ಗೆಯವರು ವಿರೋಧಪಕ್ಷದ ನಾಯಕರಾಗಿದ್ದಾಗ ಸತತವಾಗಿ ನಾಲ್ಕೂವರೆ ಗಂಟೆಗಳ ಕಾಲ ಮಾತನಾಡಿದ್ದಾರೆ. ನಿಲುವಳಿ ಸೂಚನೆಯ ಮೇಲೆ ಮಾತನಾಡಿದ್ದರು.

ಅಧ್ಯಕ್ಷರು : ಬೇರೆ ಪಕ್ಷದವರಿಗೂ ಕೂಡ ಮಾತನಾಡಲು ಸಮಯಾವಕಾಶವು ಇರಲಿ ಎಂದು ಹೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಕೂಡ ಮಾತನಾಡಿ. ಬೇಡ ಎಂದು ಹೇಳುವುದಿಲ್ಲ. ಹಾಗೆಯೇ ನೀವೂ ರೆಕಾರ್ಡ್ ಬ್ರೇಕ್ ಮಾಡಿ ಎಂದು ಹೇಳುತ್ತಾ ಇದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ನಾವು ಯಾವಾಗ ರೆಕಾರ್ಡ್‌ಬ್ರೇಕ್ ಮಾಡಬೇಕೆಂದು ಮಾಡಿದ್ದೇವೋ ಆವಾಗ ಅವಕಾಶ ಕೊಡಲಿಲ್ಲ. ಮಾನ್ಯ ಅಧ್ಯಕ್ಷರೇ ನಾವೀಗ ರೋಶನ್‌ಬೇಗ್‌ರವರ ಬಗ್ಗೆ ಮಾತನಾಡುತ್ತಾ ಇದ್ದೇವೆ. ಅವರು ಮೆಕ್ಕಾಕ್ಕೆ ಹೋದರು. ಇವೊತ್ತು ಒಂದು ಗುರುತರವಾದಂಥ ಕಾಗದ ಪತ್ರವು ನಮ್ಮ ಕೈಗೆ ಸಿಕ್ಕಿದೆ. ಒಬ್ಬ ಮಹಮದ್ ಸಾದಿಕ್ ಎನ್ನುವಂಥ ಆರೋಪಿ, ಆತನ ಹೇಳಿಕೆ ಅದರಲ್ಲಿದೆ. ಇವೊತ್ತು ಹೊರಜಗತ್ತಿನೊಳಗೆ ಯಾರೋ ಒಬ್ಬ ಬಂಗಾರವನ್ನು ಕಳವು ಮಾಡಿರುತ್ತಾನೆ, ಆತನು ಬಂಗಾರವನ್ನು ಕಳವು ಮಾಡಿ ಅದನ್ನು ನಾಲ್ಕು ಜನ ಸರಾಫ್‌ರಿಗೆ ಮಾರಾಟ ಮಾಡಿರುತ್ತಾನೆ. ಅದು ಒಂದು ತೊಲನೋ ಒಂದು ಕೆ.ಜಿ.ಯೋ ಇರಬಹುದು. ಹೀಗೆ ಮಾಡುತ್ತಾ ಒಮ್ಮೆ ಪೊಲೀಸರ

ಕೈಗೆ ಸಿಕ್ಕಿ ಬೀಳುತ್ತಾನೆ. ಪೊಲೀಸರ ಕೈಗೆ ಸಿಕ್ಕಮೇಲೆ ಅವನನ್ನು ಕೇಳುತ್ತಾರೆ, ಕದ್ದ ಬಂಗಾರವನ್ನು ಎಲ್ಲೆಲ್ಲಿ ಯಾವ ಸರಾಫರ ಅಂಗಡಿಯಲ್ಲಿ ಮಾರಿದ್ದಿ ಎಂದು ಕೇಳುತ್ತಾರೆ. ಆಗ ಅವನು ಹತ್ತು ಜನರ ಹೆಸರನ್ನು ಹೇಳುತ್ತಾನೋ ನಾಲ್ಕೂ ಮಂದಿ ಹೆಸರು ಹೇಳುತ್ತಾನೋ ಅಥವಾ ಪೊಲೀಸರು ಅದಕ್ಕೆ ಸೇರಿಸುತ್ತಾರೋ ಆಗ ಆ ಹತ್ತು ಮಂದಿ ಯಾರ್‍ಯಾರು ಸರಾಫರ್ ಇದ್ದಾರೆ, ಅವರ ಕಡೆಗೆ ಆರೋಪಿಯನ್ನು ಕರೆದುಕೊಂಡು ಹೋಗುತ್ತಾನೆ.

12.30 ಪಿ.ಎಂ.

ಯಾರನ್ನು ಅವನು ಗುರ್ತು ಮಾಡುತ್ತಾನೆ ಅವರನ್ನು ಜೈಲಿಗೆ ಹಾಕಿದರು, ಹೀಗೆ ಎಷ್ಟೋ ಸರಾಫರನ್ನು ಒಳಕ್ಕೆ ಹಾಕಿದ್ದಾರೆ. ಕಳವು ಮಾಡಿದ್ದ ಬಂಗಾರವನ್ನು ನೀವು ಖರೀದಿ ಮಾಡಿದ್ದೀರಿ ಅದಕ್ಕೆ ನೀವೂ ಆರೋಪಿ ಅದಕ್ಕೇ ನಡೆಯಿರಿ ಪೊಲೀಸ್ ಸ್ಟೇಷನ್ನಿಗೆ ಅಂತ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿದ್ದ ಉದಾಹರಣೆ ನಮ್ಮ ಮುಂದಿವೆ ಇವತ್ತು. ಇವತ್ತು. ಕೇವಲ ಒಬ್ಬ ಆರೋಪಿಯ ಹೇಳಿಕೆ ಮೇಲೆ ಬಂಗಾರ ಮಾರುವಂತಹ ನೂರೆಂಟು ಸರಾಫರ ಮೇಲೆ ಕ್ರಿಮಿನಲ್ ಕೇಸ್ ಹಾಕಿರುವುದು ಇದೆ. ಇಲ್ಲಿ ಇವತ್ತು ಸ್ಟೇಟ್‌ಮೆಂಟ್ ನಮ್ಮ ಮುಂದಿದೆ. ಒಬ್ಬ ಆರೋಪಿಯ ಸ್ಟೇಟ್‌ಮೆಂಟ್, ಅದೂ ಕರೀಂಲಾಲಾನ ಜೊತೆಗೆ ನಿಕಟಸಂಪರ್ಕವಿದ್ದಂತಹ ಮಹಮ್ಮದ್ ಎಂಬ ಆರೋಪಿಯ ಸ್ಟೇಟ್‌ಮೆಂಟ್, ಪಾಲಿಗ್ರಫಿಕ್ ಹೇಳಿಕೆ, ಇದರಲ್ಲಿ ಸ್ಪಷ್ಟವಾಗಿ ರೋಷನ್ ಬೇಗ್ ಅವರ ಹೆಸರು ಬಂದಿದೆ. ಕರೀಂ ಲಾಲಾ ಜೊತೆ ರೋಷನ್ ಬೇಗ್ ನಿಕಟ ಸಂಬಂಧದ ಬಗ್ಗೆ ನಾವು ಸದನದಲ್ಲಿ ಆರೋಪ ಮಾಡಿದ್ದೆವು, ರೋಷನ್‌ಬೇಗ್ ಪದೇ ಪದೇ ಬಾಂಬೆಗೆ ಹೋಗುತ್ತಾರೆ, ಸ್ಟಾರ್ ಹೋಟೆಲ್‌ನಲ್ಲಿ ಕರೀಂಲಾಲಾ ಜೊತೆ ಸಾಕಷ್ಟು ಸಭೆ ಮಾಡಿದ್ದಾರೆ. ವ್ಯವಹಾರ ಮಾಡಿದ್ದಾರೆ ಎಂದೆಲ್ಲಾ ನಾವು ಸಾಕಷ್ಟು ಆರೋಪ ಮಾಡಿದ್ದೇವೆ. ಇಲ್ಲಿ ಆವಾಗೆಲ್ಲಾ ಡಿನೈ ಮಾಡಿದರು. ರೋಷನ್ ಬೇಗ್ ಅವರು ಡಿನೈ ಮಾಡಿದರು. ಸರ್ಕಾರವೂ ಡಿನೈ ಮಾಡಿತು ಮತ್ತೆ ನಾನು ನನ್ನ ಕಚೇರಿಯಿಂದ ರೋಷನ್ ಬೇಗ್‌ರವರಿಗೆ ನೇರ ಒಂದು ಪತ್ರ ಬರೆದಿದ್ದೆ ನೀವು ಮಂತ್ರಿಯಾದ ಮೇಲೆ ಇಲ್ಲಿಯವರೆಗೂ ಎಲ್ಲೆಲ್ಲಿ ಪ್ರವಾಸ ಮಾಡಿದ್ದೀರಿ, ಅಧಿಕೃತ ಪ್ರವಾಸ ಇರಬಹುದು ಯಾವುದೇ ಪ್ರವಾಸ ಇರಬಹುದು ಎಲ್ಲೆಲ್ಲಿ ಮಾಡಿದ್ದಿರಿ ಅದರ ವಿವರಗಳನ್ನು ನನಗೆ ಒದಗಿಸಿಕೊಡಿ ಅಂತ, ಮೊದಲಿಗೆ ನಾನು ಬರೆದದ್ದು ನವೆಂಬರ್ 2001. ಆನಂತರ ನಾನು ಪ್ರತಿ ವರ್ಷ ಅವರಿಗೆ ಪತ್ರ ಬರೆಯುತ್ತಿದ್ದೇನೆ ಇನ್ನೂವರೆಗೆ ಒಂದೇ ಒಂದು ವರ್ಷದ ಒಂದೇ ಒಂದು ತಿಂಗಳ ಅವರ ಪ್ರವಾಸದ ಕಾಪಿ ನಮ್ಮ ಕಚೇರಿಗೆ ಕಳುಹಿಕೊಡಲಿಲ್ಲ. ಇಲ್ಲಿ ನಾವೇನು ಹೇಳುತ್ತಿದ್ದೆವು, ನೀವು ಪದೇ ಪದೇ ಬಾಂಬೆಗೆ ಹೋಗುತ್ತೀರಿ ಅಲ್ಲಿ ಕರೀಂಲಾಲ್ ಜೊತೆ ಮಾತನಾಡುತ್ತೀರಿ, ಮೀಟಿಂಗ್ ಮಾಡುತ್ತೀರಿ, ವ್ಯವಹಾರ ಕುದುರಿಸುತ್ತೀರಿ ಅಂತ, ಇದು ಏನು? ಈ ವಿಷಯಗಳನ್ನು ಮುಚ್ಚಿಡುವಂತಹದು, ಇದೆಲ್ಲಾ ಏನನ್ನು ಗುರ್ತಿಸುತ್ತಿದೆ? ವಿಷಯಗಳನ್ನು ಮುಚ್ಚಿಡುವಂತಹದು ನೇರವಾಗಿ ಸಂಪರ್ಕ ಇರುವಂತಹದು, ಮತ್ತೆ ಈ ರೀತಿ ಒಬ್ಬ ಆರೋಪಿ ರೋಷನ್ ಬೇಗ್‌ರ ಹೆಸರು ತೆಗೆದುಕೊಂಡ ಮೇಲೆ ಮೊದಲಿಗೇ ನೀವು ಮಾಡಬೇಕಾದ ಕೆಲಸವೇನು? ರಾಜ್ಯಸರ್ಕಾರದ ಕೇಸ್ ಏನು? ರೋಷನ್ ಬೇಗ್ ಮೇಲೆ ಕ್ರಿಮಿನಲ್ ಕೇಸ್ ಫೈಲ್ ಮಾಡಬೇಕಾಗಿತ್ತು. ತಕ್ಷಣವೇ FIR ಕಳುಹಿಸಬೇಕಾಗಿತ್ತು ಈ ಡಾಕ್ಯುಮೆಂಟ್ ಹೊರಗೆ ಬಿದ್ದ ತಕ್ಷಣವೇ ಇದು ನಿಮ್ಮ ಪೊಸೆಶನ್‌ನಲ್ಲಿದ್ದ ಕಾಗದ, ಇದನ್ನು ಎರಡು ವರ್ಷದ ಹಿಂದೇನೇ ಮಾಡಬೇಕಾಗಿತ್ತು ನೀವು ಫೆಬ್ರವರಿ 2001–02 ರಲ್ಲಿ ಯಾವಾಗ ಡಾಕ್ಟರು ಇದರ ರಿಪೋರ್ಟ್ ಕಳುಹಿಸಿದರು, ಅದರ ಮರುದಿವಸವೇ

ನೀವು ರೋಷನ್ ಬೇಗ್ ಮೇಲೆ ಕಳುಹಿಸಬೇಕಾಗಿತ್ತು ಕಾನೂನು ಕ್ರಮ ತೆಗೆದುಕೊಳ್ಳಬೇಕಾಗಿತ್ತು ಅವರನ್ನು ತಕ್ಷಣವೇ ನೀವು ಬಂಧಿಸಬೇಕಾಗಿತ್ತು ಯಾಕೆ ಮಾಡಲಿಲ್ಲ? ಯಾಕೆ ರಕ್ಷಣೆ ಮಾಡಿದಿರಿ? ಅಂದರೆ ಈ ಕಾಗದ ನಿಮ್ಮ ಕೈಯಾಗೆ ಇದ್ದೂ ರೋಷನ್ ಬೇಗ್ ಹೆಸರನ್ನು ಆ ಆರೋಪಿ ನೇರವಾಗಿ ಹೇಳಿದ ಸಂದರ್ಭದಲ್ಲಿ ಅಂತಹ ಮಂತ್ರಿಯನ್ನು ನೀವು ಕ್ಯಾಬಿನೆಟ್‌ನಲ್ಲಿಟ್ಟುಕೊಂಡು ಕ್ಯಾಬಿನೆಟ್ ಮೀಟಿಂಗ್ ಮಾಡಿದಿರಿ, ನಾಚಿಕೆ ಬರಬೇಕು, ನಿಮಗೆ ಏನು ನಡೆಯುತ್ತಾ ಇದೆ ಕ್ಯಾಬಿನೆಟ್‌ನಲ್ಲಿ ಒಬ್ಬ ಗುರುತರವಾದ ಆರೋಪಿ, 30ಸಾವಿರ ಕೋಟಿಯ ಭ್ರಷ್ಟಾಚಾರದ ವ್ಯಕ್ತಿಯ ಜೊತೆ ಸಂಪರ್ಕವಿದ್ದ ಒಬ್ಬ ಮಂತ್ರಿ ಎರಡು ವರ್ಷದಿಂದ ಕ್ಯಾಬಿನೆಟ್‌ನಲ್ಲಿ ನಿಮ್ಮ ಪ್ರೊಸಿಡಿಂಗ್ಸ್ ನೋಡಿದ್ದಾರೆ, ನಿಮ್ಮ ಸೀಕ್ರೆಸಿ, ಈ ರಾಜ್ಯದ Finance ಇನ್ನಿತರ ಡಿಸಿಶನ್‌ಗಳಿಗೆಲ್ಲಾ ಭಾಗಿಯಾಗಿದ್ದಾರೆ ಎಂದರೆ ಇದರಷ್ಟು ನಾಚಿಕೆಗೇಡಿನ ವಿಷಯ ಮತ್ಯಾವುದಿದೆ? ಹೀಗಾಗಿ ಇದಕ್ಕೆ ಸರ್ಕಾರದಿಂದ ಉತ್ತರವೇನು ಎಂದು ಕೇಳಬಯಸುತ್ತೇನೆ. ನಿಮ್ಮ ಮೊಟ್ಟಮೊದಲ ಕರ್ತವ್ಯ ಕ್ರಿಮಿನಲ್ ಕೇಸ್ ಹಾಕಿ ಅವರನ್ನು ಅರೆಸ್ಟ್ ಮಾಡಬೇಕಾಗಿತ್ತು. ಅದು ಮಾಡಲಿಲ್ಲ ಅಂದರೆ ರಕ್ಷಣೆ ಮಾಡುವಂತಹದು, ದಿನನಿತ್ಯ ಇದರ ಬಗ್ಗೆ ವೇಗ್ ಆದ ಆನ್ಸರ್ ಮತ್ತು ಆ ಭ್ರಷ್ಟ ವ್ಯಕ್ತಿಗಳನ್ನು ರಕ್ಷಣೆ ಮಾಡುವಂತಹ ಕೆಲಸ ಮುಖ್ಯಮಂತ್ರಿಗಳು ಮತ್ತು ಗೃಹ ಮಂತ್ರಿಗಳು ಮಾಡಿದರು ಎಂದು ಇವತ್ತು ನಾನು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ. ಅದರಲ್ಲಿ ನಿಮ್ಮದೂ ಜವಾಬ್ದಾರಿ ಬರುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿದ್ದೇನೆ. ಯಾಕೆ ಇವನ್ನೆಲ್ಲಾ ಮುಚ್ಚಿಟ್ಟಿರಿ ಅಂತ ನಾನು ಇವತ್ತು ಹೇಳಬೇಕಾಗುತ್ತದೆ. ಡಾ: ಮಾಲಿನಿ ವರದಿ ಕೊಟ್ಟಿರುವುದರಲ್ಲಿ ಕೊನೆಯಲ್ಲಿ ಕನ್‌ಕ್ಲೂಷನ್ ಇದೆ, ಅವರು ಕೆಲವೊಂದು ಪ್ರಶ್ನೆಗಳನ್ನು ಮತ್ತೆ ಕೇಳಿದ್ದಾರೆ, ಇವತ್ತೇನು ಕೆಲವು ಪ್ರಶ್ನೆಗಳನ್ನು ಪಾಲಿಗ್ರಾಫಿಕೆ ಟೆಸ್ಟ್‌ನಲ್ಲಿ ಕೇಳಿದರು ಆ ಸಂದರ್ಭದಲ್ಲಿ ಏನು ಆನ್ಸರ್ ಕೊಟ್ಟರು ಅದನ್ನು ಆಗಲೇ ಹೇಳಿದೆ. ಇನ್ನೂ ಕೆಲವೊಂದು ಪ್ರಶ್ನೆಗಳನ್ನು ಕೇಳಿದಾಗ ಅವ ಉತ್ತರ ಕೊಡಲಿಲ್ಲ. ಉತ್ತರ ಕೊಡಲು ಆ ವ್ಯಕ್ತಿ avoid ಮಾಡಿದ, ಇಲ್ಲಿ ಹೇಳುತ್ತಾರೆ ಪ್ರಶ್ನೆ ನಂ. 6 Did you visit Mumbai several times and are you aware where the stamp papers were printed? Did you pay to Treasury and Stamp Registration office regularly to cover up illegal act? ಇಂತಹ ನಾಲ್ಕೈದು ಪ್ರಶ್ನೆ ಇವೆ. ಇದಕ್ಕೆ ಅವ ಉತ್ತರ ಕೊಡಲು ಅವಾಯಿಡ್ ಮಾಡಿದ್ದಾನೆ. ಆ ಮಹಮದ್ ಎಂಬ ಆ ಆರೋಪಿ. ಆಗ ಅವರು ಕನ್‌ಕ್ಲೂಷನ್‌ಗೆ ಬರುತ್ತಾರೆ, ಏನಂತ? When the questions related to the circulation of fake stamp papers were administered to Mr. Mohamed Khaliff, the Chemographic indicated the sign of deception. This suggests that the above-mentioned accused have knowledge about the crime.He says that the above mentioned accused have knowledge about the crime. In view of the above, it is advised to subject Mr. Mohamed Sadiq to Narco Analysis with the prior permission from the court. ಅಂದರೆ ಪಾಲಿಗ್ರಾಫಿಕ್‌ನಡಿ ಕೆಲವೊಂದು ಪ್ರಶ್ನೆಗಳನ್ನು ಅವರು ಕೇಳಿದಾಗ ಅದಕ್ಕೆ satisfaction ಆಗಲಿಲ್ಲ ಅದಕ್ಕೆ ಇನ್ನೂ ಮುಂದಿನ ಒಂದು ಪರೀಕ್ಷೆ ಮಾಡಬೇಕು ಎಂದು ಹೇಳಿದರು. Narco Analysis exam ಮಾಡಬೇಕು ಎಂಬುದು, ಅದಕ್ಕೆ ಕೋರ್ಟಿನ ಅನುಮತಿ

ಪಡೆಯಬೇಕು ಎಂಬುದು, ಯಾವಾಗ ರಿಪೋರ್ಟ್ ಕೊಟ್ಟಿದ್ದಾರೆ? ಫೆಬ್ರವರಿ 20 2002, ಅಲ್ಲಿಂದ ಈ ಡಾಕ್ಯುಮೆಂಟ್ ನಿಮ್ಮ ಕಸ್ಟಡಿಯಲ್ಲಿದೆ, ಇವತ್ತೇ ನಮಗೆ ಹೊರಗೆ ಬಂದಿದೆ. ಫೆಬ್ರವರಿ 2002 ರಿಂದ ಇಲ್ಲಿಯವರೆಗೆ ಒಂದು ವರ್ಷದ 11 ತಿಂಗಳಾಯಿತು, ಮುಂದಿನ ಫೆಬ್ರವರಿಗೆ ಎರಡು ವರ್ಷವಾಗುತ್ತದೆ, ಇದನ್ನು ನಿಮ್ಮ ನಿಮ್ಮ ಪೊಲೀಸ್ ಕಸ್ಟಡಿಯಲ್ಲಿಟ್ಟುಕೊಂಡೂ ಅನುಮತಿಗಾಗಿ ಕೋರ್ಟಿಗೆ ಯಾಕೆ ಹೋಗಲಿಲ್ಲ ನೀವು? ಈ Narco Analysis test ಸಲುವಾಗಿ ಕೋರ್ಟನ್ನು ಯಾಕೆ ಅಪ್ರೋಚ್ ಮಾಡಲಿಲ್ಲ? ಪರ್ಮಿಷನ್ ಏಕೆ ಕೇಳಲಿಲ್ಲ? ಇಷ್ಟೊಂದು preliminary ಆಗಿ ರೋಷನ್ ಬೇಗ್ ಹೆಸರು ಬಂದರೂ ನೀವು ಸುಮ್ಮನೆ ಕೂತಿರಿ, ಅಂದರೆ ರೋಷನ್ ಬೇಗ್‌ರವನ್ನು ರಕ್ಷಣೆ ಮಾಡಬೇಕೆಂಬುದು ನಿಮ್ಮ ಜವಾಬ್ದಾರಿಯಾಗಿತ್ತು- ಅದಕ್ಕಾಗಿ ಇದನ್ನು ಹಾಗೇ ನೀವು ಮೂಲೆಗುಂಪು ಮಾಡಿದಿರಿ, ಕಸದ ಬುಟ್ಟಿಗೆ ಹಾಕಿದಿರಿ, ನಿಮಗೆ ನಿಜವಾಗಿ ಕಳಕಳಿ ಇದ್ದರೆ ಈ ಪ್ರಕರಣದಲ್ಲಿ ಯಾರ್‍ಯಾರು ಇದ್ದಾರೆ ಅವರನ್ನು ನಿಜವಾಗಿ ಅರೆಸ್ಟ್ ಮಾಡಬೇಕು ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಬೇಕು ಎಂದು ನಿಮಗೆ ನಿಜವಾದ ಕಳಕಳಿ ಇದ್ದರೆ ಈ ಟೆಸ್ಟಿಗೆ ಕಳುಹಿಸಬಹುದಿತ್ತು ಇನ್ನೂವರೆಗೆ ಕಳುಹಿಸಲಿಲ್ಲ. ಹೀಗಾಗಿ ಭ್ರಷ್ಟರನ್ನು ರಕ್ಷಣೆ ಮಾಡುವಂತಹ ಕೆಲಸ ಸತತವಾಗಿ ಈ ಸರ್ಕಾರದಿಂದ ನಡೆಯುತ್ತಿದೆ ಎಂಬುದನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಾ ಇದ್ದೇನೆ. ಇದರ ಬಗ್ಗೆನೂ ಏನು ಕ್ರಮವಿಲ್ಲ.

ಶ್ರೀಮತಿ ನಫೀಜಾ ಫಜಲ್ (ವಿಜ್ಞಾನ, ತಂತ್ರಜ್ಞಾನ ಇಲಾಖೆಯ ರಾಜ್ಯ ಸಚಿವರು) : ಅಧ್ಯಕ್ಷರೆ ಮಾನ್ಯ ಜಗದೀಶ್ ಶೆಟ್ಟರ್ ಹೇಳುತ್ತಿದ್ದಾರೆ ಇದು ಕಾಂಗ್ರೆಸ್ ಸರ್ಕಾರದ್ದು ತಪ್ಪು ಅಂತ, ಇದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ನನ್ನ ಹತ್ತಿರ Deccan Herald copy ಇದೆ. ತಮಗೆ ಕಳುಹಿಸಿಕೊಡುತ್ತೇನೆ. It is dated 20th December 2003. Copy of the Deccan Hearld says; Admitting that there were security lapses at Indian Security press in Nasik, Union Finance Minister Jaswanth Singh said on Friday, the CBI had been asked to find out 'if any member of the Finance Ministery was involved. He also said adequate safety measures were not taken by officials at the time of selling the obsolete printing machines in March-April 1998. So the crux of the matter was the Centre was responsible for the safety of this press. The printing started in Nasik. The Government of Karnataka had nothing to do with Nasik ನಿಮ್ಮ ಕೇಂದ್ರ ಸರ್ಕರದಿಂದ ತಾವೇನು ಕ್ರಮ ತೆಗೆದುಕೊಂಡಿದ್ದೀರಿ ದಯವಿಟ್ಟು ಅದನ್ನು ಹೇಳಿ, ಸುಮ್ಮನೆ ನಮ್ಮ ಮೇಲೆ ತಾವು ಆಪಾದನೆ ಮಾಡಿ ಏನೂ ಪ್ರಯೋಜನವಿಲ್ಲ. They have not gone to the root of the problem. It has happened in Nasik. This is the responsibility of the Centre. So what you have about the role of the Center to say which of your Union ministers and Board are in this scam? Please tell us everying about it.

ಶ್ರೀ ಜಗದೀಶ್ ಶೆಟ್ಟರ್ : ಅಧ್ಯಕ್ಷರೆ ಮಾನ್ಯ ಸಚಿವರಾದ ನಫೀಜಾ ಫಜಲ್‌ರವರನ್ನು next time parliament ಗೆ ಟಿಕೆಟ್ ಕೊಟ್ಟರೆ ಒಳ್ಳೆಯದಾಗುತ್ತದೆ. ಅಥವಾ ರಾಜ್ಯಸಭಾ ಮೆಂಬರ್

ಮಾಡಿದರೆ ಒಳ್ಳೆಯದಾಗುತ್ತದೆ. ಅಲ್ಲಿ ಕಾಂಗ್ರೆಸ್‌ನವರು ಪ್ರತಿಪಕ್ಷದವರು ಯಾಕೆ ಸುಮ್ಮನೆ ಕೂತಿದ್ದಾರೆ ಅಂತ? ಪ್ರತಿಪಕ್ಷದ ನಾಯಕರು ನನಗೆ ಅರ್ಥವಾಗುತ್ತಾ ಇಲ್ಲ.

ಶ್ರೀಮತಿ ನಫೀಜಾ ಫಜಲ್ : ಮಾನ್ಯ ಅಧ್ಯಕ್ಷರೆ The Finance Minister says that, there is a lapse in the National Security Press. Why don't you reply to that? ನಾನು ನೇರ ಪ್ರಶ್ನೆ ಕೇಳುತ್ತಿದ್ದೇನೆ ಅದಕ್ಕೆ ತಾವು ಉತ್ತರ ಕೊಡಿ ಆಮೇಲೆ ಎಲ್ಲಾ ಆಪಾದನೆ ಹಾಕಿ ಎಲ್ಲರ ಮೇಲೆ

ಶ್ರೀ ಎ. ರಾಮದಾಸ್: ನಫೀಜಾ ಫಜಲ್‌ರವರು AICC ಯಲ್ಲಿ ಈ ವಿಷಯವನ್ನು ವಿರೋಧ ಪಕ್ಷದ ನಾಯಕಿಯಾಗಿದ್ದಾರಲ್ಲಾ ಸೋನಿಯಾ ಗಾಂಧಿಯವರು ಅವರಿಗೆ ಕೇಳಬೇಕಾಗಿತ್ತು ಅಲ್ಲಿ ಕೇಳಿ ಅಂತ, ಆದರೆ ರಾಂಗ್ ಅಡ್ರೆಸ್ಸಲ್ಲಿ ಅವರು ಕೋಟ್ ಮಾಡುತ್ತಿದ್ದಾರೆ.

ಶ್ರೀಮತಿ ನಫೀಜಾ ಫಜಲ್: ಅವರಿಗೆ ಉತ್ತರ ಕೊಡಲಿಕ್ಕೆ ಧೈರ್ಯವಿಲ್ಲ. ಅದಕ್ಕೆ ಎಐಸಿಸಿ ಎಂದು ಹೇಳುತ್ತಾರೆ.

ಶ್ರೀ ಎನ್. ಯೋಗೀಶ್ ಭಟ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶೆಟ್ಟರ್‌ರವರು ಆ ಪತ್ರವನ್ನು ಪೂರ್ತಿ ಓದಿಲ್ಲ.

ಶ್ರೀ ಕರಿಯಣ್ಣ : ಮಹಿಳಾ ಮಂತ್ರಿಗಳು ಸತ್ಯ ಹೇಳಿದರೆ ಬಹಳ ಸದಸ್ಯರುಗಳಿಗೆ ಕೋಪ ಬರುತ್ತದಲ್ಲಾ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ನಫೀಸಾ ಫಜಲ್‌ರವರು ನಾಸಿಕ್ ಪ್ರಿಂಟಿಂಗ್ ಪ್ರೆಸ್ ಬಗ್ಗೆಯೆಲ್ಲಾ ಹೇಳಿದರು, ಅಲ್ಲಿ ಮೊದಲನೇ ಪ್ರಿಂಟಿಂಗ್ ಪ್ರೆಸ್ ಮಾರಾಟವಾಗಿರುವುದು 1996ರಲ್ಲಿ ಆಗ ಯಾವುದು ಸೆಂಟ್ರಲ್ ಗೌರ್ನಮೆಂಟ್ ಆಗ ಕಾಂಗ್ರೆಸ್‌ನವರು ಇದ್ದರು 95–96 ರಲ್ಲಿ ಇವರೇ ಕಾಂಗ್ರೆಸ್‌ನವರೇ ಇದ್ದರು. ಈಗಾಗಲೇ ಜಸ್ವಂತ್‌ಸಿಂಗ್‌ರವರು ಈ ನಾಸಿಕ್ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಇದ್ದಂಥ ಮೆಷಿನರಿ ಬಗ್ಗೆ ಅದನ್ನು ತಕ್ಷಣವೇ ಸಿಬಿಐಗೆ ಕೊಟ್ಟುಬಿಟ್ಟರು. ಈಗಾಗಲೇ ಕೆಲವು ಅಧಿಕಾರಿಗಳೂ ಕೂಡ ಸಸ್ಪೆಂಡ್ ಆಗಿದ್ದಾರೆ. ಹೀಗಾಗಿ ಈ ಎಲ್ಲಾ ಪ್ರಶ್ನೆಗಳನ್ನು ಪಾರ್ಲಿಮೆಂಟ್‌ನಲ್ಲಿ ಎತ್ತಬಹುದಾಗಿತ್ತು. ಎತ್ತಿಲ್ಲ, ಅದು ನಮ್ಮ ದುರ್ದೈವ.

ಶ್ರೀಮತಿ ನಫೀಸಾ ಫಜಲ್ : 1999 ರಲ್ಲಿ ಮಾನ್ಯ ಜಸ್ವಂತ್ ಸಿಂಗ್‌ರವರೇ ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ಆಗಲೇ ರೆಫರ್ ಮಡುತ್ತಿದ್ದೆ. ಇವತ್ತು ರೋಷನ್ ಬೇಗ್ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಬೇಕು. ಅವರನ್ನು ಅರೆಸ್ಟ್ ಮಾಡಬೇಕು ಎಂದು ಒಬ್ಬ ಆರೋಪಿಯಾಗಿ ಅವರ ಹೆಸರು ಬಂದಿದೆ. ಇನ್ನೂ ಏತಕ್ಕೆ ಮಾಡಿಲ್ಲ ಎನ್ನುವ ಬಗ್ಗೆ ರಾಜ್ಯಸರ್ಕಾರ ಹೇಳಬೇಕಾಗುತ್ತದೆ. ಅಂದರೆ ಇವರು ರಾಜೀನಾಮೆಯನ್ನು ಕೊಟ್ಟ ಹಾಗೆ ತೆಗೆದುಕೊಂಡರು. ಅವರನ್ನು ಮೆಕ್ಕಾಗೆ ಕಳುಹಿಸಿಬಿಟ್ಟರು ಅವರು ಇರಬೇಕಾಗಿತ್ತು ಅವರು ಫೇಸ್ ಮಾಡಬೇಕಾಗಿತ್ತು ನಿಜವಾಗಿಯೂ ಅವರು ನಿರಪರಾಧಿ, ಇದರಲ್ಲೇನೂ ನನ್ನ ಪಾಲಿಲ್ಲ, ಈ ಡಾಕ್ಯುಮೆಂಟ್‌ನ್ನು ಏನು ಹಾಜರಿ ಮಾಡಿದ್ದಾರೆ ಅದು ಸರಿಯಿಲ್ಲ, ಇಲ್ಲಿ ಅವರು ನಿಜವಾಗಿಯೂ ಬಂದು ರೋಷನ್ ಬೇಗ್‌ರವರು ಹೇಳಬೇಕಾಗಿತ್ತು . ಅವರು ಈ ಸದನವನ್ನು ಪೇಸ್ ಮಾಡಬೇಕಾಗಿತ್ತು. ರೋಷನ್ ಬೇಗ್‌ರವರು ಬಹಳ ಮಾತನಾಡಿ ಹೋಗಿದ್ದಾರೆ. ಇವತ್ತು ಅವರು ಬಂದು ಹೇಳಬೇಕಾಗಿತ್ತು. ಏಕೆ ಹೇಳಿಲ್ಲ? ಏಕೆ ನೀವು ಅವರ ಮೇಲೆ ಆಕ್ಷನನ್ನು ತೆಗೆದುಕೊಂಡಿಲ್ಲ? ಅವರ ಪಾಸ್‌ಪೋರ್ಟ್‌ನ್ನು

ರದ್ದು ಮಾಡಬೇಕಾಗಿತ್ತು ಅದು ಮೊದಲನೇ ಕೆಲಸ ಪಾಸ್‌ಪೋರ್ಟ್‌ನ್ನು ರದ್ದು ಮಾಡಬೇಕು. ಅವರ ಪ್ರಾಪರ್ಟೀಸ್ ಎಲ್ಲಾ ಸೀಜ್ ಮಾಡಬೇಕು ಅವರ ಬ್ಯಾಂಕ್ ಅಕೌಂಟನ್ನು ಸೀಜ್ ಮಾಡಬೇಕು ಇನ್ನೂ ಏತಕ್ಕೆ ಮಾಡಿಲ್ಲ? ಮತ್ತು ಇದೇ ರೀತಿ ರಕ್ಷಣೆ ಮಾಡಿಕೊಂಡು ಬಂದಿದ್ದೀರಿ. ರೆಹನ್ ಬೇಗ್‌ರವರ ಪಾಸ್‌ಪೋರ್ಟ್‌ನ್ನು ರದ್ದುಮಾಡಬೇಕೆಂದು ಹೇಳಿದ್ದೆವು. ಅಕೌಂಟನ್ನು ಸೀಜ್ ಮಾಡಿ ಎಂದು ಹೇಳಿದ್ದೆವು . ಪ್ರಾಪರ್ಟಿ ಸೀಜ್ ಮಾಡಿ ಎಂದು ಹೇಳಿದ್ದೆವು ನೀವು ಮಾಡಲಿಲ್ಲ ಮೊನ್ನೆ ಅರೆಸ್ಟ್ ಮಾಡಿದಿರಿ ಇವತ್ತು ಈ ಪಾಸ್‌ಪೋರ್ಟ್‌ನ್ನು ಇನ್ನೂವರೆಗೂ ಏಕೆ ಸೀಜ್ ಮಾಡಿಲ್ಲ? ರೋಷನ್ ಬೇಗ್‌ರವರ ಪಾಸ್‌ಪೋರ್ಟ್‌ನ್ನು ಏಕೆ ಸೀಜ್ ಮಾಡಿಲ್ಲ? ಮೆಕ್ಕಾಗೆ ಹೋಗಿ ಅವರನ್ನು ಕರೆದುಕೊಂಡು ಬನ್ನಿ. ಅರೆಸ್ಟ್ ಮಾಡಿಕೊಂಡು ಕರೆದುಕೊಂಡು ಬನ್ನಿ ಏಕೆ ಮಾಡಲಿಲ್ಲ? ಅಂದರೆ ಇದು ಕೇವಲ You are doing drama. ನಾವೇನೊ ಮಾಡಿದಂಗೆ ಮಾಡುತ್ತೇವೆ, ನಡೆಯುತ್ತದೆ ಹೀಗೆ ಎಂದು ಹೇಳಿ. ಈ ರೀತಿ ರಕ್ಷಣೆ ಮಾಡುವಂಥದ್ದು ಇದು ಬಹಳ ದಿವಸ ನಡೆಯುವುದಿಲ್ಲ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. ಅದಕ್ಕಾಗಿ ನಾನು ಇವತ್ತು ಇಲ್ಲಿ ಡಿಮ್ಯಾಂಡ್ ಮಾಡುತ್ತಿದ್ದೇನೆ, ರೋಷನ್ ಬೇಗ್ ಅವರನ್ನು ಅರೆಸ್ಟ್ ಮಾಡಿ. ಅವರ ಮೇಲೆ ಕ್ರಿಮಿನಲ್ ಕೇಸನ್ನು ಹಾಕಿ ಅರೆಸ್ಟ್ ಮಾಡಿ ಅವರ ಪ್ರಾಪರ್ಟಿಯನ್ನು ಸೀಜ್ ಮಾಡಿ, ಪಾಸ್‌ಪೋರ್ಟ್‌ನ್ನು ರದ್ದುಮಾಡಿ ಅವರು ಮೆಕ್ಕದಲ್ಲೇ ಇರಲಿ, ಎಲ್ಲಿಯೇ ಇರಲಿ, ಅವರನ್ನು ಕರೆದುಕೊಂಡು ಬನ್ನಿ. ತಕ್ಷಣ ಅರೆಸ್ಟ್ ಮಾಡಿಕೊಂಡು ಅದು ನಿಮ್ಮ bonafide ತೋರಿಸುತ್ತದೆ. ಅದನ್ನು ಬಿಟ್ಟು ಕೇವಲ ನಾವು ಅದನ್ನು ಮಾಡಿದ್ದೇವೆ. ಇದನ್ನು ಮಾಡಿದ್ದೇವೆ ಎಂದು ಹೇಳುವಂಥದ್ದು, ಅದು ಆಗಬಾರದು. ಮತ್ತೊಂದು ಕರ್ನಾಟಕದಲ್ಲಿ ಬೆಂಗಳೂರಿನಲ್ಲಿ ಒಂದು ಟ್ರಸ್ಟ್ ಇದೆ Reach Foundation ಎಂದು. ಆ Reach foundation activities ನ್ನು ನೋಡಿದರೆ ಅದು ರೀಚ್ ಅಲ್ಲ. ಅದು Rich foundation ವರ್ಷ ವರ್ಷ ಕೋಟ್ಯಾಂತರ ರೂಪಾಯಿ ಹಣ ಇವತ್ತು ಆ ಟ್ರಸ್ಟ್‌ಗೆ ಜಮಾ ಆಗುತ್ತಿದೆ ಈ ರೀಚ್ ಫೌಂಡೇಷನ್ ಯಾರದ್ದು ಎಂದು ಸರ್ಕಾರಕ್ಕೆ ಗೊತ್ತಿದೆ Reach Foundation Chairman ಯಾರಿದ್ದಾರೆ, ಅದು ಸರ್ಕಾರಕ್ಕೆ ಗೊತ್ತಿದೆ. ಅವರು ಹೇಳಲಿ. ನಾನು ಇವತ್ತು ಸ್ಪಷ್ಟವಾಗಿ ಹೇಳುತ್ತೇನೆ. ನನಗೆ ಬಂದಂಥ ಮಾಹಿತಿ ಇವತ್ತು ಬಾಂಬೆಯಲ್ಲಿದ್ದಂಥ ಸಿಟಿ ಬ್ಯಾಂಕ್ ಫೋರ್ಟ್ ಬ್ರಾಂಚ್‌ನಿಂದ ಕೋಟ್ಯಾಂತರ ರೂಪಾಯಿ ಹಣ ಈ Reach Foundation account ಗೆ ಜಮಾ ಆಗಿದೆ. ಅದು ಯಾರದ್ದು? ಈ ಸಿಟಿ ಬ್ಯಾಂಕ್ ಫೋರ್ಟ್ ಬ್ರಾಂಚ್ ಏನು ಬಾಂಬೆಯಲ್ಲಿ ಇದೆ, ಅದು ಕರೀಂಲಾಲ ಹೆಸರಿನಲ್ಲಿದ್ದಂಥ ಅಕೌಂಟ್, ಆ ಅಕೌಂಟ್‌ನಿಂದ ಕೋಟ್ಯಾಂತರ ರೂಪಾಯಿ ಹಣ ಈ Reach foundation ಗೆ ಜಮಾ ಆಗಿದೆ. ಸಾಕಷ್ಟು ಸಲ ಜಮಾ ಆಗಿದೆ. ನನಗೆ ಬಂದಂಥ ಮಾಹಿತಿ ಅದು ಎಂಟು ಕೋಟಿ ರೂಪಾಯಿಗಳಿಗಿಂತಲೂ ಜಾಸ್ತಿ ಹಣ ಜಮಾ ಆಗಿದೆ ಇತ್ತೀಚಿನ ವರ್ಷಗಳಲ್ಲಿ ಅದನ್ನೇ ತೆಗೆದುಕೊಂಡು ದಾಂ ದೂಂ ಮಾಡಿ ಏನು ಬೇರೆ ಬೇರೆ ಗಣ್ಯ ವ್ಯಕ್ತಿಗಳನ್ನು ಕರೆಸಿಕೊಂಡು ಸನ್ಮಾನ ಏನೇನೋ ಮಾಡುವಂಥದ್ದು ಈ Reach foundation ನಲ್ಲಿ ನಡೆಯುತ್ತಿದೆ. ಅಲ್ಲಿಗೆ ಕೋಟ್ಯಾಂತರ ರೂಪಾಯಿ ಹಣ ಬರುತ್ತದೆ. ಹಾಗಾದರೆ ನೀವ್ಯಾಕೆ ಇದರ ಬಗ್ಗೆ ತನಿಖೆಯನ್ನು ಮಾಡಲಿಲ್ಲ? ಈ Reach foundation ಗೆ ಯಾರು ಟ್ರಸ್ಟೀಸ್ ಇದ್ದಾರೆ, ಅವರ ಮೇಲೆ ಏಕೆ ಕ್ರಮ ತೆಗೆದುಕೊಳ್ಳಲಿಲ್ಲ? ನಾನು ಇವತ್ತು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈ Reach foundation ಏನು ಇದೆ chairman ಅದಕ್ಕೆ ಮುಖ್ಯ ಟ್ರಸ್ಟಿ ಇವತ್ತು ರೋಷನ್ ಬೇಗ್ ಅವರು ಇದ್ದಾರೆ. ಇದರ

ವ್ಯವಹಾರವನ್ನು ತೆಗೆಯಿರಿ. ಇದರ ಅಕೌಂಟನ್ನು ತೆಗೆಯಿರಿ. ಎಲ್ಲಿಂದ ಜಮಾ ಆಗಿದೆ, ಎಲ್ಲಾ ಗೊತ್ತಾಗುತ್ತದೆ. ಇಷ್ಟು ಗುರುತರವಾದಂಥ ಅಕೌಂಟ್ ಎಲ್ಲಾ ನಡೆದಿದೆ. ಕೋಟ್ಯಾಂತರ ರೂಪಾಯಿ ಹಣ, ಇಲ್ಲೀಗಲ್ ಹಣ ಇವತ್ತು ಅಲ್ಲಿ ಬಂದು ಜಮಾ ಆಗುವಂಥ ಸಮಯದಲ್ಲಿ ನೀವು ಕೈಕಟ್ಟಿಕೊಂಡು ಕುಳಿತಿದ್ದೀರಾ ಮುಖ್ಯಮಂತ್ರಿಗಳು ಗೃಹಸಚಿವರು? ನಿಮ್ಮ ಜವಾಬ್ದಾರಿ ಏನೂ ಇಲ್ಲವೇ ಹಾಗಾದರೆ? ಇಂಥ ಮಂತ್ರಿಗಳನ್ನು ಇಟ್ಟುಕೊಂಡು ನೀವು ಎರಡು ವರ್ಷ ಆಡಳಿತವನ್ನು ಮಾಡಿದಿರಾ? ನಿಮಗೆ ನಾಚಿಕೆ ಬರಬೇಕು. ಹೀಗಾಗಿ ಇವತ್ತು ನಿಮ್ಮ ಗುಪ್ತ ದಳ ಇರಬಹುದು, ನಿಮ್ಮ ಗೃಹ ಇಲಾಖೆ, ನಿಮ್ಮ ಪೋಲೀಸ್ ವ್ಯವಸ್ಥೆ ಎಲ್ಲಾ ಹಾಳಾಗಿಹೋಗಿಬಿಟ್ಟಿದೆ. ಕೋಟ್ಯಾಂತರ ರೂಪಾಯಿ ಲೂಟಿ ನಡೆದು ಹಾಳು ಮಾಡಿದ್ದೀರಿ. ಹೀಗಾಗಿ ನಾನೇನು ಇವತ್ತು ಕೇಳುತ್ತಿದ್ದೇನೆ, ಇವತ್ತು ಯಾವ ರೀತಿ ಬೇರೆ ರಾಜ್ಯಗಳಲ್ಲಿ ನಾನು ಮೊದಲೇ ಹೇಳಿದೆ, ಇವತ್ತು ಇಲ್ಲಿ Stampit ಮಾಡಿದ್ದೀರಿ ಅದರ ನೇತೃತ್ವ ವಹಿಸಿದಂಥ ಶ್ರೀಕುಮಾರ್ ಇರಬಹುದು, ಅವರೇನು ತನಿಖೆಯನ್ನು ಮಾಡುತ್ತಿದ್ದಾರೆ, ಅವರ ಬಗ್ಗೆ ನಮಗೆ ಸಂಶಯವಿಲ್ಲ, ಆದರೆ ಯಾವುದೋ ಒಂದು ಒತ್ತಡದಲ್ಲಿ ಯಾವ ತೀವ್ರ ಗತಿಯಿಂದ ಯಾರ್ಯಾರು ಇದರಲ್ಲಿ ಬಲಿ ಬೀಳಬೇಕಾಗಿತ್ತು ಅದು ಇವತ್ತಿನವರೆಗೂ ಬಲಿ ಬೀಳುತ್ತಿಲ್ಲ ಇವತ್ತು ಏನಾಗಿದೆ, ಎಷ್ಟು ಮಂದಿಗೆ ಇವತ್ತು ಈ Stampit ನಿಂದ 74 ಅಪರಾಧಿಗಳ ಹೆಸರುಗಳು ಬಂದಿದ್ದಾವೆ. ಅದರ ಬಗ್ಗೆ ಇಲ್ಲಿಯವರೆಗೆ 59 ಆರೋಪಿಗಳನ್ನು ಮಾತ್ರ ಬಂಧಿಸಲಾಗಿದೆ ಉಳಿದವರನ್ನು ಇನ್ನೂವರೆಗೆ ಬಂಧಿಸಲಿಕ್ಕಾಗಿಲ್ಲ. ಹೀಗಾಗಿ ಇವತ್ತು ಮಹಾರಾಷ್ಟ್ರದಲ್ಲಿ ಏನಾಗಿದೆ; ಇವತ್ತು ಅಲ್ಲಿ High court under ನಲ್ಲಿ ನಡೆಯುತ್ತಿದೆ Investigation. ಇವತ್ತು High court ನವರ direction ಮೇಲೆ ಅಲ್ಲಿರುವಂಥ ತನಿಖಾ ತಂಡ ಏನು ಇದೆ, ಅವರು ನೇರವಾಗಿ high court ಗೆ report ನ್ನು ಮಾಡುತ್ತಾರೆ. ಇವತ್ತೇನಾಯಿತು. ಇವತ್ತು ಯಾರ ಮೇಲೆ chargesheet ಹಾಕಿದೆ, ಹಾಕಿದೆ, ಯಾರನ್ನು ಅರೆಸ್ಟ್ ಮಾಡಿದೆ? ನೇರವಾಗಿ ಅವರು high court ಗೆ report ನ್ನು ಸಬ್‌ಮಿಟ್ ಮಾಡುತ್ತಿದ್ದಾರೆ. ಅಲ್ಲಿ high court ನವರೇ direction ನ್ನು ಕೊಡುತ್ತಿದ್ದಾರೆ. ಇದು ಮಾಡಿ ಅದು ಮಾಡಿ ಎಂದು. ಆದರೆ ಇಲ್ಲೇನಾಗಿದೆ..ಇವತ್ತು ಮುಖ್ಯಮಂತ್ರಿಗಳ under ಗೃಹಮಂತ್ರಿಗಳ under ನಲ್ಲಿ ಈ Stampit ಕೆಲಸವನ್ನು ಮಾಡುತ್ತಿದೆ ಅದಕ್ಕೆ ನಾನು ಇವತ್ತು ಒಂದು ಹಂತದಲ್ಲಿ ಸಂಶಯಪಡುತ್ತಿದ್ದೇನೆ. ಯಾವ ತೀವ್ರಗತಿಯಿಂದ ಯಾವ ದೊಡ್ಡ ದೊಡ್ಡ ತಿಮಿಂಗಿಲಗಳನ್ನು ಹಿಡಿಯಬೇಕಾಗಿತ್ತು ದೊಡ್ಡದೊಡ್ಡ ಕುಳಗಳನ್ನು ಹಿಡಿಯಬೇಕಾಗಿತ್ತು. ಅದು ಇವತ್ತು ಇಲ್ಲಿ ಆಗುತ್ತಿಲ್ಲ, ಈ ಕಾರಣದ ಸಲುವಾಗಿ ಅದಕ್ಕಾಗಿ ನಾವು ಮೊದಲಿನಿಂದಲೂ ಸಿಬಿಐ ತನಿಖೆಯನ್ನು ಮಾಡಿ ಎಂದು ಒತ್ತಾಯವನ್ನು ಮಾಡುತ್ತಿದ್ದೇವೆ, ಇವತ್ತು ನನಗೆ ಎಲ್ಲಿಯವರೆಗೆ ಮಾಹಿತಿ ಇದೆ. ಕರೀಂಲಾಲ ಜೈಲಿನಲ್ಲಿದ್ದಾಗ ನವೆಂಬರ್ ತಿಂಗಳಲ್ಲಿ ಒಬ್ಬರು ಹಿರಿಯ ಸಚಿವರು ಹಿರಿಯ ಪೋಲೀಸ್ ಅಧಿಕಾರಗಳ ಜೊತೆ ಕರೀಂಲಾಲನ ಜೊತೆ ಒಂದು ತಾಸುಗಟ್ಟಲೆ ಚರ್ಚೆ ಮಾಡಿದ್ದಾರೆನ್ನುವಂಥದ್ದು. ಅದು ಯಾರು ಏನು ಎಂದು ರೆಕಾರ್ಡ್ಸ್ ಎಲ್ಲಾ ಇರುತ್ತದೆ. ಅದನ್ನು ಮಾಡುತ್ತಾರೆ. ಅದರ ಬಗ್ಗೆ ಸರ್ಕಾರ ಪರಿಶೀಲನೆಯನ್ನು ಮಾಡಲಿ ಸರ್ಕಾರಕ್ಕೆ ಗೊತ್ತಿದೆ. ಅದರ ಬಗ್ಗೆ ಹೇಳಲಿ, ಯಾವ ಮಂತ್ರಿಯಾಗಿದ್ದರು. ಏನು ಎನ್ನುವಂಥದ್ದು. ಕರೀಂಲಾಲನ ಜೊತೆ ಒಂದು ತಾಸು ಚರ್ಚೆ ಮಾಡುವಂಥದ್ದು ಏನಿತ್ತು? ನೀವು ಅಧಿಕಾರಿಗಳನ್ನು ಕಳುಹಿಸಿ enquiry ಯನ್ನು ಮಾಡಿ ಅಲ್ಲಿ ಜೈಲಿಗೆ ಹೋಗಿ ರಾತ್ರಿ ಹೊತ್ತಿನಲ್ಲಿ ಹೋಗಿ ಒಂದು ತಾಸು ಕರೀಂಲಾಲನ ಜೊತೆ

ಚರ್ಚೆ ಮಾಡುವಂಥದ್ದು ಸಮಾಲೋಚನೆಯನ್ನು ಮಾಡುವಂಥಾದ್ದು ಯಾವ ವಿಷಯದ ಮೇಲೆ ಸಮಾಲೋಚನೆ? ಹೀಗಾಗಿ ಆ ಮಂತ್ರಿಗಳು ಯಾರು ಎಂದು ರಾಜ್ಯಸರ್ಕಾರ ಮಾನ್ಯ ಮುಖ್ಯಮಂತ್ರಿಗಳು disclose ಮಾಡಬೇಕಾಗುತ್ತದೆ. ಇವತ್ತು ಸಾರ್ವಜನಿಕರಲ್ಲಿ ಚರ್ಚೆಯಾಗುತ್ತಿದೆ. ಹೀಗಾಗಿ ಇವನ್ನೆಲ್ಲಾ ಏಕೆ ಮುಚ್ಚಿಡುತ್ತಿದ್ದೀರಿ? ಹೀಗಾಗಿ ಎಲ್ಲಾ ರೀತಿಯ ಸಂಶಗಳು ಇವತ್ತು ಚಾಲೂ ಆಗಿದ್ದಾವೆ. ಇವತ್ತೇನು ಆ ಕರೀಂಲಾಲನನ್ನು ವೈಜ್ಞಾನಿಕ ತಪಾಸಣೆ ಮಾಡಿದಂಥ ಸಂದರ್ಭದಲ್ಲಿ ಮರುದಿವಸ ಪತ್ರಿಕೆಯಲ್ಲಿ ಹೆಸರು ಬಂತು. ಇದರಲ್ಲಿ ಕೇವಲ ಒಬ್ಬರು ಮಂತ್ರಿಯಲ್ಲ, ಇಬ್ಬರು ಮಂತ್ರಿಗಳ ಹೆಸರುಗಳನ್ನು ಹೇಳಿದ್ದಾನೆ. ಕೆಲವು ಐಎಎಸ್ ಅಧಿಕಾರಿಗಳು ಐ.ಪಿ.ಎಸ್ ಅಧಿಕಾರಿಗಳ ಹೆಸರುಗಳನ್ನು ಆ ಕರೀಂಲಾಲ ಹೇಳಿದ್ದಾನೆ ಎನ್ನುವುದು ಬಂತು. ಹಾಗಾದರೆ ಆ ಮಂತ್ರಿಗಳು ಯಾರು? ಆ ಅಧಿಕಾರಿಗಳ್ಯಾರು? ಅವರನ್ಯಾಕೆ ನೀವು ಇನ್ನೂ ಬಲಿ ಹಾಕಿಲ್ಲ? ಅಲ್ಲಿ ಮಹಾರಾಷ್ಟ್ರದಲ್ಲಿ ಬಾಂಬೆ ಪೋಲೀಸ್ ಕಮೀಷನರ್ ಅವರು ಬಲಿ ಬೀಳುತ್ತಾರೆ. ಇಬ್ಬರು ಎಂಎಲ್‌ಎಗಳನ್ನು ಅಸೆಂಬ್ಲಿಯಲ್ಲಿ ಅರೆಸ್ಟ್ ಮಾಡಿದ್ದಾರೆ. ಇನ್ನು ಕೆಲವು ಹಿರಿಯ ಪೋಲೀಸ್ ಅಧಿಕಾರಿಗಳು ಇವತ್ತು ಬಲಿ ಬಿದ್ದಿದ್ದಾರೆ. ಅವರು ಜೈಲಿನಲ್ಲಿ ಹೋಗಿ ಕಂಬಿ ಎಣಿಸುತ್ತಿದ್ದಾರೆ. ಆದರೆ ಇಲ್ಲಿ ರಾಜ್ಯ ಸರ್ಕಾರದಲ್ಲಿ ಇವತ್ತು ಏನೂ ಅದೆಲ್ಲಾ ಆಗುತ್ತಿಲ್ಲ, ಈ ತನಿಖಾ ತಂಡದಿಂದ ಇವೆಲ್ಲಾ ಬಲಿ ಹಾಕಲಿಕ್ಕಾಗುತ್ತಿಲ್ಲ. ಅದಕ್ಕಾಗಿ ಎಲ್ಲಿ ಒತ್ತಡ ಇದೆ, ಏನು ಇದೆ, ಆ ಮಂತ್ರಿಗಳು ಯಾರು? ಇನ್ನೂ ಇಬ್ಬರು ಸಚಿವರ ಹೆಸರುಗಳೂ ಬರುತ್ತಿವೆ, ಅವರು ಯಾರು? ಏನು? ರೋಷನ್ ಬೇಗ್‌ರವರ ರಾಜೀನಾಮೆಯನ್ನು ಕೊಡಿಸಿದಿರಿ. ಕೇವಲ ರೋಷನ್ ಬೇಗ್ ರಾಜೀನಾಮೆ ನಡೆಯುತ್ತದೆಯೇ? ಇನ್ನು ಕೆಲವು ಮಂತ್ರಿಗಳು ಇದ್ದಾರಲ್ಲಾ ಅವರೂ ರಾಜೀನಾಮೆಯನ್ನು ಕೊಡಬೇಕಾಗುತ್ತದೆ. ಮುಖ್ಯಮಂತ್ರಿಗಳು ಇದರ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕಾಗುತ್ತದೆ. ಅವರು ರಾಜೀನಾಮೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ನಾನು ಇವತ್ತು ರಾಜ್ಯಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ, ಇವತ್ತು ಏನಾಗಿದೆ ಒಂದು ಕಡೆ ಸರ್ಕಾರ ಅಂದರೆ ನೀವು ಸಿಬಿಐಗೆ ಒಪ್ಪಿಸಲು ಡಿಸಿಷನ್ ತೆಗೆದುಕೊಂಡಿದ್ದೀರಿ ಆದರೆ ನಿಮ್ಮ ರಾಜ್ಯ ಕಾಂಗ್ರೆಸ್ ಅಧ್ಯಕ್ಷರು ಒಂದು ಕಡೆ ಆ ರೀತಿ decision ಆಗಿಲ್ಲವೆಂದು ಹೇಳುತ್ತಾರೆ ಆಮೇಲೆ ರೋಷನ್ ಬೇಗ್ ಅವರ ರಾಜೀನಾಮೆ ಅದಕ್ಕೊಂದು ಅವರು ತಕ್ಷಣವೇ ಪತ್ರಿಕಾಗೋಷ್ಠಿಯನ್ನು ಕರೆಯುತ್ತಾರೆ. ಇಲ್ರೀ ರೋಷನ್ ಬೇಗ್ ರಾಜೀನಾಮೆಯನ್ನು ಕೊಟ್ಟಿಲ್ಲ, ಎಂದು ಹೇಳುತ್ತಾರೆ. ಅಂದರೆ ಏನು ನಡೆಯುತ್ತಿದೆ? ಅಂದರೆ ಯಾವ ವಿಷಯವನ್ನು ಮುಚ್ಚಿ ಹಾಕುವಂಥದ್ದು ಇವೆಲ್ಲಾ ನಡೆಯುತ್ತಿದೆ ಎನ್ನುವಂಥದ್ದು ಇವತ್ತು ಸರ್ಕಾರ ಅದನ್ನೆಲ್ಲಾ ಹೇಳಬೇಕಾಗುತ್ತದೆ. ಅದಕ್ಕಾಗಿ ನಾನು ಇವತ್ತು ಸರ್ಕಾರಕ್ಕೆ ಒತ್ತಾಯ ಮಾಡುವಂತಹದು ಎಂದರೆ ಇಲ್ಲೇನು ರೋಷನ್ ಬೇಗ್ ಅವರು ಅಪರಾಧಿ ಸ್ಥಾನದಲ್ಲಿ ನಿಂತಿದ್ದಾರೆ, ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಬೇಕು, ಅವರನ್ನು ತಕ್ಷಣವೇ ಬಂಧಿಸಬೇಕು. ಅವರ ಅಕೌಂಟ್ಸ್ ಸೀಜ್ ಮಾಡಬೇಕು, ಅವರ ಪಾಸ್‌ಪೋರ್ಟ್ ರದ್ದು ಮಾಡಬೇಕು, ಇವೆಲ್ಲಾ ಮೊಟ್ಟಮೊದಲು ಮಾಡುವಂತಹ ಕೆಲಸಗಳು ಆಮೇಲೆ ಇವತ್ತೇನು ಸೆಕ್ಷನ್ 268 ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ನೀವೇನು ಶೆಲ್ಟರ್ ತೆಗೆದುಕೊಂಡಿದ್ದೀರಿ ಅವರನ್ನು ಎಲ್ಲೂ ಹೊರಗೆ ಕಳುಹಿಸಬಾರದು ಅದು 268 ಸೆಕ್ಷನ್ ಪ್ರಾವಿಜನ್ ಪ್ರಕಾರ ಆರ್ಡರ್ ಏನು ಮಾಡಿದ್ದೀರಿ, ಆ ಆರ್ಡರನ್ನು ತಕ್ಷಣವೇ ರದ್ದು ಮಾಡಬೇಕು, ಆತನು ಬೇಕಾದಲ್ಲಿ ಹೋಗಲಿ, ಇನ್‌ವೆಸ್ಟಿಗೇಷನ್ ಆಗಲಿ, ತನಿಖೆ ನಡೆಯಲಿ, ಆಮೇಲೆ ಮತ್ತೊಂದು ವಿಚಾರ ಹೇಳುವಂತಹದು ಎಂದರೆ ಯಾರ್‍ಯಾರು ಮಂತ್ರಿಗಳು

ಇವತ್ತು ಇದ್ದಾರೆ, ಆ ಮಂತ್ರಿಗಳ ಹೆಸರು ಇವತ್ತು ಡಿಸ್‌ಕ್ಲೋಸ್ ಆಗಬೇಕಾಗಿದೆ. ಯಾರ‍್ಯಾರು ಹಿರಿಯ ರಾಜಕಾರಣಿಗಳು ಇದ್ದಾರೆ, ಅವರ ಹೆಸರೂ ಡಿಸ್‌ಕ್ಲೋಸ್ ಆಗಬೇಕಾಗಿದೆ, ಹಿರಿಯ ಪೊಲೀಸ್ ಅಧಿಕಾರಿಗಳು ಇದ್ದಾರೆ, ಅವರುಗಳ ಹೆಸರೂ ಹೊರಗೆ ಬರಬೇಕು, ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತಹದು ಆಗಬೇಕು. ಮತ್ತು ಇದನ್ನು ಸಿಬಿಐ ತನಿಖೆಗೆ ಕೊಡುವಂತಹದು ಆಗಬೇಕು. ಇದು ಕೇವಲ ನಾಟಕ ಮಾಡುವಂತಹದು ಬೇಡ. ಜನರ ಕಣ್ಣಿಗೆ ಮಣ್ಣೆರೆಚುವಂತಹ ಕೆಲಸ ಬೇಡ. ತಕ್ಷಣವೇ ನೀವು ಪತ್ರವನ್ನು ಬರೆಯಿರಿ. ಸುಪ್ರೀಂ ಕೋರ್ಟಿಗೆ ಹೇಗಾದರೂ ನೀವು ಈಗಾಗಲೇ ಸಬ್ಮಿಟ್ ಮಾಡಿದ್ದೀರಿ. ನಿಮ್ಮ ಇನ್‌ಟೆನ್‌ಷನ್ ಏನು ಇದೆ ಎಂದು ಈಗಾಗಲೇ ಸಬ್ಮಿಟ್ ಮಾಡಿದ್ದೀರಿ, ಅದರ ಪ್ರಕಾರ ಸಿಬಿಐಗೆ ಒಂದು ನೋಟಿಫಿಕೇಶನ್ ಹೊರಡಿಸಿ ತಕ್ಷಣವೇ ಒಂದು ಲೆಟರ್ ಬರೆಯಿರಿ. ಆಮೇಲೆ ನಾನು ಮತ್ತೊಂದು ವಿಚಾರ ಹೇಳುತ್ತಿದ್ದೇನೆ. ಇದು ಕೇವಲ ಒಬ್ಬ ರೋಷನ್ ಬೇಗ್ ಹಾಗೂ ಇನ್ನಿತರ ಮಂತ್ರಿಗಳು ಅಲ್ಲ. ಇಡೀ ಸರ್ಕಾರವೇ ಇದರ ಜವಾಬ್ದಾರಿಯ ಹೊಣೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂತಹ ಅಪರಾಧಿಗಳನ್ನು ಇವತ್ತು ಕ್ಯಾಬಿನೆಟ್‌ನಲ್ಲಿ ಇಟ್ಟುಕೊಂಡು ಸರ್ಕಾರ ನಡೆಸಿದ್ದೀರಿ. ಅಪರಾಧಿಗಳ ಹೆಸರು ಗೊತ್ತಿದ್ದೂ ಅವರ ಮೇಲೆ ನೀವೇನೂ ಆಕ್ಷನ್ ತೆಗೆದುಕೊಳ್ಳಲಿಲ್ಲ. ಹೀಗಾಗಿ ಇವತ್ತು ಇಡೀ ಸರ್ಕಾರವೇ ಜವಾಬ್ದಾರಿ ಆಗಬೇಕಾಗುತ್ತದೆ. ಪ್ರಮುಖವಾಗಿ ಮಾನ್ಯ ಮುಖ್ಯಮಂತ್ರಿಗಳು ಜವಾಬ್ದಾರಿಯ ಹೊಣೆಯನ್ನು ಹೊತ್ತುಕೊಳ್ಳಬೇಕಾಗುತ್ತದೆ. ಮಾನ್ಯ ಗೃಹ ಮಂತ್ರಿಗಳು ಹೊಣೆ ಹೊತ್ತುಕೊಳ್ಳಬೇಕಾಗುತ್ತದೆ. ಇಡೀ ಸರ್ಕಾರವೇ ಹೋಗಬೇಕಾಗುತ್ತದೆ. ಇಡೀ ಸರ್ಕಾರವೇ ಇವತ್ತು ರಾಜೀನಾಮೆ ಕೊಟ್ಟು ಹೋಗಬೇಕಾಗುತ್ತದೆ. ಅದಕ್ಕೆ ನಾನು ಒತ್ತಾಯ ಮಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ತಕ್ಷಣವೇ ರಾಜೀನಾಮೆ ಕೊಟ್ಟು ಈ ಒಂದು ಜವಾಬ್ದಾರಿಯ ಹೊಣೆಯನ್ನು ಹೊತ್ತುಕೊಳ್ಳಬೇಕಾಗುತ್ತದೆ ಎಂಬ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಅದಕ್ಕಾಗಿ ಸರ್ಕಾರ ಇದರ ಬಗ್ಗೆ ಒಂದು ಸರಿಯಾದಂತಹ ಸ್ಪಷ್ಟನೆ ಮಾಡಬೇಕು. ಮತ್ತು ರಾಜೀನಾಮೆ ಕೊಟ್ಟು ಹೋಗಬೇಕು ಎನ್ನುವಂತಹ ಒಂದು ಒತ್ತಾಯವನ್ನು ಮಾಡಿ ಇವತ್ತೇನು ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಇಲ್ಲಿ ಅವಕಾಶವನ್ನು ಅಧ್ಯಕ್ಷರು ಕೊಟ್ಟಿದ್ದೀರಿ, ಮತ್ತು ಇಲ್ಲಿ ಸಾಕಷ್ಟು ಇವತ್ತು ಗುರುತರವಾದಂತಹ ಮತ್ತು ಕೆಲವೊಂದು ವಿಷಯಗಳು ಇದ್ದಾವೆ. ಬರಗಾಲದ ಪರಿಸ್ಥಿತಿ ರೈತರ ಸಮಸ್ಯೆಗಳು ಇವೆ. ಇವತ್ತು ಹಳದಿ ಕಾರ್ಡ್ಸ್ ಬಗ್ಗೆ ಇರಬಹುದು, ಬೆಳೆ ವಿಮೆ ಹಣ ಬಿಡುಗಡೆ ಆಗದೇ ಇರುವಂತಹದು ಇರಬಹುದು. ಬರಗಾಲದ ಕಾಮಗಾರಿಗಳನ್ನು ತೆಗೆದುಕೊಳ್ಳದೇ ಇರುವಂತಹದು ಇರಬಹುದು. ಈಗಾಗಲೇ ಉತ್ತರ ಕರ್ನಾಟಕದ ಭಾಗದ ರೈತರು ಬಂದು ಚಳುವಳಿ ಮಾಡುತ್ತಿದ್ದಾರೆ. ಬೇರೆ ಬೇರೆ ಭಾಗದಿಂದ ಇವತ್ತು ರೈತರು ಬಂದು ಧರಣಿ, ಸತ್ಯಾಗ್ರಹ ಬೆಂಗಳೂರಿನಲ್ಲಿ ಮಾಡುತ್ತಿದ್ದಾರೆ. ಬೀದಿಗೆ ಬಿದ್ದು ಇವತ್ತು ಧರಣಿ ಸತ್ಯಾಗ್ರಹ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಆ ವಿಷಯಗಳನ್ನು ಪ್ರೈಯಾರಿಟಿ ಮೇಲೆ ಚರ್ಚೆಗೆ ತೆಗೆದುಕೊಳ್ಳಬೇಕಾಗಿತ್ತು. ಆದರೆ ಇವತ್ತು ಈ ವಿಚಾರ ಚರ್ಚೆಗೆ ತೆಗೆದುಕೊಂಡಿದ್ದೇವೆ. ಇದು ಎಲ್ಲಕ್ಕಿಂತ ಮಹತ್ವವಾದುದು. ಇವತ್ತು ಭ್ರಷ್ಟಾಚಾರದ ವ್ಯವಸ್ಥೆ ಬಗ್ಗೆ ಜನರಿಗೆ, ರೈತರಿಗೆ ಆಕ್ರೋಶ ಇರುವಂತಹ ಈ ಸಂದರ್ಭದಲ್ಲಿ ಈ ಭ್ರಷ್ಟ ವ್ಯಕ್ತಿಗಳನ್ನು ಮನೆಗೆ ಕಳುಹಿಸುವಂತಹ ವ್ಯವಸ್ಥೆ ಆಗುವ ಸಲುವಾಗಿ ಇವರ ಮೇಲೆ ಕಾನೂನು ಕ್ರಮ ಕೈಗೊಳ್ಳುವ ಸಲುವಾಗಿ ಇವತ್ತು ಭಾರತೀಯ ಜನತಾ ಪಾರ್ಟಿ ಈ ವಿಷಯವನ್ನು ಪ್ರೈಯಾರಿಟಿ ಮೇಲೆ ನಾವು ತೆಗೆದಿಕೊಂಡಿದ್ದೇವೆ. ಇನ್ನೂ ಬೇರೆ ವಿಷಯಗಳ ಬಗ್ಗೆ ಚರ್ಚೆ ಮಾಡುವುದಿದೆ ಆ ವಿಷಯಗಳನ್ನೂ

ನಾವು ಮುಂದೆ ಚರ್ಚೆ ಮಾಡುವವರು ಇದ್ದೇವೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ಇವತ್ತು ಪ್ರಮುಖವಾಗಿ ಈ ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಕೊಟ್ಟಿದ್ದೀರಿ, ತಮಗೆ ಅಭಿನಂದನೆಗಳನ್ನು ಸಲ್ಲಿಸಿ ಮತ್ತು ತಕ್ಷಣವೇ ಮಾನ್ಯ ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕು, ಈ ಸರ್ಕಾರ ಹೋಗಬೇಕು ಎನ್ನುವಂತಹ ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

+ **ಶ್ರೀ ಬಿ. ಸೋಮಶೇಖರ್ (ಮಳವಳ್ಳಿ)** : ಮಾನ್ಯ ಸಭಾಧ್ಯಕ್ಷರೆ, ಈ ಒಂದು ಈ ವಿಚಾರದ ಗಾಂಭೀರ್ಯತೆಯನ್ನು ಅರ್ಥ ಮಾಡಿಕೊಂಡು ಪ್ರಮುಖ ವಿರೋಧ ಪಕ್ಷಗಳು ಏನು ಅಡ್ಜರ್ನಮೆಂಟ್ ಮೋಷನ್ ಮೂವ್ ಮಾಡಿದ್ದೆವು ಅದನ್ನು ತಾವು ನಿಯ 69ರಡಿಯಲ್ಲಿ ಸಮಯವನ್ನು ಹೆಚ್ಚು ವ್ಯಯ ಮಾಡದೇ ತಾವು ಚರ್ಚೆ ಮಾಡಬಹುದು ಎಂದು ಹೇಳಿ ಅವಕಾಶವನ್ನು ಕೊಟ್ಟಿದ್ದೀರಿ. ನಿಜವಾಗಲೂ ನಾನು ಅದನ್ನು ಆಭಿನಂದಿಸುತ್ತೇನೆ. ಸರ್ಕಾರವೂ ಬಹಳ ಧಾರಾಳವಾಗಿ ಚರ್ಚೆಗೆ ಅವಕಾಶಕೊಟ್ಟಿದೆ. ಬಹಳ ಸಂತೋಷ, ಸ್ವಲ್ಪ ಹಠ ಮಾಡಬಹುದೇನೋ ಎಂದು ನಾನು ಅಂದುಕೊಂಡಿದ್ದೆ. ಸಿಬಿಐಗೆ ರೆಫರ್ ಆಯಿತು. ತಾವು ಕೇಳಿದ್ದೀರಿ ಒಬ್ಬ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆ ಇನ್ನೇನು ಇದೆ? ಚರ್ಚೆ ಬೇಡ ಎಂದು ಹೇಳಬಹುದೇನೋ ಎಂದು ನಾನು ಅಂದುಕೊಂಡಿದ್ದೆ, ಆದರೆ ತಾವು ಬಹಳ ವಿಶಾಲವಾಗಿ ಮುಕ್ತ ಚರ್ಚೆಗೆ ಅವಕಾಶವನ್ನು ಕೊಟ್ಟಿದ್ದೀರಿ ಮತ್ತು ನಾವು ಮಾತನಾಡತಕ್ಕದ್ದನ್ನು ಸಹಿತ ಸ್ವಲ್ಪ ಅಡಚಣೆ ಇಲ್ಲದೇ ಕೇಳಿದರೆ ನಾವೇನು ವಿಚಾರಗಳನ್ನು ಎತ್ತುತ್ತೇವೆ ಅದಕ್ಕೆ ಉತ್ತರ ಕೊಟ್ಟರೆ, ಅದರ ಬಗ್ಗೆ ಕ್ರಮ ತೆಗೆದುಕೊಂಡರೆ ನಾವು ವಿರೋಧ ಪಕ್ಷದವರು ಇನ್ನೂ ಧನ್ಯರಾಗುತ್ತೇವೆ. ಈ ನಕಲಿ ಛಾಪಾ ಕಾಗದದ ಹಗರಣ ಇಡೀ ದೇಶದಲ್ಲಿ ಬಹುಶ: ಸ್ವಾತಂತ್ರ್ಯದ ನಂತರ ಇಷ್ಟೊಂದು ಬೃಹದಾಕಾರವಾಗಿ ದೇಶದ ಅರ್ಥ ವ್ಯವಸ್ಥೆಯನ್ನೇ ಬುಡಮೇಲು ಮಾಡಿರತಕ್ಕಂಥ ಈ ಹೈಟೆಕ್ ರಾಬರಿ ಬಹುಶ: ಮತ್ತೊಂದು ಇಲ್ಲವೆಂದು ನಾನು ಅಂದುಕೊಳ್ಳುತ್ತೇನೆ. ಇದು ನನಗೆ ಅನ್ನಿಸುತ್ತದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟಂತಹ ಪ್ರಜಾತಂತ್ರ ವ್ಯವಸ್ಥೆಯನ್ನು ಏನು ಜಾರಿಗೆ ತಂದಂತಹ ಮಹಾ ನಾಯಕರಾದ ಗಾಂಧೀಜಿಯವರು ಇರಬಹುದು, ಡಾ: ಅಂಬೇಡ್ಕರ್ ಅವರು ಇರಬಹುದು, ಸಂವಿಧಾನವನ್ನು ಕೊಟ್ಟು ಪ್ರಜಾಪ್ರಭುತ್ವ ವ್ಯವಸ್ಥೆ ಹೇಗೆ ನಡೆಯಬೇಕು? ಪ್ರಜಾ ಪ್ರತಿನಿಧಿಗಳ ಕರ್ತವ್ಯ ಏನು? ಅಧಿಕಾರಿಗಳ ಕರ್ತವ್ಯ ಏನು? ನ್ಯಾಯಾಂಗದ ಕರ್ತವ್ಯ ಏನು? ಈ ಎಲ್ಲಾ ಜವಾಬ್ದಾರಿಯನ್ನು ಸಾರ್ವಜನಿಕ ಹಿತವನ್ನು ಹೇಗೆ ಕಾಪಾಡಬೇಕು ಎಂದು ಕನಸು ಕಂಡಿದ್ದರೋ ಬಹುಶ: ಅದನ್ನು ನಾವು ನುಚ್ಚುನೂರು ಮಾಡಿದ್ದೇವೆ. ನಿಜವಾಗಿಯೂ ಬಹಳ ದುಃಖಕರವಾದಂತಹ ಸಂಗತಿ. ಹಗರಣದ ಮೇಲೆ ಹಗರಣ. ನಾನು ಒಂದು ಪಕ್ಷವೆಂದು ಹೇಳುವುದಿಲ್ಲ. ಒಂದೊಂದು ಪಕ್ಷವೂ ಅಧಿಕಾರದಲ್ಲಿ ಇದ್ದಾಗ, ಒಂದೊಂದು ಹಗರಣ ಬಯಲಿಗೆ ಎಳೆಯಲಾಗಿದೆ. ನಾವೊಂದು ಕಾಲದಲ್ಲಿ 64 ಕೋಟಿ ರೂಪಾಯಿ ಬೋಫೋರ್ಸ್ ಹಗರಣ ಇಡೀ ದೇಶದ ಹಗರಣವೆಂದು ಹೇಳಿ ದೊಡ್ಡ ವಿಷಯ ಮಾಡಿ ಸರ್ಕಾರಗಳ ಬದಲಾವಣೆ ಆಯಿತು. ಅದಾದ ಮೇಲೆ ಮತ್ತೊಂದು ಸರ್ಕಾರದಲ್ಲಿ ಯೂರಿಯಾ ಹಗರಣ ಆಯಿತು. ಟೆಲಿಫೋನ್ ಹಗರಣ, ಅಲ್ಲ ಕಮ್ಯುನಿಕೇಶನ್ ಹಗರಣ. ಏನೇನೋ ದೊಡ್ಡ ದೊಡ್ಡ ಹಗರಣಗಳು ನೂರಾರು ಕೋಟಿಯದ್ದು ಆಯಿತು. ಆದರೆ ಈ ಹಗರಣ ಸುಮಾರು 30 ಕೋಟಿ ರೂಪಾಯಿ ಹಗರಣ ಎಂದು ಹೇಳಿ ನಮ್ಮ ಕೇಂದ್ರ ಸರ್ಕಾರದ ಆರ್ಥಿಕ ಇಲಾಖೆ ಸಚಿವಾಲಯ ಅಧಿಕೃತವಾಗಿ ಹೇಳಿದೆ. ಇವತ್ತು 30 ಸಾವಿರ ಕೋಟಿ ರೂ.ಗೂ ಹೆಚ್ಚು ರೀತಿಯಲ್ಲಿ ಧೋಕಾ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಎಂದು ಹೇಳಿದ್ದಾರಲ್ಲಾ, ಇದು ನಾವೆಲ್ಲರೂ

ತಲೆತಗ್ಗಿಸತಕ್ಕಂಥ ವಿಚಾರ ಮತ್ತು ಇದನ್ನು ಯಾರೇ ಪ್ರಮುಖ ಮುಖಂಡರುಗಳು ಇರಬಹುದು, ಅಥವಾ ಸರ್ಕಾರದವರು ಇರಬಹುದು. ಇದನ್ನು ತಪ್ಪಿಸಿಕೊಳ್ಳತಕ್ಕ ಪ್ರಯತ್ನವೇ ಆಗಲಿ, ಸಮರ್ಥನೆ ಮಾಡತಕ್ಕಂಥ ಪ್ರಯತ್ನವೇ ಆಗಲಿ, ಸಂರಕ್ಷಣೆ ಮಾಡತಕ್ಕಂಥ ಪ್ರಯತ್ನವೇ ಆಗಲಿ ಇದಕ್ಕಿಂತ ಹೀನಾಯವಾದಂತಹ ಕೃತ್ಯ, ಇದಕ್ಕಿಂತ ದೇಶದ್ರೋಹಿತನ ಮತ್ತೊಂದು ಇಲ್ಲ ಎಂದು ನಾನು ಅಂದುಕೊಳ್ಳುತ್ತೇನೆ. ಮತ್ತೆ ಒಬ್ಬರ ಮೇಲೆ ಇನ್ನೊಬ್ಬರು ಮಸಿ ಬಳಿಯತಕ್ಕಂಥದ್ದು. ತಾವು ಮಾಡಿರತಕ್ಕಂಥ ತಪ್ಪನ್ನು ಇನ್ನೊಬ್ಬರ ಮೇಲೆ ಹೊರಿಸತಕ್ಕಂಥದ್ದು, ಬೇರೆಯವರು ಮಾಡಿರತಕ್ಕಂಥ ಒಳ್ಳೆಯ ಕೆಲಸಕ್ಕೆ ತಾವೇ ಆ ಕ್ರೆಡಿಟ್ ತೆಗೆದುಕೊಳ್ಳತಕ್ಕದ್ದು ಇದೆಲ್ಲಾ ಬಹಳ ಅಮಾಯಕವಾದಂತಹ ಕೃತ್ಯ ಎಂದು ಹೇಳಿ ನಾನು ಅಂದು ಕೊಳ್ಳಬೇಕಾಗುತ್ತದೆ. ಇವತ್ತು ನಕಲಿ ಛಾಪಾ ಕಾಗದದ ಹಗರಣ ಬಯಲಿಗೆ ಬಂದಿದ್ದು ಬಹಳ ವರ್ಷಗಳ ಹಿಂದೆ. ನಾನು ಇಲ್ಲ ಎಂದು ಹೇಳುವುದಿಲ್ಲ. ನಾನೂ ಸಹ ಕಂದಾಯ ಮಂತ್ರಿಯಾಗಿ ಪ್ರಥಮ ಬಾರಿಗೆ ನನ್ನ ಗಮನಕ್ಕೆ 1998ನೇ ಇಸವಿಯಲ್ಲಿ ಆಗ ಸಣ್ಣ ಪ್ರಮಾಣದಲ್ಲಿ ನಡೆಯುತ್ತಿತ್ತು ಎಂದು ನಾನು ಅಂದುಕೊಂಡಿದ್ದೆ. ಶ್ರೀ ಡಿ.ಎಸ್. ಮಾದಪ್ಪನವರು ಪ್ರಶ್ನೆ ಕೇಳಿದಾಗ 1998ರಲ್ಲಿ ನಾನು ಉತ್ತರ ಕೊಟ್ಟಿದ್ದೆ. ನಾನು ಹೇಳಿದ್ದೆ. ಮಡಿಕೇರಿಯಲ್ಲಿ ಮಡಿಕೇರಿ ಲೀಗಲ್ ಪ್ರಾಕ್ಟೀಷ್‌ನರ್ಸ್ ಕೋಆಪರೇಟಿವ್ ಸೊಸೈಟಿ ಇವರ ಮುಖಾಂತರ ಒಂದು ನಕಲಿ ಛಾಪಾ ಕಾಗದಗಳ ಮಾರಾಟ ಸ್ವಲ್ಪ ಮಟ್ಟಿಗೆ ಚಾಲನೆಗೆ ಬಂದಿದೆ. ನೀವೇನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಪ್ರಶ್ನೆ ಕೇಳಿದ್ದರು. ನಾನು ಹೊಸದಾಗಿ ಮಂತ್ರಿಯಾಗಿದ್ದಾಗ ಆ ವಿಚಾರ ಬಂತು. ಆವಾಗ ನಾವು ಇದನ್ನು ಪತ್ತೆ ಹಚ್ಚುವುದಕ್ಕೋಸ್ಕರ ಸಿಓಡಿ ಎನ್‌ಕ್ವೈರಿಗೆ ಆದೇಶ ಮಾಡಿದ್ದೇವೆ. ಸಿ.ಓ.ಡಿ ಎನ್‌ಕ್ವೈರಿಗೆ ವರದಿ ಬಂದ ತಕ್ಷಣ ನಮ್ಮ ಸರ್ಕಾರ ಇದ್ದಾಗ ನಾವು ಅವರ ಮೇಲೆ ಛಾರ್ಜ್‌ಶೀಟ್ ಹಾಕತಕ್ಕ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕಂಥ ಎಲ್ಲಾ ಆದೇಶವನ್ನೂ ನಾನು ಮಾಡಿದೆ. ಅದಾದ ತಕ್ಷಣವೇ ಇದಕ್ಕೆ ಪರ್ಯಾಯವಾದಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು, ಇದು ಮೊದಲಿನಿಂದಲೂ ನಡೆಯುತ್ತಿದೆ ಎನ್ನತಕ್ಕ ವಿಚಾರ ಮಾಡಿದೆವು. ಛಾಪಾ ಕಾಗದಗಳು ನಕಲಿ ಛಾಪಾ ಕಾಗದ ಆಗುತ್ತಿರುವುದರಿಂದ ಛಾಪಾ ಕಾಗದಗಳನ್ನು ನಿಷೇಧ ಮಾಡಿ ಹೊಸ ವ್ಯವಸ್ಥೆಯನ್ನೇ ತರಬೇಕು ಎಂದು ಹೇಳಿ ನಾವು ಸ್ಟ್ಯಾಂಪ್ ಆಕ್ಟ್‌ಗೆ ತಿದ್ದುಪಡಿಯನ್ನು ತಂದೆವು. ದಿನಾಂಕ 18.8.1998 ರಲ್ಲಿ ನಾವು ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡಿದ್ದೇವೆ. ಮುಂದೆ ಅದರ ವಿಚಾರಕ್ಕೆ ಬರುತ್ತೇನೆ. ಅದಾದ ಮೇಲೆ ಎರಡು ವರ್ಷಗಳಲ್ಲಿ ನಮ್ಮ ಸರ್ಕಾರ ಎರಡೇ ತಿಂಗಳು ಇತ್ತು. 1999ರ ಅಕ್ಟೋಬರ್‌ನಲ್ಲಿ ಈ ಸರ್ಕಾರ ಅಸ್ತಿತ್ವಕ್ಕೆ ಬಂತು. 1999ರ ಅಕ್ಟೋಬರ್‌ನಲ್ಲಿ ಈ ಸರ್ಕಾರ ಅಸ್ತಿತ್ವಕ್ಕೆ ಬಂತು 1999ರ ಅಕ್ಟೋಬರ್‌ನಲ್ಲಿ ಸರ್ಕಾರ ರಾಜ್ಯಕ್ಕೆ ಬಂದ ಮೇಲೆ 2000 ಇಸವಿಯಲ್ಲಿ ಮೊದಲನೇ ಬಾರಿಗೆ the racket came to light on 19th August, 2000 after the Assistant Commissioner of police, Chickpet G.A. Bhava and other police officers received credible information about two persons carrying fake stamp papers.

1.00 ಪಿ.ಎಂ.

ಇದು 2000ನೇ ಇಸವಿಯಲ್ಲಿ ಬೃಹದಾಕಾರವಾಗಿ ತಲೆಯೆತ್ತಿದ ಸಂದರ್ಭ. ಇದನ್ನು ಓದಿದ ತಕ್ಷಣ ನಕಲಿ ಛಾಪಾ ಕಾಗದ ತಡೆಗಟ್ಟಬೇಕೆಂದು ನಾವು ಸಂಬಂಧಪಟ್ಟ ಕಾನೂನಿಗೆ ತಿದ್ದುಪಡಿ ತಂದ ನಂತರವೂ ಛಾಪಾ ಕಾಗದವನ್ನು ಇನ್ನೂ ಮಾರಾಟ ಮಾಡಲಾಗುತ್ತಿದೆಯೆಂಬ ಸುದ್ದಿ ಗೊತ್ತಾದ

ಬಳಿಕ ಈ ಕುರಿತು ಏನಾಗಿದೆ ಎಂಬ ಬಗ್ಗೆ 11ನೇ ವಿಧಾನಸಭೆಯ ಎರಡನೇ ಅಧಿವೇಶನದಲ್ಲಿ ದಿನಾಂಕ : 15.3.2000 ರಂದು ಸರ್ಕಾರಕ್ಕೆ ಒಂದು ಪ್ರಶ್ನೆ ಕೇಳಿದೆ. ಈ ಪ್ರಶ್ನೆ ಕೇಳಿ ಸುಮಾರು ನಾಲ್ಕು ವರ್ಷಗಳಾದವು. "ರಾಜ್ಯದಲ್ಲಿ ಸ್ಟ್ಯಾಂಪ್ ಆಕ್ಟ್‌ಗೆ ತಿದ್ದುಪಡಿ ತಂದ ನಂತರ ಛಾಪಾ ಕಾಗದ ಉಪಯೋಗಿಸಿ ದಸ್ತಾವೇಜುಗಳು ನೋಂದಣಿಯಾಗಿರುವ ಒಟ್ಟು ಸಂಖ್ಯೆ ಎಷ್ಟು? ಜಿಲ್ಲಾವಾರು ವಿವರಗಳನ್ನು ನೀಡುವುದು. ಛಾಪಾ ಕಾಗದ ಉಪಯೋಗಿಸದೆ ನೋಂದಣಿಯಾಗಿರುವ ದಸ್ತಾವೇಜುಗಳ ಸಂಖ್ಯೆ ಎಷ್ಟು? ಜಿಲ್ಲಾವಾರು ವಿವರಗಳನ್ನು ನೀಡುವುದು." ಇದಕ್ಕೆ ಸರ್ಕಾರದಿಂದ ಬಂದ ಉತ್ತರವೇನೆಂದರೆ, "ಛಾಪಾ ಕಾಗದ ಉಪಯೋಗಿಸಿ ಒಟ್ಟು 3.08.526 ದಸ್ತಾವೇಜುಗಳು ನೋಂದಣಿಯಗಿದ್ದು, ಛಾಪಾ ಕಾಗದ ಇಲ್ಲದೆ ಬಿಳಿ ಹಾಳೆ ಮೇಲೆ ನೋಂದಣಿಯಾಗಿರುವ ದಾಸ್ತಾವೇಜುಗಳ ಸಂಖ್ಯೆ 9,679" ಹಾಗೂ 2000ನೇ ಮಾರ್ಚಿ ತಿಂಗಳಿನಿಂದ ಎಷ್ಟೆಷ್ಟು ದಸ್ತಾವೇಜುಗಳು ನೋಂದಣಿಯಾಗಿವೆ ಎಂಬ ಬಗ್ಗೆ ಜಿಲ್ಲಾವಾರು ಮಾಹಿತಿ ನೀಡಿದ್ದಾರೆ. ಆದರೆ, ಬೆಂಗಳೂರು ನಗರದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಅಂದರೆ, 55,272 ದಸ್ತಾವೇಜುಗಳು ನೋಂದಣಿಯಾಗಿವೆ. ಇದರೊಂದಿಗೆ ಇತರ ಜಿಲ್ಲೆಗಳಲ್ಲಾಗಿರುವ ನೋಂದಣಿಯ ವಿವರಗಳೊಂದಿಗೆ ಪೂರಕ ಟಿಪ್ಪಣಿ ಸಹ ಕಳುಹಿಸಿಕೊಟ್ಟರು ಸರ್ಕಾರ ಇದರಲ್ಲಿ ಏನು ಉತ್ತರ ಒದಗಿಸಿದೆಯೆಂದರೆ, "ರಾಜ್ಯದಲ್ಲಿ ಕರ್ನಾಟಕ ಮುದ್ರಾಂಕ ಕಾಯ್ದೆ 1957 ರ ಕಲಂ 10(ಎ) ಗೆ ದಿನಾಂಕ 16.8.1999ರಂದು ತಿದ್ದುಪಡಿ ಮಾಡಿದ್ದು. ಛಾಪಾರಹಿತ ಕಾಗದದ ಮೇಲೆ ದಸ್ತಾವೇಜು ಬರೆದು ನೋಂದಣಿ ಮಾಡಿಕೊಳ್ಳುವ ಪದ್ಧತಿಯನ್ನು ಜಾರಿಗೆ ತಂದಿರುವುದರಿಂದ ರಾಜ್ಯದ ಎಲ್ಲಾ ಉಪ ನೋಂದಣಿ ಕಚೇರಿಗಳಲ್ಲಿ ಲಭ್ಯವಿರುತ್ತದೆ. ತಿದ್ದುಪಡಿ ಜಾರಿಗೆ ತಂದ ನಂತರ ಮುದ್ರಾಂಕರಹಿತ ಕಾಗದದ ಮೇಲೆ ಬರೆದುಕೊಟ್ಟ ದಸ್ತಾವೇಜುಗಳು ನೋಂದಣಿಯಾಗಿರುವ ಒಟ್ಟು ಮಾಹಿತಿಯನ್ನು ಎಲ್ಲಾ ಜಿಲ್ಲಾ ಕೇಂದ್ರಗಳಿಂದ ಕ್ರೋಢಿಕರಿಸಲಾಗಿದ್ದು, ರಾಜ್ಯದಲ್ಲಿ ಶೇಕಡ 3ರಿಂದ 4ರಷ್ಟು ನೋಂದಣಿಯಾಗಿರುತ್ತದೆ. ಸಾರ್ವಜನಿಕರು ಮಾತ್ರ ಈ ಸೌಲಭ್ಯ ಉಪಯೋಗಿಸಿಕೊಂಡಿರುವುದು ಕಂಡುಬಂದಿರುತ್ತದೆ. They adopted the new system in getting their property registered on a white paper. ಆದರೆ, ಬೆಂಗಳೂರು ನಗರದಲ್ಲಿ ಈ ಸೌಲಭ್ಯ ಸುಮಾರು ಶೇಕಡ 14ರಷ್ಟಿದೆ – ಸಾರ್ವಜನಿಕರು ಈ ಸೌಲಭ್ಯದತ್ತ ಗಮನಹರಿಸುವಲ್ಲಿ ವಿಶೇಷತೆ ಕಂಡುಬಂದಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ 55,000 ದಸ್ತಾವೇಜುಗಳ ಪೈಕಿ 8,400 ದಸ್ತಾವೇಜುಗಳಲ್ಲಿ ಛಾಪಾ ಕಾಗದಗಳನ್ನು ಉಪಯೋಗಿಸಿರುವುದಿಲ್ಲ. ತಿದ್ದುಪಡಿ ಜಾರಿಗೆ ಬಂದ ನಂತರ ರಾಜ್ಯದಲ್ಲಿ ಛಾಪಾ ಕಾಗದ ಉಪಯೋಗಿಸಿ ಮಾಡಿರುವ ನೋಂದಣಿ ಕ್ರಮಗಳ ಸಂಖ್ಯೆ 3,08,576 ಇದ್ದರೆ. ಛಾಪಾ ಕಾಗದ ಉಪಯೋಗಿಸದೆ ನೋಂದಣಿಯಾಗಿರುವ ಪ್ರಕರಣಗಳ ಸಂಖ್ಯೆ 9,679 ಇದು ರಾಜ್ಯದಲ್ಲಿ ಶೇಕಡ 3.14ರಷ್ಟಾಗಿದೆ. ಜನರು ಮಾತ್ರ ಈ ಸೌಲಭ್ಯ ಉಪಯೋಗಿಸಿಕೊಂಡಿದ್ದರೂ ಇದರಲ್ಲಿ ಒಳಗೊಂಡಿರುವ ಮೊತ್ತ 46 ಕೋಟಿ ರೂಪಾಯಿಗಳು. ಮುದ್ರಾಂಕ ಮಾರುಕಟ್ಟೆ ನೀಡಿದ ಕಮಿಷನ್ ಎರಡು ರೂಪಾಯಿಯಂತೆ ಲೆಕ್ಕ ಹಾಕಿದರೆ ರಾಜ್ಯದ ಬೊಕ್ಕಸಕ್ಕೆ ಇದರಿಂದ 62 ಲಕ್ಷ ರೂಪಾಯಿಗಳಷ್ಟು ಹಣ ಉಳಿತಾಯವಾಗಿರುವುದು ಕಂಡುಬಂದಿದೆ. ಕೆಲವು ಜಿಲ್ಲೆಗಳಲ್ಲಿ ಇನ್ನೂ ಈ ಸೌಲಭ್ಯವನ್ನು ಒಬ್ಬರೂ ಸಹ ಉಪಯೋಗಿಸಿಕೊಳ್ಳದಿದ್ದರೂ ಇದು ಜನಪ್ರಿಯತೆಯತ್ತ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ" ಎಂದು ಉತ್ತರ ಕೊಟ್ಟಿದ್ದಾರೆ. ಆನಂತರ, ಒಂದು ಕಡೆ ನಾನು ಓದಿರುವಂತೆ ಮಾನ್ಯ ಕಂದಾಯ ಮಂತ್ರಿಗಳಿಗೆ ಪತ್ರಿಕೆಗಳವರು

ಪ್ರಶ್ನೆ ಕೇಳಿದ್ದಾರೆ. "ಹಿಂದಿನ ಸರ್ಕಾರ ಛಾಪಾ ಕಾಗದ ಇಲ್ಲದೆ ರಿಜಿಸ್ಟ್ರೇಶನ್ ಮಾಡಿರುವ ವ್ಯವಸ್ಥೆ ಇದೆಯೆಲ್ಲಾ ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?" ಎಂದಾಗ "ಏನ್ರಿ, ಛಾಪಾ ಕಾಗದದ ಮೇಲೆ ಪ್ರಾಪರ್ಟಿ ರಿಜಿಸ್ಟರ್ ಆಗದಿದ್ದರೆ ಅದರಲ್ಲಿ ಕಿಮ್ಮತ್ತು ಏನು ಬರುತ್ತದೆ? ಛಾಪಾ ಕಾಗದಕ್ಕಿರುವ ಘನತೆ-ಗೌರವ, ಕಿಮ್ಮತ್ತು ಬ್ರಿಟಿಷರ ಕಾಲದಿಂದ ನೂರಾರು ವರ್ಷಗಳಿಂದಲೂ ನಡೆದುಕೊಂಡು ಬರುತ್ತಿದೆ" ಎನ್ನುವ ಪ್ರತಿಕ್ರಿಯೆ ಈಗಿನ ಸರ್ಕಾರದ ಮಂತ್ರಿಗಳಿಂದ ಬಂದಿದೆ. ಹಗರಣದ ಬಗ್ಗೆ ಈಗಿನ ಮಂತ್ರಿಗಳ ಗಮನಕ್ಕೆ 1999ರಲ್ಲಿ ಕೆಲವರು ತಂದಾಗ ಮೌನ ವ್ಯಕ್ತಪಡಿಸುವ ಮೂಲಕ ಇದರ ಬಗ್ಗೆ ಹೇಳುವುದಿಲ್ಲವೆಂದು ತಿಳಿಸಿದ್ದಾರೆ. ಚನ್ನರಾಯಪಟ್ಟಣದಲ್ಲಿ ಒಂದೆಡೆ ಉತ್ತರಿಸುತ್ತಾ "ನಮ್ಮ ಸರ್ಕಾರ ಈಗಾಗಲೇ ಛಾಪಾ ಕಾಗದರಹಿತ ಮುದ್ರಣ ವ್ಯವಸ್ಥೆ ಜಾರಿಗೆ ತಂದಿದ್ದು. ಅದನ್ನು ತೀವ್ರಗತಿಯಲ್ಲಿ ಮಾಡುತ್ತೇವೆ" ಎಂದು 2001ರಲ್ಲಿ ಹೇಳಿದ್ದಾರೆ, ಅದೇ ರೀತಿ ಈ ಹಗರಣ ಬೆಳಕಿಗೆ ಬಂದ ನಂತರ ಅಧಿಕಾರಿಗಳು ಹಾಗೂ ರಿಜಿಸ್ಟ್ರೇಶನ್ ಇಲಾಖೆಯನ್ನು ಕೆಲವು ಪತ್ರಿಕೆಗಳವರು ಸಂಪರ್ಕಿಸಿದ್ದು, ಈ ಹಿನ್ನೆಲೆಯಲ್ಲಿ ಒಂದು ಪತ್ರಿಕೆ ದಿನಾಂಕ 20.11.2001 ರಲ್ಲಿ ಒಂದು ವಿಶೇಷ ವರದಿ ಪ್ರಕಟಿಸಿದೆ. ದಿನಾಂಕ 20.11.2001 ರ ವರದಿಯಲ್ಲಿ ಪ್ರಕಟಿಸಿರುವಂತೆ "ನೀವು ಸ್ಟಾಂಪ್ ಪೇಪರ್ ಕೊಳ್ಳಲೇಬೇಕಾಗಿಲ್ಲ. ಆಸ್ತಿ ನೋಂದಣಿ ಸಂದರ್ಭದಲ್ಲಿ ನಕಲಿ ಸ್ಟಾಂಪ್ ಮಾರಾಟ ಜಾಲಕ್ಕೆ ಬಲಿಯಾಗದೆ ಇರುವುದು ಹೇಗೆ? ಹಾಗಿದ್ದರೆ, ನೀವು ಸ್ಟಾಂಪ್‌ಗಳನ್ನು ಕೊಳ್ಳಲೇಬೇಡಿ ಎನ್ನುವ ಉತ್ತರ ಬಂದರೆ ಖಂಡಿತಾ ಅದು ಜೋಕಲ್ಲ" ಇದು ಕನ್ನಡ ಪ್ರಭಾ ಪತ್ರಿಕೆಯಲ್ಲಿ ಪ್ರಕಟವಾಗಿರುವ ವಿಶೇಷ ವರದಿ ಈ ವರದಿಯನ್ನು ಪತ್ರಿಕೆಯವರು ರಾಜ್ಯಾದ್ಯಂತ ಪ್ರಕಟಿಸಿದ್ದಾರೆ. "ಹಾಗಿದ್ದರೆ, ನೀವು ಸ್ಟಾಂಪ್ ಕೊಳ್ಳಲೇಬೇಡಿ ಎನ್ನುವ ಉತ್ತರ ಬಂದರೆ ಖಂಡಿತಾ ಅದು ಜೋಕಲ್ಲ. ನಕಲಿ ಸ್ಟಾಂಪ್ ಜಾಲ ಚಲಾವಣೆಯಲ್ಲಿದೆ. ಸ್ಟಾಂಪ್ ಹಾಗೂ ಸ್ಟಾಂಪ್ ಕಾಗದಗಳನ್ನು ಕೊಳ್ಳದಿದ್ದರೆ ಮುಗಿಯಿತು. ನಕಲಿ ಸ್ಟಾಂಪ್ ಹಾವಳಿ ತಾನೇತಾನಾಗಿ ಕೊನೆಗೊಳ್ಳುತ್ತದೆ. ಸ್ಟಾಂಪ್‌ಗಳನ್ನು ಕೊಳ್ಳಬೇಡಿ ಹಾಗೂ ಬಳಸಬೇಡಿ ಎಂದ ಮಾತ್ರಕ್ಕೆ ನೋಂದಣಿ ಶುಲ್ಕದಿಂದ ವಿನಾಯಿತಿ ದೊರೆತಿದೆಯೆಂದು ಖಂಡಿತಾ ಅರ್ಥವಲ್ಲ. ಸ್ಟಾಂಪ್ ಬದಲಿಗೆ ಆ ಮೊತ್ತದ ಹಣವನ್ನು ಸರ್ಕಾರದ ಖಜಾನೆಯಲ್ಲಿ ಅಥವಾ ನಿಗದಿತ ಬ್ಯಾಂಕುಗಳಲ್ಲಿ ತುಂಬಿ ಆನಂತರ ಆ ರಸೀತಿಯನ್ನು ನೋಂದಣಿಯಗುವ ದಾಖಲೆಗಳಿಗೆ ಅಂಟಿಸಿದರಾಯಿತು. ನಕಲಿ ಸ್ಟಾಂಪ್ ಹಾವಳಿಯನ್ನು ಸದೆಬಡಿಯಬಹುದು. ಈ ತಿದ್ದುಪಡಿ ಪ್ರಕಾರ ಮಾಮೂಲಿ ಅಚ್ಚ ಬಿಳಿ ಹಾಳೆಯ ಮೇಲೆ ಬರೆದದ್ದು ನೋಂದಣಿಯಾಗಿ ದಾಖಲಾಗಬಲ್ಲದು. ನಕಲಿ ಸ್ಟಾಂಪ್ ಹಾವಳಿ ತಡೆಯಲು ಸರ್ಕಾರ ಸ್ಟಾಂಪ್ ಕಾಯ್ದೆಗೆ ತಿದ್ದುಪಡಿ ತಂದು ಈಗಾಗಲೇ ಎರಡು ವರ್ಷಗಳಾದವು. ಆದರೆ, ಹೊಸ ತಿದ್ದುಪಡಿಯ ಸೌಕರ್ಯವನ್ನು ಮಾತ್ರ ಜನರು ಬಳಸಲು ತಯಾರಾಗಿಲ್ಲ. ಏಕೆಂದರೆ, ಈ ಜನರ ಕಣ್ಮುಂದೆ ನೋಂದಣಿ ಪತ್ರ ಎಂದಾಕ್ಷಣ ತಲೆಗೆ ಬರುವುದು ಛಾಪಾ ಕಾಗದ ಹಾಗೂ ಅದರ ಮೇಲಿನ ನೋಡಿ ಬರಹ ಮಾತ್ರ ಹೊಸ ತಿದ್ದುಪಡಿಯನ್ವಯ ದಾಖಲೆ ತಯಾರಿಸಲು ಮುಂದಾಗಿರುವ ಜನರ ಪ್ರಮಾಣ ತೀರಾ ಕಡಿಮೆ...." ಈ ರೀತಿಯಾಗಿ ವರದಿಯಾಗಿರುತ್ತದೆ. ಮತ್ತೊಂದು ಕಡೆ ಒಂದು ಪಕ್ಷದ ಅಧ್ಯಕ್ಷರು ಹೇಳುತ್ತಾರೆ, "ಕಾಂಗ್ರೆಸ್ ಪಕ್ಷ ಮುಗಿಸಲು ಶೆಟ್ಟರ್ ಮನೆಯಲ್ಲಿ ಬಿಜೆಪಿ ಸಂಚು - ಪೂಜಾರಿ" ಎನ್ನುವ ಶೀರ್ಷಿಕೆಯಡಿ ವರದಿ ಪ್ರಕಟವಾಗಿದೆ. ಈಗಿನ ಮಂತ್ರಿಗಳು ಹೇಳಿರುವಂತೆ, "ಈ ಹಗರಣ, ನಾಸಿಕ್‌ನಲ್ಲಿ ಪ್ರಿಂಟ್ ಆಗುತ್ತದೆಯಲ್ಲಾ ಆ ನಾಸಿಕ್ ಪ್ರಿಂಟಿಂಗ್ ಪ್ರೆಸ್ ನಮ್ಮ ಸರ್ಕಾರದ ವಶದಲ್ಲಿರದೆ ಕೇಂದ್ರ ಸರ್ಕಾರದ ವಶದಲ್ಲಿದೆ. ನಿಮ್ಮ ಪಾತ್ರವೇನು?" ಎಂದು

ಇವರು ಆರೋಪ ಮಾಡಿದಾಗ, "ಕಾಂಗ್ರೆಸ್ ಪಕ್ಷವನ್ನು ಮುಗಿಸಲೇಬೇಕೆಂದು ಶೆಟ್ಟರ್ ಮನೆಯಲ್ಲಿ ಬಿಜೆಪಿ ಸಂಚು ಮಾಡುತ್ತಿದೆ" ಎಂದು ಅವರು ಇವರ ಮೇಲೆ ಪಂಚ್ ಮಾಡಿದ್ದಾರೆ. ಇವರೊಂದಿಗೆ ನಾನೂ ಸಹ ಸರ್ಕಾರಕ್ಕೆ ಹೇಳಿದ್ದೇನೆ. ಕಾಂಗ್ರೆಸ್ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ನಾನು ಅನೇಕ ಹೇಳಿಕೆಗಳನ್ನು ನೀಡಿದ್ದೇನೆ. "ಛಾಪಾ ಕಾಗದ ಹಗರಣ ಬೆಳೆಯಲು ಈ ಸರ್ಕಾರವೇ ಕಾರಣ" ಎಂದು ಹೇಳಿದ್ದು, ಅದಕ್ಕೆ ನಾನು ಸಮರ್ಥನೆಯನ್ನೂ ನೀಡುತ್ತೇನೆ. ಛಾಪಾ ಕಾಗದ ಹಗರಣಕ್ಕೆ ಈ ಸರ್ಕಾರವೇ ಕಾರಣವೆಂದು ನಾನು ಬಹಿರಂಗ ಹೇಳಿಕೆ ಕೊಟ್ಟಿದ್ದೇನೆ. ನಾನು ಹೇಳಿರುವ ಎಲ್ಲಾ ಹೇಳಿಕೆಗಳಿಗೂ ಸಮರ್ಥನೆ ಕೊಡುತ್ತೇನೆ. ನಾನು ಇದನ್ನು ಕಳೆದ 2–3 ವರ್ಷಗಳಿಂದ ಹೇಳುತ್ತಾ ಬಂದಿದ್ದೇನೆ.

ಶ್ರೀಮತಿ ನಫೀಸಾ ಫಜಲ್ : ಕೇಂದ್ರದ ಹಿಂದಿನ ಹಣಕಾಸು ಮಂತ್ರಿಗಳಿಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕಾಗದ ಬರೆದಿದ್ದರೂ ಆ ಬಗ್ಗೆ ಕ್ರಮ ಕೈಗೊಂಡಿಲ್ಲದಿರುವುದಕ್ಕೆ ನಾವೇನು ಮಾಡುವುದು?

ಶ್ರೀ ಬಿ. ಸೋಮಶೇಖರ್ : ನಾವೂ ಸಹ ಒಂದು ಸರ್ಕಾರ ನಡೆಸಿದ್ದು, ಕೆಲವು ತೀರ್ಮಾನಗಳನ್ನು ಕೈಗೊಂಡಿದ್ದೇವೆ ಕೇಂದ್ರ ಸರ್ಕಾರದಲ್ಲಿ ನಿಮ್ಮ ಸರ್ಕಾರ ಅಧಿಕಾರದಲ್ಲಿದ್ದರೆ, ರಾಜ್ಯದಲ್ಲಿ ಇವರ ಸರ್ಕಾರ ಅಧಿಕಾರದಲ್ಲಿದೆ. ನಾವೂ ಸಹ ಹಿಂದೆ ಸರ್ಕಾರ ರಚಿಸಿದ್ದೇವೆ. ನೀವಿಬ್ಬರೂ ಪರಸ್ಪರ ಆರೋಪ–ಪ್ರತ್ಯಾರೋಪ ಮಾಡುತ್ತಾ ಕುಳಿತುಕೊಂಡರೆ ನಾವು ಸುಮ್ಮನೆ ಕುಳಿತುಕೊಳ್ಳುವುದಿಲ್ಲ, ನಾವು ಇವರ ವಿಷಯವೇನಿದೆ, ಅದನ್ನೂ ಹೇಳುತ್ತೇವೆ, ಅವರ ವಿಷಯವೇನಿದೆ, ಅದನ್ನೂ ಹೇಳಬೇಕಾಗುತ್ತದೆ. ಅದು ನಮ್ಮ ಪಕ್ಷದ ಜವಾಬ್ದಾರಿ ಮತ್ತು ನಾವೇನು ಮಾಡಿದ್ದೇವೆಂಬುದನ್ನೂ ಸಹ ಹೇಳಬೇಕಾಗುತ್ತದೆ. ಆದುದರಿಂದ, ನಾವು ಹೇಳುವುದನ್ನು ದಯವಿಟ್ಟು ಕೇಳಿದರೆ ಒಳ್ಳೆಯದು. ಅದಾದಮೇಲೆ ಇನ್ನೊಂದು ಕಡೆ ಮಾಜಿ ಮುಖ್ಯಮಂತ್ರಿಯವರು ಛಾಪಾಕಾಗದಕ್ಕೆ ಪರ್ಯಾಯ ಬೇಕಿತ್ತು ಮೊಯ್ಲಿ ಛಾಪಾಕಾಗದದ ಬಳಕೆಯ ಬದಲು ಪರ್ಯಾಯ ಕ್ರಮಗಳ ಬಗ್ಗೆ ಕೇಂದ್ರ ಸರ್ಕಾರ ಮೊದಲೇ ಕ್ರಮ ಕೈಗೊಂಡಿದ್ದರೆ ನಕಲಿ ಛಾಪಾಕಾಗದದ ಹಗರಣವನ್ನು ತಡೆಯಬಹುದಿತ್ತು. ಎಂದು ಕಂದಾಯ ಸುಧಾರಣ ಆಯೋಗದ ಅಧ್ಯಕ್ಷರಾದ ಮಾಜಿ ಮುಖ್ಯಮಂತ್ರಿಗಳೂ ಆದ ಎಂ. ವೀರಪ್ಪಮೊಯ್ಲಿರವರು ಇಂದು ಅಭಿಪ್ರಾಯ ಪಟ್ಟರು. ಆಯವ್ಯಯ ವಿಶ್ಲೇಷಣೆ ಸಾಮರ್ಥ್ಯ ಹೆಚ್ಚಳ ಕುರಿತು ಪ್ರಾದೇಶಿಕ ಕಾರ್ಯಾಗಾರವನ್ನು ಉದ್ಘಾಟಿಸಿದ ಬಳಿಕ ಪತ್ರಕರ್ತರ ಜೊತೆ ಮಾತನಾಡಿದ ಅವರು ಈ ಬಗ್ಗೆ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಎರಡು ವರ್ಷಗಳ ಹಿಂದೆಯೇ ಬರೆದಿದ್ದ ಪತ್ರವನ್ನು ಕೇಂದ್ರ ಗಂಭೀರವಾಗಿ ತೆಗೆದುಕೊಳ್ಳಲಿಲ್ಲವೆಂದು ಆರೋಪಿಸಿದರು. ಅಂದರೆ He has defended the government and he has put the blame on the Central Government ಛಾಪಾಕಾಗದಗಳನ್ನು ರಾಜ್ಯ ಸರ್ಕಾರ ಮುದ್ರಿಸುವುದಿಲ್ಲ. ಅದರ ಹೊಣೆ ಏನಿದ್ದರೂ ಕೇಂದ್ರ ಸರ್ಕಾರದ್ದು ಇದರಿಂದ ಛಾಪಾ ಕಾಗದದ ಬಳಕೆಯ ಬದಲು ಪರ್ಯಾಯ ಕ್ರಮಗಳ ಬಗ್ಗೆ ಗಂಭೀರವಾಗಿ ಯೋಚಿಸದೆ ಕೇಂದ್ರ ತಪ್ಪು ಮಾಡಿತು ಎಂದರು. ಛಾಪಾಕಾಗದಗಳ ಬಳಕೆ ಅವ್ಯವಹಾರಕ್ಕೆ ದಾರಿ ಮಾಡಿಕೊಡುತ್ತಿದೆ, ಆದ್ದರಿಂದ ಕಪ್ಪು ಹಣ ಶೇಖರಣೆಗೊಳ್ಳುತ್ತಿದೆ, ಇದರಿಂದಾಗಿ ಛಾಪಾಕಾಗದದ ಬಳಕೆಯನ್ನು ನಿಷೇಧಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ತಮ್ಮ ಅಧ್ಯಕ್ಷತೆಯ ತೆರಿಗೆ ಸುಧಾರಣ ಆಯೋಗ 2001ರ ಫೆಬ್ರವರಿಯಲ್ಲೇ ಶಿಫಾರಸ್ಸು ಮಾಡಿತ್ತು ಎಂದು ಮೊಯ್ಲಿ ಹೇಳಿದರು. ಒಂದು

ಪಕ್ಷದ ಪ್ರಮುಖ ಮುಖಂಡರು ಮತ್ತು ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ವೀರಪ್ಪಮೊಯ್ಲಿಯವರು ಏನು ಹೇಳಿದ್ದಾರೆಂದರೆ, ಇದಕ್ಕೆ ಕೇಂದ್ರ ಸರ್ಕಾರ ಪರ್ಯಾಯ ವ್ಯವಸ್ಥೆಯನ್ನು ತರಬಹುದಾಗಿತ್ತು. ಅವರು ತಪ್ಪು ಮಾಡಿದ್ದಾರೆ, ನಮ್ಮ ಮುಖ್ಯಮಂತ್ರಿಗಳು ಎರಡು ವರ್ಷಗಳ ಹಿಂದೆಯೇ ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದರು, ಆದರೂ ಏನೂ ಕ್ರಮ ತೆಗೆದುಕೊಂಡಿಲ್ಲ, ಆದ್ದರಿಂದ ಅವರ ಮೇಲೆ ಒಂದು ಆರೋಪವನ್ನು ಮಾಡಿದ್ದಾರೆ–2001ನೇ ಇಸವಿಯಲ್ಲಿ ಛಾಪಾಕಾಗದದ ನಕಲಿ ಮಾರಾಟದ ಬಗ್ಗೆ ಚಿಕ್ಕಪೇಟೆಯಲ್ಲಿ ಸಿಕ್ಕಿಬಿದ್ದಾಗ ಆವೊತ್ತು ಕೇಸನ್ನು ದಾಖಲು ಮಾಡಿದರು. ಆಗ ಸಾಂಗ್ಲಿಯಾನರವರು ಪೋಲೀಸ್ ಕಮೀಷನರ್ ಆಗಿದ್ದರು ಒಂದು ತಂಡವನ್ನು ಕಳುಹಿಸಿ ಕರೀಮ್‌ಲಾಲನನ್ನು ಅಜ್ಮೇರ್‌ನಲ್ಲಿ ಅರೆಸ್ಟ್ ಮಾಡಿ ತಂದರು. ಕಂದಾಯ ಸಚಿವರಾದ ಶ್ರೀಕಂಠಯ್ಯನವರು ಒಂದು ಕಡೆ ಹೀಗೆ ಹೇಳುತ್ತಾರೆ. ಛಾಪಾಕಾಗದದ ಬಳಕೆ ನಿಷೇಧ ಶೀಘ್ರ ನಿರ್ಧಾರ. ಡಿಸೆಂಬರ್ 2001 ರಲ್ಲಿ ಹೇಳಿದ್ದು ನಕಲಿ ಛಾಪಾಕಾಗದದ ಹಗರಣದ ಹಿನ್ನೆಲೆಯಲ್ಲಿ ಛಾಪಾಕಾಗದದ ಬಳಕೆಯನ್ನು ನಿಷೇಧಿಸುವ ಬಗ್ಗೆ ಶೀಘ್ರದಲ್ಲೇ ತೀರ್ಮಾನಿಸಲಾಗುವುದೆಂದು ಕಂದಾಯ ಸಚಿವ ಶ್ರೀಕಂಠಯ್ಯ ಇಲ್ಲಿ ಹೇಳಿದರು. ಪತ್ರಕರ್ತರೊಂದಿಗೆ ಮಾತನಾಡಿದ ಅವರು ನೋಂದಣಿ ಶುಲ್ಕವನ್ನು ಪಡೆದು ಬಿಳಿ ಹಾಳೆಯ ಮೇಲೆ ಬರೆಯಿಸಿ ಠಸ್ಸೆ ಪದ್ಧತಿಯನ್ನು ಆರಂಭಿಸಲು ಪರಿಶೀಲಿಸಲಾಗುವುದು. ಆದರೆ ಹಳ್ಳಿಗಳಲ್ಲಿ ಛಾಪಾಕಾಗದದ ಮೇಲೆ ವ್ಯವಹಾರವಾಗಿದ್ದರೆ ಮಾತ್ರ ನಂಬುವ ಸ್ಥಿತಿ ಇದೆ. ಒಟ್ಟಾರೆ ಛಾಪಾಕಾಗದದ ಬಳಕೆಯನ್ನು ನಿಷೇಧಿಸುವ ಬಗ್ಗೆ ಶೀಘ್ರದಲ್ಲೇ ತೀರ್ಮಾನಿಸಲಾಗುವುದೆಂದು ಅವರು ತಿಳಿಸಿದರು. ಅಂದರೆ ಒಂದು ಕಡೆ 2001 ರಲ್ಲಿ ಪರಿಶೀಲಿಸಲಾಗುವುದೆಂದು ಹೇಳಿದ್ದಾರೆ. ಅವರೇ ಈಗಾಗಲೇ ಪರ್ಯಾಯ ವ್ಯವಸ್ಥೆಯ ಅಡಿಯಲ್ಲಿ ಇಷ್ಟೊಂದು ನೋಂದಾವಣೆಯಾಗಿದೆ. ಛಾಪಾಕಾಗದ ರಹಿತವಾಗಿ ನೋಂದಾವಣೆಯಾಗಿದೆ ಎಂದು ಅವರೇ 2000 ರ ಮಾರ್ಚ್‌ನಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ ಎಷ್ಟೊಂದು ದ್ವಂದ್ವ ಇದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಅದಾದಮೇಲೆ 2000ನೇ ಇಸವಿಯಲ್ಲಿ ಅವನನ್ನು ಪ್ರಥಮಬಾರಿಗೆ ಅರೆಸ್ಟ್ ಮಾಡಿದ ಮೇಲೆ ಪ್ರಕರಣ ಬಹಳ ಕಾವಾಯಿತು. ಇಲ್ಲಿಯವರೆಗೆ ಏನೇನು ನಡೆದಿದೆ ಎಂಬ ಬಗ್ಗೆ ನಾನು ಡೀಟೇಲ್ಸ್‌ಗೆ ಹೋಗುವುದಿಲ್ಲ. ಏಕೆಂದರೆ ವಿರೋಧ ಪಕ್ಷದವರು ಸಾಕಾದಷ್ಟನ್ನು ಹೇಳಿದ್ದಾರೆ. ವಿಜಯ ಕರ್ನಾಟಕ ಪತ್ರಿಕೆಯವರಂತೂ ಪ್ರತಿದಿನ ಒಂದೊಂದು ಪ್ರಶ್ನಾವಳಿಯನ್ನು ಹಾಕಿದ್ದಾರೆ. ಸಾರ್ವಜನಿಕವಾಗಿ ಅದನ್ನು ಸಂಪೂರ್ಣವಾಗಿ ತೊಳೆದುಹಾಕಿದ್ದಾರೆ. ಸಾಂಗ್ಲಿಯಾನರವರು ಅದರ ಬಗ್ಗೆ ವಿಚಾರಣೆ ಮಾಡಿ ವರದಿಯನ್ನು ಕೊಡುವಾಗ, ಈ ಪ್ರಕರಣ ಒಂದು ರಾಜ್ಯಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ಸರ್ಕ್ಯುಲೇಷನ್ ಆಗಿರುವುದರಿಂದ ಸಿಬಿಐ ವಿಚಾರಣೆ ಮಾಡಿಸುವುದು ಸೂಕ್ತವೆಂದು ಸರ್ಕಾರಕ್ಕೆ ವರದಿಯನ್ನು ಕೊಟ್ಟರು. ಆ ವರದಿಯಲ್ಲಿ ಕೆಲವು ಅಧಿಕಾರಿಗಳ ಹೆಸರನ್ನೂ ಹೇಳಿದ್ದಾರೆಂದು ನನಗೆ ತಿಳಿದುಬಂದಿದೆ. ಇಲ್ಲಿ ಬೇಲಿಯೇ ಎದ್ದು ಹೊಲವನ್ನು ಮೇಯ್ದಂತೆ ಆಗಿದೆ. ರಕ್ಷಣೆ ಇರಲು ಬೇಲಿ ಹಾಕಿದರೆ ಆ ಬೇಲಿಯೇ ಮೇಯ್ದದಂತೆ ಕಮಿಷನರುಗಳು, ಏಡಿಜಿಪಿಗಳು, ಎಸ್‌ಪಿಗಳು ಯಾರ್‍ಯಾರು ಈ ಕ್ರೈಮ್‌ನ್ನು ತಡೆಗಟ್ಟಬೇಕೆಂದು ಸರ್ಕಾರ ಜವಾಬ್ದಾರಿ ಕೊಡುತ್ತದೋ, ಅವರೇ ಕ್ರಿಮಿನಲ್ಸ್ ಜೊತೆಗೆ ಶಾಮೀಲಾಗಿ ನಡೆದರೆ ಹೇಗೆ ದೇಶ ಉಳಿಯುತ್ತದೆ ಎನ್ನುವಂಥದ್ದು? ಆ ವರದಿಯಲ್ಲಿ ಯಾವ್ಯಾವ ಅಧಿಕಾರಿಗಳ ಹೆಸರನ್ನು ಕೊಟ್ಟಿದ್ದರೋ, ನಮಗಂತೂ ಅದು ಗೊತ್ತಿರುವುದಿಲ್ಲ ಸರ್ಕಾರದಲ್ಲಿ ಅದು ಗೌಪ್ಯವಾಗಿ ಇರುತ್ತದೆ ಅದರ ಮೇಲೆ ಮುನ್ಸೂಚನೆಯಾಗಿಯಾದರೂ ಸರ್ಕಾರ ಆ ಅಧಿಕಾರಿಗಳ ಮೇಲೆ ಏನೇನು ಕ್ರಮ ತೆಗೆದುಕೊಂಡಿದೆ?

ಅವರ ಮೇಲೆ ವರದಿ ಇದೆಯೆಂದು, ಹೊಗಳಿ ಕೆಲಸಕ್ಕೆ ಬಾರದು , ನಾನ್ ಎಗ್ಸಕ್ಯೂಟೀವ್ ಜಾಗಕ್ಕಾದರೂ ಹಾಕಿದ್ದಾರೆಯೇ? ಇಲ್ಲ ನನಗೆ ಗೊತ್ತಿರುವ ಪ್ರಕಾರ ಅಂಥ ಅಧಿಕಾರಿಗಳನ್ನು ಆಯ ಕಟ್ಟಿನ ಜಾಗಕ್ಕೆ ಹಾಕಿ ಇಡೀ ರಾಜ್ಯದ ಪೊಲೀಸ್ ಇಲಾಖೆಯನ್ನು ನಿಯಂತ್ರಣ ಮಾಡತಕ್ಕ ಜಾಗದಲ್ಲಿ ಹಾಕಿ ಪೋಸ್ಟಿಂಗ್ಸ್ ಮಾಡತಕ್ಕ ಜಾಗದಲ್ಲಿ ಹಾಕಿ, ಈ ರೀತಿ ನಡೆದುಕೊಂಡಿರುವ ಔಚಿತ್ಯವೇನಿತ್ತು ಸರ್ಕಾರಕ್ಕೆ? ಇದರಿಂದ ಅನುಮಾನ ಬರುತ್ತದೋ ಇಲ್ಲವೋ ಎಂಬುದು ನನ್ನ ಪ್ರಶ್ನೆ? ಸಿಬಿಐ ವಿಚಾರಣೆ ಮಾಡಬೇಕೆಂದು ಪಬ್ಲಿಕ್ ಇಂಟ್ರೆಸ್ಟ್ ಲಿಟಿಗೇಷನ್ ಸಿಬಿಐ ಎನ್‌ಕ್ವೇಯರಿ ಮಾಡಬೇಕೆಂದು ಹಾಕಿದರು. ನಾವು ವಿಧಾನ ಸಭೆಯಲ್ಲಿ ಎರಡು ಮೂರು ಸಲ ಇದನ್ನು ಸಿಬಿಐ ವಿಚಾರಣೆಗೆ ವಹಿಸಬೇಕೆಂದು ಹೋರಾಟ ಮಾಡಿದೆವು, ಪ್ರತಿ ಸಂದರ್ಭದಲ್ಲೂ ಈ ಸರ್ಕಾರ ಇದನ್ನು ಸಿಬಿಐಗೆ ವಹಿಸುವ ಅಗತ್ಯವಿಲ್ಲ. ನಮ್ಮ ರಾಜ್ಯವೇ ಇದರ ವಿಚಾರಣೆಗೆ ಸಮರ್ಥವಾಗಿದೆ ಯಾರನ್ನು ಬಿಡುವುದಿಲ್ಲ ರಕ್ಷಣೆ ಮಾಡತಕ್ಕ ಪ್ರಶ್ನೆಯೇ ಇಲ್ಲವೆಂದು ಹೇಳಿಕೊಂಡು ಬಂದರು. ಕೊನೆಗೆ ಇದರ ಬಗ್ಗೆ ವಿಚಾರಣೆ ಮಂದಗತಿಯಿಂದ ನಡೆಯುತ್ತಿತ್ತು. ಇದರ ವಿಚಾರಣೆಗೆ ಸ್ಟ್ಯಾಂಪಿಟ್ ಎಂಬ ವಿಚಾರಣಾ ತಂಡವನ್ನು ರಚನೆ ಮಾಡಿದರು. ಆ ಸ್ಟ್ಯಾಂಪಿಟ್‌ನ ನೇತೃತ್ವವನ್ನು ವಹಿಸಿರುವವರು ಎಡಿಜಿಪಿ ಗ್ರೇಡ್‌ನ ಅಧಿಕಾರಿ. ಅವರು ಒಳ್ಳೆಯ ಅಧಿಕಾರಿ, ನಿಷ್ಪಕ್ಷಪಾತವಾಗಿ ವಿಚಾರಣೆ ಮಾಡುತ್ತಾರೆಂದು ನಾನು ಕೇಳಿದ್ದೇನೆ. ಆದರೆ ಅವರಿಗೆ ಸರಿಯಾದಂಥ ಸಹಕಾರ ಮತ್ತು ಸಲಕರಣೆಗಳನ್ನು ಕೊಡದಿದ್ದರೆ ಅವರು ಯಾವ ರೀತಿಯಾಗಿ ನಿರ್ವಹಣೆ ಮಾಡಬೇಕೆಂಬ ಬಗ್ಗೆ ನಮಗೆ ಅನುಮಾನ ಬರುತ್ತದೆ. ಅವರ ಬಗ್ಗೆ ನಾನು ಅನುಮಾನವನ್ನು ವ್ಯಕ್ತಮಾಡುತ್ತಿಲ್ಲ. ಆದರೆ ಅವರಿಗೆ ಬೇಕಂಥ ಸಿಬ್ಬಂದಿಯನ್ನು ಸರಿಯಾಗಿ ಕೊಟ್ಟಿಲ್ಲ, ಅವರ ಕೈಕೆಳಗಡೆ ಎಷ್ಟು ಜನ ಐಪಿಎಸ್ ಅಧಿಕಾರಿಗಳನ್ನು ನೇಮಕ ಮಾಡಿದ್ದೀರಿ? ಇವರೇ ಎಸ್‌ಪಿ ಮಟ್ಟದ ಅಧಿಕಾರಿಯನ್ನು ಅರೆಸ್ಟ್ ಮಾಡಲು ಆಗುತ್ತದೆಯೇ? ಪೊಲೀಸ್ ಇನ್ಸ್‌ಪೆಕ್ಟರ್ಸ್ ಮತ್ತು ಡಿವೈಎಸ್‌ಪಿಯವರು ಇದರಲ್ಲಿ ಐಪಿಎಸ್ ಅಧಿಕಾರಿಗಳು ಇನ್‌ವಾಲ್ವ್ ಆಗಿದ್ದರೆ ಅವರನ್ನು ಅರೆಸ್ಟ್ ಮಾಡಲು ಅಧಿಕಾರ ಇದೆಯೇ? ಅದರ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ಇದಕ್ಕೆ ಸರಿಯಾಗಿ ಸ್ಟೆನೋಗಳು ಇಲ್ಲ, ಸಲಕರಣೆಗಳನ್ನು ಕೊಟ್ಟಿಲ್ಲ. ಸಹಕಾರವನ್ನು ಕೊಟ್ಟಿಲ್ಲವೆಂದು ಒಂದು ವರದಿಯಲ್ಲಿ ಹೇಳಿದ್ದಾರೆ ಇಷ್ಟೆಲ್ಲಾ ಆದಮೇಲೆ ಇದು ಮಂದಗತಿಯಲ್ಲಿ ನಡೆಯುತ್ತಿತ್ತು ಅವರು ತಮ್ಮದೇ ಆದ ರೀತಿಯಲ್ಲಿ ವಿಚಾರಣೆಯನ್ನು ನಡೆಸುತ್ತಿದ್ದರು. ಒಂದು ಕಡೆ ಪಬ್ಲಿಕ್ ಇಂಟ್ರೆಸ್ಟ್ ಲಿಟಿಗೇಷನ್‌ನ್ನು ಹಾಕಿದ್ದಾರೆ, ಅಲಹಾಬಾದ್ ಹೈಕೋರ್ಟ್‌ನಲ್ಲಿ ಇದು ವಿಚಾರಣೆಗೆ ಬಂದಾಗ, ನಕಲಿ ಛಾಪಾಕಾಗದದ ವ್ಯವಹಾರ ಇಡೀ ದೇಶಾದ್ಯಂತ ಹಬ್ಬಿರುವುದರಿಂದ ಕೇಂದ್ರ ಸರ್ಕಾರ ಇದನ್ನು ಸಿಬಿಐ ವಿಚಾರಣೆಗೆ ವಹಿಸಬೇಕೆಂದು ನಿರ್ದೇಶನವನ್ನು ಕೊಟ್ಟಿತು. ಒಂದು ಹೈಕೋರ್ಟ್‌ನ ತೀರ್ಪು ಅದೊಂದು ರಾಜ್ಯಕ್ಕೆ ಸೀಮಿತವಾಗಿದೆಯೇ ಅಥವಾ ಇಡೀ ದೇಶಕ್ಕೇ ಸೀಮಿತವಾಗಿದೆಯೇ ಎಂಬ ಬಗ್ಗೆ ಅಲ್ಲಿಯ ಕಾನೂನು ಸಚಿವರು ಮತ್ತು ತಜ್ಞರು ಹೇಳಬೇಕು ಇಷ್ಟಾದಮೇಲೆ ಇವರು ತರಾತುರಿಯಲ್ಲಿ ಅಲಹಾಬಾದ್ ಹೈಕೋರ್ಟ್ ಆ ರೀತಿ ನಿರ್ದೇಶನ ಕೊಟ್ಟಿದ್ದರೂ, ಸ್ಟ್ಯಾಂಪಿಟ್ ವಿಚಾರಣೆ ಇನ್ನೂ ನಡೆಯುತ್ತಿರಬೇಕಾದರೆಯೇ ವಿಶೇಷ ಕೋರ್ಟ್‌ನ್ನು ರಚನೆ ಮಾಡಿ ತರಾತುರಿಯಲ್ಲಿ ಪೀಸ್‌ಮೀಲ್ ಆಗಿ ಅರ್ಧಂಬರ್ಧವಾಗಿ ಆರೋಪ ಪಟ್ಟಿಯನ್ನು ಮಾಡತಕ್ಕ ಅವಶ್ಯಕತೆಯಲ್ಲಿ ನಮಗೆ ಎಷ್ಟು ಅನುಮಾನ ಬರುತ್ತದೆ? ಮತ್ತು ಎಷ್ಟು ಆರೋಪ ಪಟ್ಟಿಯನ್ನು ತಯಾರು ಮಾಡಿದ್ದಾರೆ? ಕಾಂಪ್ರಹೆನ್‌ಸೀವ್ ಆಗಿ ಒಂದನ್ನೂ ಮಾಡಿಲ್ಲ ಒಂದೊಂದಾಗಿ ಮಾಡುತ್ತಿದ್ದಾರೆ. ಅಲಹಾಬಾದ್

ಹೈಕೋರ್ಟ್‌ನವರು ತೀರ್ಪನ್ನು ಕೊಟ್ಟ ನಂತರ ವಿಶೇಷ ನ್ಯಾಯಾಲಯವನ್ನು ತರಾತುರಿಯಲ್ಲಿ ರಚನೆ ಮಾಡತಕ್ಕ ಅಗತ್ಯವೇನಿತ್ತು? ನನ್ನ ಆರೋಪವೇನೆಂದರೆ, ನೀವು ಹೇಳಿಕೊಳ್ಳಲು ಪ್ರಯತ್ನ ಮಾಡಿದರಿ, ಈಗಾಗಲೇ ನಮ್ಮಲ್ಲಿ ವಿಚಾರಣೆಯ ಕೊನೆಯ ಹಂತದಲ್ಲಿದೆ, ಈಗಾಗಲೇ ನಾವು ವಿಶೇಷವಾದ ಕೋರ್ಟ್‌ನ್ನು ರಚನೆ ಮಾಡಿ ವಿಚಾರಣೆ ನಡೆಸುತ್ತಿದ್ದೇವೆ, ಆದ್ದರಿಂದ ಇದರ ಬಗ್ಗೆ ಸಿಬಿಐ ವಿಚಾರಣೆ ಬೇಕಾಗಿಲ್ಲವೆಂದು ಹೇಳುವ ಪ್ರಯತ್ನವನ್ನು ನೀವು ಮಾಡಿದ್ದೀರಿ. ಆ ದೃಷ್ಟಿಯಲ್ಲಿ ತರಾತುರಿಯಲ್ಲಿ ವಿಶೇಷ ನ್ಯಾಯಾಲಯವನ್ನು ರಚನೆ ಮಾಡಿದಿರಿ ಎಂಬುದು ನನ್ನ ಆರೋಪ. ಅದಾದಮೇಲೆ ಅವರು ಸುಪ್ರೀಂಕೋರ್ಟ್‌ಗೆ ಹೋಗಿದ್ದಾರೆ. ಸುಪ್ರೀಂ ಕೋರ್ಟ್‌ನಲ್ಲಿ ಅಲಹಾಬಾದ್ ಹೈಕೋರ್ಟ್‌ನ ತೀರ್ಪನ್ನು ಚಾಲೆಂಜ್ ಮಾಡದ ಹೊರತು ಆ ತೀರ್ಪು ಎಲ್ಲಾ ರಾಜ್ಯಕ್ಕೂ ಅನ್ವಯವಾಗಿರುತ್ತದೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬಹಳ ಗಂಭೀರವಾದಂತಹ ವಿಷಯಗಳನ್ನು ಈ ಸದನದ ಮುಂದೆ ಇಡಲಿಕ್ಕೆ ಪ್ರಯತ್ನ ಪಡುತ್ತಿದ್ದಾರೆ. ನನ್ನ ಅನುಮಾನವನ್ನು ಬಗೆಹರಿಸಿಕೊಳ್ಳಲಿಕ್ಕಾಗಿ ನಾನು ತಮಗೆ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ತಮ್ಮ ಭಾಷಣವನ್ನು interrupt ಮಾಡಬೇಕು, ಅನ್ನತಕ್ಕಂತ ಉದ್ದೇಶ ನನ್ನದಾಗಿಲ್ಲ. ಅಲಹಾಬಾದ್ ಹೈಕೋರ್ಟಿನ ತೀರ್ಪಿನ ಬಗ್ಗೆ ತಾವು ಈಗ ಹೇಳಿದಿರಿ. ಆದರೆ ಅದಕ್ಕೆ ತದ್ವಿರುದ್ಧವಾಗಿ ಮುಂಬೈ ಹೈಕೋರ್ಟ್‌ನವರು ಒಂದು ರೀತಿ ಹೇಳಿದ್ದಾರೆ. ಇದು ultimately supreme Court ನಲ್ಲಿ resolve ಆಗುತ್ತದೆಂದು ನಾವು ತಿಳಿದೆವು. ಸುಪ್ರೀಂ ಕೋರ್ಟ್‌ನವರು ಎಲ್ಲಾ ರಾಜ್ಯಗಳಿಗೂ ನೋಟೀಸ್ ಜಾರಿಮಾಡಿ 3–4 ವಾರಗಳ ಕಾಲ ಟೈಮ್ ಕೊಟ್ಟಿದ್ದಾರೆ. So, ಈಗ legal position ಏನು ಎಂಬುದರ ಬಗ್ಗೆ ಮಾನ್ಯ ಸದಸ್ಯರು ಬೆಳಕು ಚೆಲ್ಲಬೇಕೆಂದು ಕೋರುತ್ತೇನೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೆ, ಈ ವಿಚಾರ 2001ನೇ ನವೆಂಬರ್‌ನಲ್ಲಿ ಚರ್ಚೆಗೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಅನಿಸಿಕೆಯನ್ನು ವ್ಯಕ್ತ ಮಾಡಿದ್ದಾರೆ. ಅದು ಏನು ಎಂದರೆ,

"ನಕಲಿ ಛಾಪಾ ಕಾಗದ ಹಗರಣ, ಸಿಬಿಐಗೆ ಒಪ್ಪಿಸಲು ಪರಿಶೀಲನೆ: ಕೃಷ್ಣರವರು"

"ಬಹುಕೋಟಿ ನಕಲಿ ಛಾಪಾ ಕಾಗದ ಹಗರಣವನ್ನು ಸಿ.ಬಿ.ಐ ತನಿಖೆಗೆ ಒಪ್ಪಿಸುವ ಬಗ್ಗೆ ಪರಿಶೀಲಿಸಲಾಗುವುದು ಮತ್ತು ತಪ್ಪಿತಸ್ಥರು ಯಾರೇ ಇದ್ದರೂ ಅವರ ವಿರುದ್ಧ ನಿರ್ದಾಕ್ಷಿಣ್ಯವಾದ ಕ್ರಮವನ್ನು ಕೈಗೊಳ್ಳುತ್ತೇವೆ ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣರವರು ಹೇಳಿದ್ದಾರೆ. ಕೋಟ್ಯಾಂತರ ರೂಪಾಯಿಗಳ ನಕಲಿ ಛಾಪಾ ಕಾಗದ ಹಗರಣದಲ್ಲಿ ಮಂತ್ರಿಯೊಬ್ಬರ ಸಹೋದರರು ಪಾಲ್ಗೊಂಡಿರುವುದು ಸರ್ಕಾರಕ್ಕೆ ಇರಿಸು ಮುರುಸಿನ ಪ್ರಶ್ನೆಯಾಗಿದ್ದು, ವಿರೋಧ ಪಕ್ಷಗಳು ಆಡಳಿತ ಪಕ್ಷದ ವಿರುದ್ಧ ಧಾಳಿಗೆ ಅಸ್ತ್ರವಾಗಿ ಬಳಸುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಈ ಹೇಳಿಕೆ ನೀಡಿದ್ದಾರೆ. ಸೋಮವಾರ ವಿಧಾನ ಸೌಧದ ಮುಂಭಾಗ ನಡೆದ ರಾಷ್ಟ್ರೀಯ ಏಕತಾ ಸಪ್ತಾಹ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕೃಷ್ಣರವರು ಪ್ರಕರಣವನ್ನು ಸಿ.ಬಿ.ಐ.ಗೆ ಒಪ್ಪಿಸುವ ಸೂಚನೆಯನ್ನು ನೀಡಿದರು."

ಇದನ್ನು ನಾನು ಏಕೆ ಇಲ್ಲಿ ಪ್ರಸ್ತಾಪ ಮಾಡಿದೆ ಎಂಬುದನ್ನು ಹೇಳುತ್ತೇನೆ. I will come to that point, ಆ ಸಂದರ್ಭದಲ್ಲಿ ನಾವೇನು ಅಂದುಕೊಂಡಿದ್ದೆವು ಎಂದರೆ, He has got an open

mind on this issue, ಆದ್ದರಿಂದ ಇದನ್ನು ಸಿ.ಬಿ.ಐ.ಗೆ refer ಮಾಡಬಹುದು ಅನ್ನತಕ್ಕಂಥದ್ದು ನಮ್ಮ ಅನಿಸಿಕೆಯಗಿತ್ತು ಅದಾದ ಮೇಲೆ ಇವರ ನಿಲುವಿನಲ್ಲಿ ಬದಲಾವಣೆಯಾಯಿತು. ಇವರ ನಿಲುವಿನಲ್ಲಿ ಬದಲಾವಣೆಯಾದ ನಂತರ ಇವರು, 'ಇದನ್ನು ನಾವು ಸಿ.ಬಿ.ಐ.ಗೆ ವಹಿಸುವ ಪ್ರಶ್ನೆಯೇ ಇಲ್ಲ, ಅದರ ತನಿಖೆ ನಡೆಸಲು ನಾವೇ ಸಮರ್ಥವಾಗಿದ್ದೇವೆ, ಈಗಾಗಲೇ ಅದರ ವಿಚಾರಣೆಯ ಕೊನೆಯ ಹಂತದಲ್ಲಿ ನಾವಿದ್ದೇವೆ' ಎನ್ನುವಂತಹ ಮಾತನ್ನು Home Ministerರವರು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಲೇ ಬಂದರು. ಇದರ ಜೊತೆಗೆ ಸಿ.ಬಿ.ಐ ಮೇಲೆಯೇ aspersions ಮಾಡತಕ್ಕಂಥ ಒಂದು ಪ್ರಯತ್ನ ಕೂಡ ನಡೆಯಿತು. ಮಾನ್ಯ ಪೂಜಾರಿಯವರು ಅದರ ಮೇಲೆ attack ಮಾಡಿದರು. ಸಿ.ಬಿ.ಐ ತನಿಖೆ ಮೇಲೆ ನಮಗೆ ಅನುಮಾನ ಇದೆ ಎಂದು ಇತರರೂ ಕೂಡ ಹೇಳಿದರು. ನಂತರ ತಾವು ಹೇಳಿದಂತೆ ಬಾಂಬೆ ಹೈಕೋರ್ಟ್‌ನಲ್ಲಿ ಈ ಬಗ್ಗೆ ವಿಚಾರಣೆ ನಡೆದಾಗ ರಿಟ್ ಅರ್ಜಿ ಅಂತಿಮ ಇತ್ಯರ್ಥವಾಗುವವರೆಗೆ ಕೆಲವು ದಿನಗಳವರೆಗೆ ತಾತ್ಕಾಲಿಕವಾಗಿ ಅಲ್ಲಿಯ ರಾಜ್ಯ ಸರ್ಕಾರ SIT ವಿಚಾರಣೆಗೆ ಡೆಯುವುದಕ್ಕೆ ಅವಕಾಶ ಇರಲಿ, ಇದರ ಬಗ್ಗೆ ನಂತರ ನಾವು ನಮ್ಮ ತೀರ್ಪು ಕೊಡುತ್ತೇವೆ ಎಂದು ಕೋರ್ಟ್ ಹೇಳಿತು. It was not a decision of the full court. It was an interim arrangement of the High Court. ನಾವು ಮುಂದೆ ಇದರ ಬಗ್ಗೆ ತೀರ್ಪು ಕೊಡುವವರೆಗೆ ಇದು ಸಧ್ಯಕ್ಕೆ ಮುಂದುವರೆಯಲಿ ಎನ್ನುವಂತಹ ಮಾತನ್ನು ಅವರು ಹೇಳಿದರು. ಸಂಪೂರ್ಣವಾಗಿ ರಾಜ್ಯದ ತನಿಖಾ ತಂಡವೇ ವಿಚಾರಣೆ ಮಾಡಲಿ ಎನ್ನುವಂತಹ ತೀರ್ಪನ್ನೇನೂ ಅವರು ಕೊಡಲಿಲ್ಲ. ಆದರೆ ಅಲಹಾಬಾದ್ ಹೈಕೋರ್ಟ್‌ನವರು ಅಂತಿಮವಾಗಿ ಈ ಪ್ರಕರಣವನ್ನು ಸಂಪೂರ್ಣವಾಗಿ ಸಿ.ಬಿ.ಐ.ಗೆ ವಹಿಸಬೇಕೆಂಬ ನಿರ್ದೇಶನವನ್ನು ಕೊಟ್ಟಿದ್ದಾರೆ. ಎರಡೂ ತೀರ್ಪುಗಳನ್ನು ನಾವು ನೋಡಬೇಕಾಗುತ್ತದೆ. ಅವರ ತೀರ್ಪು ಯಾವ ಹಂತದ್ದು ಮತ್ತು ಅದು ಯಾವ ರೀತಿ ಇದೆ ಎಂಬುದನ್ನು ನೋಡಬೇಕಾಗುತ್ತದೆ. ಬಾಂಬೆ ಹೈಕೋರ್ಟಿನವರು ನೀಡಿರುವುದು ತೀರ್ಪಲ್ಲ, ಅದು ಕೇವಲ interim arrangement ಮಾತ್ರ ಆಗಿದೆ. ಆದರೆ ಅಲಹಾಬಾದ್ ಹೈಕೋರ್ಟ್‌ನವರು ಕೊಟ್ಟಿರುವುದು ನಿಜವಾದ ತೀರ್ಪು ಆಗಿದೆ. ನಿರಂತರವಾಗಿ ಉದ್ದಕ್ಕೂ ನಮ್ಮ ಮಾನ್ಯ ಗೃಹ ಮಂತ್ರಿಗಳು ಈ ಪ್ರಕರಣವನ್ನು ಬಿಲ್‌ಕುಲ್ ನಾವು ಸಿ.ಬಿ.ಐ.ಗೆ ವಹಿಸುವುದಿಲ್ಲ. ಈ ಪ್ರಕರಣದ ತನಿಖೆ ನಡೆಸಲು ನಮ್ಮ ಸರ್ಕಾರವೇ ಸಮರ್ಥವಾಗಿದೆ ಎನ್ನತಕ್ಕಂಥ ಮಾತುಗಳನ್ನು ಹೇಳುತ್ತಲೇ ಬಂದರು. ಕರೀಂಲಾಲ್‌ನನ್ನು ಅರೆಸ್ಟ್ ಮಾಡಿ ಪರಪ್ಪನ ಅಗ್ರಹಾರದ ಜೈಲ್‌ನಲ್ಲಿ ಇಟ್ಟ ಮೇಲೆ ಈ ಸರ್ಕಾರದ ಅಧಿಕಾರಿಗಳು ನಡೆದುಕೊಂಡಂತಹ ರೀತಿ ಬಗ್ಗೆ ಬಂದಿರತಕ್ಕಂಥ ಮಾಹಿತಿಗಳು ಎಲ್ಲರಿಗೂ ಗಾಬರಿ ಪಡಿಸತಕ್ಕಂಥ ರೀತಿಯಲ್ಲಿವೆ. ಇವತ್ತು ನಾನು ಏಕೆ ಕಾಂಗ್ರೆಸ್ಸಿನ ಪ್ರಮುಖವಾದಂತಹ ವ್ಯಕ್ತಿಗಳು ಇದರಲ್ಲಿ ಸೇರಿದ್ದಾರೆ ಎನ್ನುವಂತಹ ಆರೋಪವನ್ನು ಮಾಡಲಿಕ್ಕೆ ಇಚ್ಛೆ ಪಡುತ್ತಿದ್ದೇನೆ. ಎಂದರೆ, ಈ ಕರೀಂಲಾಲ್‌ನಿಗೆ Stamp Vendor ಆಗಿ licence ಸಿಕ್ಕಿದ್ದು ಯಾರ ಕಾಲದಲ್ಲಿ? ಮಹಾರಾಷ್ಟ್ರದಲ್ಲಿ ಇಂದಿನ ಕಾಂಗ್ರೆಸ್ಸಿನ ಮುಖ್ಯಮಂತ್ರಿಗಳು ಅಂದಿನ ಕಾಲದಲ್ಲಿ ರೆವಿನ್ಯೂ ಮಂತ್ರಿಗಳಾಗಿದ್ದಾಗ ಅವನಿಗೆ ಲೈಸೆನ್ಸ್ ಸಿಕ್ಕಿತ್ತು. ಅವರು ರೆವಿನ್ಯೂ ಮಂತ್ರಿಗಳಾಗಿದ್ದವರು, ನಂತರ ಮುಖ್ಯಮಂತ್ರಿಗಳಾದರು ನಂತರ ಕಾಂಗ್ರೆಸ್ ಸರ್ಕಾರ ಇಲ್ಲೂ ಅಧಿಕಾರಕ್ಕೆ ಬಂದಿತು. ಆತ ಲೈಸೆನ್ಸ್ ಪಡೆದುಕೊಂಡ ಮೇಲೆ ಈ ಹಗರಣಕ್ಕೆ ಚಾಲನೆ ಸಿಕ್ಕಿತು. Banks, HDFC, Housing Board, BDA, Corporations ಮುಂತಾದ ಕಡೆಗಳಲ್ಲಿ ಎಲ್ಲಿ ಹೆಚ್ಚು ಹೆಚ್ಚಾಗಿ

ಛಾಪಾ ಕಾಗದಗಳನ್ನು bulk purchase ಮಾಡಿ ಉಪಯೋಗಿಸುತ್ತಾರೋ ಅಂತಹ ಕಡೆಗಳಲ್ಲಿ ಈ ನಕಲಿ ಛಾಪಾ ಕಾಗದಗಳನ್ನು ಜಾಸ್ತಿ ಮಾರಾಟ ಮಾಡಲಾಗಿದೆ. ಯಾರೂ ಕೂಡ 10 ರೂ. ಅಥವಾ 20 ರೂ. ಮೌಲ್ಯದ ಬಗ್ಗೆ ಛಾಪಾ ಕಾಗದಗಳ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಅದಕ್ಕೆ ಪರ್ಯಾಯವಾಗಿ ಸಂಬಂಧಪಟ್ಟ ಕಾಯ್ದೆಗೆ ತಿದ್ದುಪಡಿ ತಂದು, bulk purchasers franking machine ಅಳವಡಿಸಿಕೊಳ್ಳಬೇಕೆಂದು ನಾವು ಮಾಡಿದ್ದೇವು. ಅದಕ್ಕಾಗಿ ಕಿಲ್‌ಬರ್ನ್ಸ್ ಎನ್ನುವ ಕಂಪೆನಿಯೊಂದಕ್ಕೆ ಲೈಸೆನ್ಸ್ ಕೊಡಬೇಕು ಎನ್ನುವಂತಹ ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೆವು. ಅಷ್ಟರಲ್ಲಿ ನಮ್ಮ ಸರ್ಕಾರದ ಅವಧಿ ಮುಗಿದು ನಮ್ಮ ಸರ್ಕಾರ ಅಧಿಕಾರ ಕಳೆದುಕೊಂಡಿತು. ನಾವು ತಿದ್ದುಪಡಿ ತಂದ ಮೇಲೆ franking machines ಗೆ ಅವಕಾಶ ಮಾಡಿಕೊಡುವುದಕ್ಕೆ ಈ ಸರ್ಕಾರ ಎಷ್ಟು ವರ್ಷಗಳನ್ನು ತೆಗೆದುಕೊಂಡಿತು? Franking Machines ಬಳಸಬೇಕು ಎನ್ನುವಂತಹ ತೀರ್ಮಾನ ಬಹಳ ಹಿಂದೆಯೇ ಜರಿಗೆ ಬಂದಿದ್ದರೆ bulk purchasers ಗಳ್ಯಾರು ನಕಲಿ ಛಾಪಾ ಕಾಗದಗಳನ್ನು ಪರ್ಚೇಸ್ ಮಾಡುತ್ತಿರಲಿಲ್ಲ. Franking Machine ಪದ್ಧತಿಯನ್ನು ಜಾರಿಗೆ ತರುವುದಕ್ಕಾಗಿ ಈ ಸರ್ಕಾರ ಬಹಳಷ್ಟು ವಿಷಯಗಳನ್ನು ತೆಗೆದುಕೊಂಡಿತು. ಈ ಮಧ್ಯದಲ್ಲಿ ಸರ್ಕಾರಕ್ಕೆ ಬಹಳಷ್ಟು ಲಾಸ್ ಆಯಿತು. ಈ ಪರ್ಯಾಯ ವ್ಯವಸ್ಥೆ ಜಾರಿಗೆ ಬಂದ ಮೇಲೆ Stamp Duty ಸಂಗ್ರಹದಲ್ಲಿ ಬಹಳಷ್ಟು ಹೆಚ್ಚಳವಾಗಿ ನಮ್ಮ ಆದಾಯ ಜಾಸ್ತಿಯಾಗಿದೆ, ಇವತ್ತು ಇದು ನಮ್ಮ ಎರಡನೇ ಅತಿ ದೊಡ್ಡ ಆದಾಯ ಸಂಗ್ರಹದ ಮೂಲವಾಗಿದೆ ಎಂದು ನಿಮ್ಮ ಮಂತ್ರಿಗಳು ಹೇಳಿಕೊಳ್ಳುತ್ತಿದ್ದಾರೆ. ಈ ಪದ್ಧತಿಯನ್ನು ನೀವ್ಯಾಕೆ 1999 ಅಥವಾ 2000 ರಿಂದ ಜಾರಿಗೆ ತರಲಿಲ್ಲ? ಫ್ರಾಂಕಿಂಗ್ ಮೆಶಿನ್ ಪದ್ಧತಿ ಬಿಟ್ಟು ಇವತ್ತು ಕರೀಂಲಾಲನ ಎಂಬ್ಯಾಸಿಂಗ್ ಮೆಶಿನ್ ಕರ್ನಾಟಕದಲ್ಲಿ ಮತ್ತು ಬೆಂಗಳೂರಿನಲ್ಲಿ ನಡೆಯಿತು. ಅವರಿಂದ ರಾಜ್ಯದಲ್ಲಿ ನಕಲಿ ಛಾಪಾ ಕಾಗದಗಳ ಎಂಬ್ಯಾಸಿಂಗ್ ನಡೆಯಿತು. ಸರ್ಕಾರ ಫ್ರಾಂಕಿಂಗ್ ಮೆಶಿನ ಪದ್ಧತಿ ಜಾರಿಗೆ ಬರುವುದು ತಪ್ಪಿ ಹೋಗಿ ಎಂಬ್ಯಾಸಿಂಗ್ ಮೆಶಿನ್ ಪದ್ಧತಿ ನಡೆಯಿತು. ಇದು ನನ್ನ ಆರೋಪವಾಗಿದೆ. ಇದಕ್ಕೆ ತಾವೇನು ಉತ್ತರವನ್ನು ಹೇಳುತ್ತೀರೋ ಅದನ್ನು ಹೇಳಿ ಕರೀಂಲಾಲ್‌ನಿಗೆ ಜೈಲಿನ ಸೆಲ್‌ನಲ್ಲಿ ಯಾವ ರೀತಿಯಾದಂತಹ ಟ್ರೀಟ್‌ಮೆಂಟ್ ಅನ್ನು ಕೊಡಲಾಯಿತು ಎಂಬ ಬಗ್ಗೆ ಅವರು ಹೇಳಿದ್ದಾರೆ. ನಾನು ಮತ್ತೊಮ್ಮೆ ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಕೆಲವು ಮಂತ್ರಿಗಳು ಕರೀಂಲಾಲ್‌ನನ್ನು ಜೈಲಿನಲ್ಲಿ ಭೇಟಿ ಮಾಡಿದ್ದಾರೆ ಎನ್ನತಕ್ಕಂಥ ಮಾತುಗಳು ಕೇಳಿಬರುತ್ತಿವೆ. ಯಾವ್ಯಾವ ಮಂತ್ರಿಗಳು ಅವನನ್ನು ಸೆಲ್‌ನಲ್ಲಿ ಕಾಂಟ್ಯಾಕ್ಟ್ ಮಾಡಿ ಭೇಟಿ ಮಾಡಿದ್ದಾರೆ ಅದನ್ನು ಬಹಿರಂಗ ಮಾಡಬೇಕು. ಸಾಂಗ್ಲಿಯಾನರವರು ಕೊಟ್ಟಂತಹ ವರದಿಯ ಆಧಾರದ ಮೇಲೆ Jail Superintendent ರವರವನ್ನು ಅರೆಸ್ಟ್ ಮಾಡಲಾಯಿತು. ಅವರು ವರದಿ ಕೊಟ್ಟಿದ್ದು ಯಾವಾಗ? ಆದರೆ ಇವರನ್ನು ಅರೆಸ್ಟ್ ಮಾಡಿದ್ದು ಯಾವಾಗ? ಇಷ್ಟು ವರ್ಷಗಳ ಕಾಲ ಅವರನ್ನು ಅರೆಸ್ಟ್ ಮಾಡಲು ನೀವು ಏಕೆ ಹಿಂದೆ-ಮುಂದೆ ನೋಡುತ್ತಿದ್ದೀರಿ? ಇದು ಅನುಮಾನಕ್ಕೆ ಎಡೆ ಮಾಡಿಕೊಡುತ್ತಿದೆ. February 2002ರಲ್ಲಿ ಪಾಲಿಗ್ರಾಫ್ ಎಗ್ಸಾಮಿನೇಷನ್ ಮಾಡಿದಾಗ ಅವನಿಗೆ "Do you know the names of important politicians and police with whom Karim Lala had regular contact?" ಎಂಬ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಅವನು "Home Minister earlier to Roshan Baig and Roshan Baig used to visit him often at Hotel Airlines, Harsha,

Oberoi, etc. At the Centre Ramdass, Ram Jethmalani used to contact and visit Karim lala frequently" ಅಂತ ಹೇಳಿದ್ದಾನೆ. ನನಗೆ ಗೊತ್ತಿದೆ. ಈ ಪಾಲಿಗ್ರಾಫ್ ಎಗ್ಸಾಮಿನೇಷನ್ ಇರಬಹುದು, ನಾರ್ಕೋ ಅನಾಲಿಸಿಸ್ ಟೆಸ್ಟ್ ಇರಬಹುದು, these things cannot be produced as an evidence before the Court, But these test reports will supplement to the enquiry. ಅನುಮಾನಕ್ಕೆ ಆಸ್ಪದ ಕೊಡದಂತೆ ಇದರಲ್ಲಿ ಯಾರ್ಯಾರು ಇನ್‌ವಾಲ್ವ್ ಆಗಿದ್ದಾರೆ ಎನ್ನುವುದರ ವಿವರಗಳನ್ನು ತಕ್ಷಣ ನಮಗೆ ತಾವು ಕೊಡಬೇಕು. ಮೊದಮೊದಲು ಇವರು ಅದರಲ್ಲಿ ಸೇರಿಯೇ ಇಲ್ಲ, ರೋಷನ್ ಬೇಗ್‌ಗೂ ಇದಕ್ಕೂ ಸಂಬಂಧವೇ ಇಲ್ಲವೆಂದು ಹೇಳಲಾಗುತ್ತಿತ್ತು. ಈಗ ಅವರ ಹೆಸರು ಬೆಳಕಿಗೆ ಬಂದಿದೆ. "Home Minister earlier to Roshan Baig" ಎಂದರೆ ಯಾರು? ಎಂದು ನಾವು ತಿಳಿದುಕೊಳ್ಳೋಣ. ಇದನ್ನು ನೀವು ನಮಗೆ ಹೇಳಬೇಕಾಗುತ್ತದೆ. ಸಾರ್ವಜನಿಕರಲ್ಲಿ ಅನುಮಾನವನ್ನು ಹುಟ್ಟು ಹಾಕಿ ನಾವು ಇಲ್ಲಿ ಕುಳಿತುಕೊಳ್ಳಬಾರದು. ನಿಮ್ಮ ಸರ್ಕಾರದಲ್ಲಿ ಪಾರದರ್ಶಕತೆ ಇದೆ, ಪಾರದರ್ಶಕದ ಕಾನೂನನ್ನು ನಿಮ್ಮ ಸರ್ಕಾರ ಜಾರಿಗೆ ತಂದಿದೆ. ನಮ್ಮದು ಪಾರದರ್ಶಕವಾದಂತಹ ಸರ್ಕಾರ, ನಮ್ಮದು ಮುಕ್ತವಾದಂತಹ ಸರ್ಕಾರ, ಏನನ್ನೂ ಮುಚ್ಚಿಟ್ಟುಕೊಳ್ಳುವುದಿಲ್ಲ. ಎನ್ನುವಂತಹ ಘೋಷಣೆಯನ್ನು ನೀವು ಮಾಡಿದ್ದೀರಿ. ಇದನ್ನು ಏಕೆ ನೀವು ಬಹಿರಂಗ ಪಡಿಸಬಾರದು? "Earlier to Roshan Baig, Home Minister" ಎಂದರೆ ಯಾರು? ಅವರ್ಯಾರು ಎಂದು ನಮಗೆ ಗೊತ್ತಿಲ್ಲ, ಅದನ್ನು ನೀವು ಹೇಳಬೇಕು. ಹಿಂದಿನ ಸರ್ಕಾರದಲ್ಲಿ ಇದ್ದವರೋ ಅಥವಾ ಅದರ ಹಿಂದಿನ ಸರ್ಕಾರದಲ್ಲಿ ಇದ್ದವರೋ ಎಂಬುದನ್ನೂ ಕೂಡ ತಾವು ಹೇಳಬೇಕಾಗುತ್ತದೆ. ಅದರ ಜೊತೆಗೆ ಈ ಪಾಲಿಗ್ರಾಫ್ ಟೆಸ್ಟ್ ಅಥವಾ ನಾರ್ಕೋ ಅನಾಲಿಸಿಸ್ ಟೆಸ್ಟ್ ಅನ್ನು ರಿಪೋರ್ಟ್ ಮಾಡಿದಂತಹ ಕ್ಯಾಸೆಟ್‌ಗಳೇನಿವೆಯೋ, ಅವುಗಳನ್ನು ಇವತ್ತು ಬಹಿರಂಗ ಪಡಿಸಬೇಕು.

1.30 ಪಿ.ಎಂ

ಸಿಬಿಐ ಎನ್‌ಕ್ವೈರಿ ಬಿಲ್‌ಕುಲ್ ಮಾಡಿಸುವುದಿಲ್ಲವೆಂದು ತಾವು ಹೇಳಿ, ಇವರು ಯಾವುದೇ ಹಗರಣದಲ್ಲಿ ಶಾಮೀಲಾಗಿಲ್ಲವೆಂದು ಹೇಳುತ್ತಾ ಬಂದಿರಿ, ನಮ್ಮ ರೋಷನ್ ಬೇಗ್‌ರವರು ಇದರಲ್ಲಿ ಭಾಗಿಯಾಗಿಲ್ಲವೆಂದು ಹೇಳುತ್ತಾ ಬಂದಿರಿ, ಇವತ್ತು ಯಾವ ಕಾರಣದಿಂದ ರಾಜೀನಾಮೆ ಕೊಟ್ಟರು. ಇದು ಬಹಳ ಅಸ್ಪಷ್ಟವಾಗಿದೆ. ಅವರು ರಾಜೀನಾಮೆಯನ್ನು ಕೊಟ್ಟಿರುವುದನ್ನು ನಾವು ಪೇಪರ್‌ನಲ್ಲಿ ನೋಡಿದ್ದೇವೆ. ಸಾಮಾನ್ಯವಾಗಿ ಸಂಪ್ರದಾಯ ಏನೆಂದರೆ, ನಾನೂ ಕೂಡ ಎರಡು–ಮೂರು ಸಾರಿ ರಾಜೀನಾಮೆ ಕೊಟ್ಟಿದ್ದೇನೆ. ಮಂತ್ರಿಗಳು ರಾಜೀನಾಮೆ ಕೊಟ್ಟಾಗ ತಕ್ಷಣ ಅಧಿವೇಶನ ಕರೆದರೆ ಅವರು ಸದನಕ್ಕೆ ಬಂದು ವೈಯಕ್ತಿಕವಾಗಿ ಸ್ಟೇಟ್‌ಮೆಂಟ್ ಮಾಡುವುದು ಸಂಪ್ರದಾಯ. ಅವರು ಯಾವುದಕ್ಕೋಸ್ಕರ ರಾಜೀನಾಮೆ ಕೊಟ್ಟರು ಎಂದು ಒಂದು ಸ್ಟೇಟ್‌ಮೆಂಟ್ ಕೊಡಬಹುದಾಗಿತ್ತು. ತಾವು ಹೋದ ಅಧಿವೇಶನದಲ್ಲಿ ಖಡಾಖಂಡಿತವಾಗಿ ಅವರು ಇದರಲ್ಲಿ ಸೇರಿಲ್ಲವೆಂದು ಹೇಳಿದಿರಿ. ಅವರ ರಾಜೀನಾಮೆ ತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಅಸೆಂಬ್ಲಿಯಲ್ಲಿ ಘೋಷಣೆ ಮಾಡಿದಿರಿ. ಗೃಹ ಸಚಿವರು ಹೇಳಿದರು, ಮುಖ್ಯಮಂತ್ರಿಗಳೂ ಹೇಳಿದರೂ, ಎಲ್ಲರೂ ಹೇಳಿದರು. ಅವರಿಗೆ ರಾಜೀನಾಮೆ ಕೇಳುವ ಪ್ರಶ್ನೆ ಇಲ್ಲ, ಅವರು ಇದರಲ್ಲಿ ಭಾಗಿಯಾಗಿಲ್ಲ ಎಂದು ನೀವು ಘೋಷಣೆ ಮಾಡಿದಿರಿ. ಅದಾದ ಮೇಲೆ ಈ ಅಧಿವೇಶನ ಪ್ರಾರಂಭವಾಗುವುದು ಮೂರು ದಿನ ಇತ್ತು,'.....

ಶ್ರೀಮತಿ ನಫೀಸ ಫಜಲ್ : ಅವರು ಏಕೆ ರಾಜೀನಾಮೆ ಕೊಟ್ಟರು ಎನ್ನುವುದು ನಮಗೆ ಗೊತ್ತು.

ಶ್ರೀ ಬಿ. ಸೋಮಶೇಖರ್ : ಮುಖ್ಯ ಮಂತ್ರಿಗಳು ಹೇಳಬೇಕು, ಇಲ್ಲ ಅವರು ಹೇಳಬೇಕು. ತಾವು ಏನು ಹೇಳುತ್ತೀರಿ.

ಶ್ರೀಮತಿ ನಫೀಸ ಫಜಲ್ : ತಾವು ಕೇಳುತ್ತಿದ್ದೀರಿ ಅದಕ್ಕೆ ನಾನು ಹೇಳುತ್ತಿದ್ದೇನೆ.

SRI B. SOMASHEKAR : The minister resigned has to give an explanation.

SMT. NAFEES FAZAL : As minister, even I can defend.

SRI B. SOMASHEKAR : No, you cannot speak on behalf of Roshan Baig. You should speak only on behalf of you.

ಶ್ರೀಮತಿ ನಫೀಸ ಫಜಲ್ : ಅವರು ಏಕೆ ರಾಜೀನಾಮೆ ಕೊಟ್ಟರು ಎಂದು ತಾವು ಕೇಳುತ್ತಿದ್ದೀರಿ. There is noting wrong if a minister resigns to strengthen the hands of the Chief Minister so that he can conduct a free and fair trial. There is no motive behind that. ಅದೆನ್ನೆಲ್ಲಾ ಪ್ರಶ್ನೆ ಮಾಡಿದರೆ ಹೇಗೆ?

ಶ್ರೀ ಬಿ. ಸೋಮಶೇಖರ್ : ಮೊನ್ನೆ ಮಹಾರಾಷ್ಟ್ರದಲ್ಲಿ ಉಪ ಮುಖ್ಯ ಮಂತ್ರಿಗಳು ರಾಜೀನಾಮೆ ಕೊಟ್ಟು ಒಂದು ಕಾರಣ ಹೇಳಿದರು. ಅದಕ್ಕೆ ಇಡೀ ದೇಶವೇ ನಕ್ಕಿತ್ತು. ಅವರಿಂದ ಇಡೀ ದೇಶವೇ ನಗೆಪಾಟಲಾಯಿತು. ರಾಜಕಾರಣಿಗಳು ಈ ಮಟ್ಟಕ್ಕೆ ಇಳಿದರೆ ಹೆಗೆ? ನಾವು ಸ್ವಲ್ಪವಾದರೂ ಆದರ್ಶವಾಗಿರಬೇಕಾಗುತ್ತದೆ. ಇವರು ಏಕೆ ರಾಜೀನಾಮೆ ಕೊಟ್ಟರು ಎಂಬುದು ಇಡೀ ದೇಶಕ್ಕೆ ಗೊತ್ತು. ಏನೋ ತಪ್ಪು ಮಾಡಿ, ಏನೋ ಮಾಡಿ, ಯಾವುದೋ ಒಂದು ದಾಂಧಲೆ ಮಾಡಿದರು ಅದಕ್ಕೋಸ್ಕರ ನಾನು ನೈತಿಕವಾಗಿ ರಾಜೀನಾಮೆ ಕೊಟ್ಟೆ ಎಂದು ಹೇಳುತ್ತಾರೆ.

ಶ್ರೀಮತಿ ನಫೀಸ ಫಜಲ್ : ಅವರು ಮಂತ್ರಿಯಾಗಿ ಅವರ ಪ್ರಭಾವವನ್ನು ಬಳಸುತ್ತಾರೆ. You cannot have a free and fair enquiry ಎಂದು ಆ ತರಹ ಹೇಳುತ್ತಾರೆ, ಆ ತರಹ ಮಾಡಿದರೆ ಈ ತರಹ ಹೇಳುತ್ತಾರೆ. ಅವರು ಏನು ಮಾಡಲಿಕ್ಕೆ ಸಾಧ್ಯ?

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೆ, ಇದು ಬಹಳ ಗಂಭೀರವಾದ ವಿಚಾರ. ಇದರ ಬಗ್ಗೆ ದಿನಗಟ್ಟಲೆ ಚರ್ಚೆ ನಡೆದಿದೆ. ನಾವು ಅಸಂಬದ್ಧವಾದ ಮಾತುಗಳನ್ನು ಮಾತನಾಡುತ್ತಿಲ್ಲ. ಅವರು ಅಧಿವೇಶನದಲ್ಲಿ ಹೇಳಿರತಕ್ಕಂಥದ್ದು ರೋಷನ್‌ಬೇಗ್ ಇದರಲ್ಲಿ ಭಾಗಿಯಾಗಿಲ್ಲವೆಂದು ಮೂರು ವರ್ಷಗಳಿಂದ ಹೇಳುತ್ತಿದ್ದೀರಿ. ಇವತ್ತು ಏನು ತೀರ್ಮಾನ ತೆಗೆದುಕೊಂಡರು ಅದನ್ನು ಮೂರು ವರ್ಷಗಳ ಹಿಂದೆಯೊ ತೆಗೆದು ಕೊಳ್ಳಬಹುದಾಗಿತ್ತು. ಇವರೇ ರಾಜೀನಾಮೆ ಹೇಳಬಹುದಾಗಿತ್ತು, ಇಲ್ಲ, ಅವರೇ ರಾಜೀನಾಮೆ ಕೊಡಬೇಕಾಗಿತ್ತು. ಅಷ್ಟೆಲ್ಲಾ ಬಿಟ್ಟು ಇವರೇ ರಾಜೀನಾಮೆ ಕೊಡಬೇಕಾದರೆ ಕಾರಣವೇನು, ಯಾವ ಕಾರಣದಿಂದ ರಾಜೀನಾಮೆ ಕೊಟ್ಟಿದ್ದಾರೆ ಎನ್ನುವುದನ್ನು ಮುಖ್ಯ ಮಂತ್ರಿಗಳು ಸ್ಪಷ್ಟ ಮಾಡಬೇಕು. ಇವತ್ತು ಎಷ್ಟು impropriety on the part of the Government ಎನ್ನುವುದಕ್ಕೆ ಹೋದ ಅಧಿವೇಶನದಲ್ಲಿ ನೀವು ಈ ರೀತಿ ಘೋಷಣೆ ಮಾಡಿ ಸದನದಲ್ಲಿ ಆಶ್ವಾಸನೆ ಕೊಟ್ಟು, ಈ ಸದನ ಸೇರುವುದಕ್ಕೆ ಮುಂಚಿತವಾಗಿ 26ಕ್ಕೆ ಕ್ಯಾಬಿನೆಟ್

ಡಿಸಿಷನ್ ಆಗಿದೆ, ಇವರು ರಾಜೀನಾಮೆ ಕೊಟ್ಟಿರುವುದು ನಾಲ್ಕನೇ ತಾರೀಖು ಅಸೆಂಬ್ಲಿ ಸೇರುತ್ತಿರುವುದು ಯಾವಾಗ ಐದನೇ ತಾರೀಖು ನಾಲ್ಕನೇ ತಾರೀಖು ರಾಜೀನಾಮೆ ಕೊಟ್ಟು ಹರಿಬರಿಯಲ್ಲಿ ಅಕ್ಸೆಪ್ಟ್ ಮಾಡಿಸಿ ಐದನೇ ತಾರೀಖು ಸಭೆ ಸೇರುತ್ತದೆ ಎಂದರೆ, ಇದು ಏನು ತೋರಿಸುತ್ತದೆ, ಎಂದರೆ, you wanted to avoid the embarrassment. So you might have asked for this resignation or hoodwink. ಮಾಡಿರಬಹುದು, ನನಗೆ ಗೊತ್ತಾದ ಪ್ರಕಾರ ಕ್ಯಾಬಿನೆಟ್‌ನಲ್ಲಿ ಚರ್ಚೆ ನಡೆದಾಗ ನಾನು ಒಬ್ಬನೇ ಇದರಲ್ಲಿ ಭಾಗಿಯಾಗಿಲ್ಲ, ಭೇಟಿಯಾಗಿಲ್ಲ, ಬೇರೆ ಇನ್ನು ಎರಡು ಮೂರು ಜನ ಮಂತ್ರಿಗಳು ಭೇಟಿಯಾಗಿದ್ದಾರೆ, ಅವರಿಗೂ ರಾಜೀನಾಮೆ ಕೊಡಿಸಿ ಎಂದು ಕೇಳಿದ್ದಾರೆಂದು ಕೇಳಿದ್ದೇನೆ. ಅವೆಲ್ಲಾ ಸುದ್ದಿಗಳು ಪತ್ರಿಕೆಗಳಲ್ಲಿ ಬಂದಿವೆ. ರೋಷನ್ ಬೇಗ್‌ರವರು ನಾನು ಒಬ್ಬನೇ ಏನೂ ತಪ್ಪು ಮಾಡಿಲ್ಲ, ಬೇರೆ ಮಂತ್ರಿಗಳೂ ಕೂಡ ಕರೀಂ ಲಾಲಾನನ್ನು ಭೇಟಿ ಮಾಡಿದ್ದಾರೆ. ಏಕೆ ಭೇಟಿ ಮಾಡಿದ್ದಾರೆ, ಮಗಳ ಮದುವೆಯ ಇನ್‌ವಿಟೇಷನ್ ಕೊಡುವುದಕ್ಕೆ ಭೇಟಿ ಮಾಡಿದ್ದಾರಾ? ಬೇರೇನಾದರೂ ಫಂಕ್ಷನ್‌ಗೆ ಕರೆಯುವುದಕ್ಕೆ ಭೇಟಿ ಮಾಡಿದ್ದಾರಾ? ಏಕೆ ಭೇಠಿ ಮಾಡಿದ್ದಾರೆಂದು ಹೇಳಬೇಕಾಗುತ್ತದೆ. ಇವರೊಬ್ಬರೇ ಏಕೆ ರಾಜೀನಾಮೆ ಕೊಟ್ಟರು, ನೈತಿಕವಾಗಿ ರಾಜೀನಾಮೆ ಕೊಟ್ಟಿದ್ದಾರೆ ಒಪ್ಪಿಕೊಳ್ಳೋಣ. ಒಬ್ಬ ರೆವಿನ್ಯೂ ಮಿನಿಸ್ಟರ್, ಸಂಬಂಧಪಟ್ಟ ಮಂತ್ರಿಗಳು, ಸ್ಟ್ಯಾಂಪ್ ಪೇಪರ್ ಅವರಿಗೆ ಸಂಬಂಧಪಟ್ಟಿರುವುದರಿಂದ ನೈತಿಕವಾಗಿ ರಾಜೀನಾಮೆ ಕೊಟ್ಟಿದ್ದರೆ ಒಪ್ಪಿಕೊಳ್ಳೋಣ. ಆದರೆ ಇವತ್ತು, ಒಬ್ಬ ಮಂತ್ರಿ, is it not a collective responsibility of the Government? ಒಬ್ಬ ಮಂತ್ರಿ ಇದನ್ನು ಒಪ್ಪಿಕೊಂಡ ಹಾಗೆ ಆಗಲಿಲ್ಲವಾ? ಒಬ್ಬ ಮಂತ್ರಿ ಒಪ್ಪಿಕೊಂಡ ಮೇಲೆ ಸರ್ಕಾರ ಒಪ್ಪಿಕೊಂಡ ಹಾಗೆ ಆಗಲಿಲ್ಲವಾ? ಇಲ್ಲವಾದರೆ ಬೇರೆ ಕಾರಣ ಏನಿದೆ? ಮಹಾರಾಷ್ಟ್ರದ ಉಪ ಮುಖ್ಯ ಮಂತ್ರಿಗಳು ಹೇಳಿದ ಹಾಗೆ ಅವರದೇ ಒಂದು ನೆಪ ಹೇಳಿದರು. ಇಲ್ಲಿ ಪಾರ್ಟಿ ವರ್ಕ್‌ಗೆ ಡಿಸ್‌ಪ್ಯಾಚ್ ಮಾಡಿದ ಹಾಗೆ; ಹಾಗಾದರೆ ನಿಮ್ಮ ಪಾರ್ಟಿ ಸಂಸ್ಕೃತಿ ಒಬ್ಬ ಟೈಂಟೆಡ್ ಮಿನಿಸ್ಟರ್‌ಗೆ ಪಾರ್ಟಿ ಜವಾಬ್ದಾರಿ ಕೊಡುವುದಾ? Is it the culture of your party ಅಥವಾ ದುಡ್ಡು ಖರ್ಚು ಮಾಡುವುದಕ್ಕೆ ಪಾರ್ಟಿಯವರು ಬೇಕಾಗುತ್ತದೆ ಎಂದು ಅವರಿಗೆ ಹಾಕಿದ್ದಾರೆಂದು ತಿಳಿದುಕೊಳ್ಳೋಣ. ಯಾವ ಪಾರ್ಟಿಗಳೂ ದುಡ್ಡು ಇಲ್ಲದೆ ನಡೆಸುವುದಕ್ಕಾಗುವುದಿಲ್ಲ. ಇದು ನನಗೆ ಚೆನ್ನಾಗಿ ಗೊತ್ತಿದೆ. ಇಲ್ಲದಿದ್ದರೆ ಅವರು ಅನ್‌ಫಿಟ್ ಆಗುತ್ತಾರೆ. ನಮ್ಮಂತಹವರು ಅನ್‌ಫಿಟ್ ಆಗುತ್ತಾರೆ. ಅಧ್ಯಕ್ಷರೂ ಆಗುವುದಿಲ್ಲ, ಏನೂ ಆಗುವುದಕ್ಕಾಗುವುದಿಲ್ಲ. ಇವತ್ತಿನ ಪ್ರೆಸೆಂಟ್ ಪೊಸಿಷನ್ ಪ್ರಕಾರ ಸರ್ಕಾರದ ಪಕ್ಷದಲ್ಲಿ ದುಡ್ಡು ಇರಲೇ ಬೇಕು. ದುಡ್ಡು ಇಲ್ಲವೆಂದು ಹಾಕಿದ ಮೇಲೆ ದುಡ್ಡು ಎಲ್ಲಿಂದ ಬಂದಿತು? ಅದನ್ನೂ ಹೇಳಬೇಕಾಗುತ್ತದೆ.ಮತ್ತು ನೀವು ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇನ್ನೊಂದು ಹೇಳುತ್ತೇನೆ, ಎಐಸಿಸಿ ಸೆಷನ್ ನಡೆಯಿತು. ಇದೆಲ್ಲಾ ಹಗರಣಗಳು ನಡೆಯುವಾಗ ಅಧಿವೇಶನ ನಡೆದಿದ್ದು ಪತ್ರಿಕೆಗಳಲ್ಲೆಲ್ಲಾ ಬಂದಿತು. 115 ವರ್ಷದ ಇತಿಹಾಸ ನಿಮ್ಮ ಪಕ್ಷಕ್ಕೆ ಇದೆ. ಅದು ನಡೆಯಬೇಕಾದರೆ ಅದಕ್ಕೆ ದುಡ್ಡು ಎಲ್ಲಿಂದ ಬಂದಿತು? ನಿಮ್ಮ ಅಕೌಂಟ್ ಎಲ್ಲವನ್ನೂ ತೋರಿಸಿದ್ದೀರಾ? 66 ಲಕ್ಷ ರೂಪಾಯಿ ಖರ್ಚಾಗಿದೆ ಎಂದು ಪತ್ರಿಕೆಯಲ್ಲಿ ಬಂದಿತ್ತು. ಮಹಾರಾಷ್ಟ್ರದ ಮುಖ್ಯ ಮಂತ್ರಿಗಳ ಸರ್ಕಾರ ಅಸ್ಥಿರವಾಗುತ್ತಿರುವ ಸಮಯದಲ್ಲಿ ಇಲ್ಲಿ ಬಂದು ಒಂದು ರಿಸಾರ್ಟ್ ಒಳಗೆ ಆತಿಥ್ಯ ನಡೆಯಿತು. ಅಲ್ಲಿಯ ಮಾನ್ಯ ಮಂತ್ರಿಗಳು ಹಾಗೂ ಎಮ್‌ಎಲ್‌ಎಗಳನ್ನು ನೋಡಿಕೊಳ್ಳುವುದಕ್ಕೆ 66 ಲಕ್ಷ ರೂಪಾಯಿ ಬಿಲ್ ಆಗಿದೆ. ಆ ಬಿಲ್ ಎಲ್ಲಿಗೆ

ಹೋಗಿದೆ, ಯಾರು ಕೊಟ್ಟರು? ಇದೆಲ್ಲಾ ಅನುಮಾನಾಸ್ಪದವಾಗಿದೆ. ನಿಮಗೆ ಆ ಹಣ ಎಲ್ಲಿಂದ ಬಂದಿತು ಎಂದು ಹೇಳಬೇಕಾಗುತ್ತದೆ. ಮುಖ್ಯ ಮಂತ್ರಿಗಳು ಅಧಿವೇಶನದ ಹಿಂದಿನ ದಿನ ರಾಜೀನಾಮೆ ತೆಗೆದುಕೊಂಡು ಅವರನ್ನು ಪಾಪ ಬಲಿಪಶು ಮಾಡಿದ್ದಾರೆ. ಅವರು ಸಂಬಂಧಪಟ್ಟ ಖಾತೆ ಮಂತ್ರಿಯೂ ಅಲ್ಲ, ನೀವು ಅವರು ಇದರಲ್ಲಿ ಭಾಗಿಯಾಗಿಲ್ಲವೆಂದು ಹೇಳುತ್ತಾ ಬಂದಿರಿ, ಅವರೂ ಕೂಡ ನಾನು ಒಬ್ಬನೇ ಅಲ್ಲ, ನಾಲ್ಕೈದು ಜನ ಮಂತ್ರಿಗಳು ಭೇಟಿ ಮಾಡಿದ್ದಾರೆ ಎಂದು ಹೇಳುತ್ತಾ ಬಂದಿದ್ದಾರೆ. ಅವರೆಲ್ಲರನ್ನೂ ಬಿಟ್ಟು ಇವರೊಬ್ಬರನ್ನು ಬಲಿಪಶು ಮಾಡಿದ್ದೀರಿ. ಇದಕ್ಕೆ ಯಾರು ಜವಾಬ್ದಾರರು? ಇನ್ನೊಂದು ಹಾಸ್ಯಸ್ಪದ ಬಹುಶಃ ಛಾಪಾ ಕಾಗದಗಳ ಮ್ಯಾನಿಫ್ಯಾಕ್ಚರಿಂಗ್ ಯೂನಿಟ್ ಫಾಲ್ಸ್ ಅಂಡರ್ ಸ್ಮಾಲ್ ಸ್ಕೇಲ್ ಇಂಡಸ್ಟ್ರಿಸ್ ಕೆಳಗೆ ಬರುತ್ತದೆ ಅಂತಾನಾ? I want to know whether he has taken the licence from the State Government, from the Minister for printing fake stamp paper in his unit? ಇವರು ಅದನ್ನು ಹೇಳಬೇಕಾಗುತ್ತದೆ. ಅದರಿಂದ ಅವರು ಏನಾದರೂ ನೈತಿಕವಾಗಿ ರಾಜೀನಾಮೆ ಕೊಟ್ಟರಾ? ಸಬ್ಸಿಡಿ ಕೊಟ್ಟಿದ್ದಾರೇನೋ ಅದೂ ಗೊತ್ತಿಲ್ಲ. Whether the Government's policy is to accord permission or subsidy even for printing fake stamp paper? ಅದನ್ನು ಹೇಳಬೇಕಾಗುತ್ತದೆ.

ಪ್ರೋ: ಬಿ.ಕೆ. ಚಂದ್ರಶೇಖರ್ : ಇದು ಹಾಸ್ಯನೂ ಅಲ್ಲ, ಬ್ಲ್ಯಾಕ್ ಹ್ಯೂಮರ್ ಅಲ್ಲ. ನೀವು ಚೆನ್ನಾಗಿ ನಿಮ್ಮ ವಿಚಾರ ಹೇಳುತ್ತಿದ್ದೀರಿ. ನಿಮ್ಮ ಮೂಗಿನ ನೇರಕ್ಕೆ ಏನು ಕಾಣುತ್ತದೆ ಅದನ್ನು ಹೇಳುತ್ತಿದ್ದೀರಿ ಇದೇನು ಇಂಡಸ್ಟ್ರೀ ಮಾಡುತ್ತಾರೆ, ಯೂನಿಟ್ ಮಾಡುತ್ತಾರೆ ಈ ವಿಚಾರದಲ್ಲಿ ತಾವು ಇಷ್ಟು ಲಘುವಾಗಿ ಮಾತನಾಡಬಾರದು. ಚೆನ್ನಾಗಿರುವುದಿಲ್ಲ.

ಶ್ರೀ ಬಿ. ಸೋಮಶೇಖರ್ : ಲಘುವಾಗಿ ಅಲ್ಲ, ನಾನು ಸೀರಿಯಸ್ಸಾಗಿ ಹೇಳುತ್ತಿದ್ದೇನೆ. ಮಾನ್ಯ ಸಭಾಧ್ಯಕ್ಷರೆ, The Home Minister should own the moral responsibility or the Revenue Minister should own the moral responsibility. ನಮ್ಮ ಸ್ನೇಹಿತರು ಮಲ್ಲಿಕಾರ್ಜುನ್‌ರವರು ಹೇಳಿದ ಹಾಗೆ ಸ್ಮಾಲ್ ಸ್ಕೇಲ್ ಯೂನಿಟ್‌ಗೆ ಪ್ರಿಂಟಿಂಗ್ ಮಾಡಲಿಕ್ಕೆ ಏನಾದರೂ ಲೈಸೆನ್ಸ್ ಕೊಟ್ಟಿದ್ದೀರಾ? ಅದರಲ್ಲಿ ಏನಾದರೂ ಗೊತ್ತಾಗಿ ರಾಜೀನಾಮೆ ಕೊಟ್ಟರಾ ಎಂದು ಗೊತ್ತಾಗಬೇಕು. ಇದು ಹಾಸ್ಯನೂ ಅಲ್ಲ ಬ್ಲ್ಯಾಕ್ ಹ್ಯೂಮರ್ ಅಲ್ಲ. ಇದು ಸೀರಿಯಸ್ ವಿಷಯ.

ಪ್ರೊ : ಬಿ.ಕೆ. ಚಂದ್ರಶೇಖರ್ : ಯಾವುದೋ ಫಂಕ್ಷನ್‌ಗೆ ಎಲ್ಲೋ ದುಡ್ಡು ಖರ್ಚಾದರೆ ಎಲ್ಲಿಂದ ಕೊಟ್ಟಿರಿ ಎಂದು ಹೇಳಿದರೆ ಏನಿದು?

ಶ್ರೀ ಬಿ. ಸೋಮಶೇಖರ್ : 50 ಕೋಟಿ ರೂಪಾಯಿ ಕಲೆಕ್ಷನ್ ಆಗಿದೆ, ಅದು ಎಲ್ಲಿಂದ ಬಂದಿತು ಎಂದು ಜನ ಕೇಳುತ್ತಾರೆ. ಇದನ್ನೆಲ್ಲಾ ನೀವು ಕ್ಲ್ಯಾರಿಫೈ ಮಾಡಬೇಕಾಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ನಾನು ಸೋಮಶೇಖರ್‌ರವರಿಗೆ ಉತ್ತರ ಹೇಳುತ್ತೇನೆ. Investment is small ಅದಕ್ಕೇ ಸ್ಮಾಲ್ ಸ್ಕೇಲ್ ಇಂಡಸ್ಟ್ರೀನಲ್ಲಿ ಬಂತು. but the return is very big.

ಶ್ರೀ ಬಿ. ಸೋಮಶೇಖರ್ : ಇಷ್ಟೆಲ್ಲಾ ಆದಮೇಲೂ ಕೂಡ ನೀವು ಮೊನ್ನೆ ಮೊನ್ನೆಯ ವರೆವಿಗೂ ನಾವು ಸಿ.ಬಿ.ಐ. ರೆಫರ್ ಮಾಡುವುದಿಲ್ಲ, ನಮ್ಮ ತಂಡವೇ ಬಹಳ ಸಮರ್ಥವಾಗಿದೆ ಎಂದು ಹೇಳುತ್ತಿದ್ದಿರಿ. ನೀವು ಜಸ್ವಂತ್‌ಸಿಂಗ್‌ರವರನ್ನು ದೆಹಲಿಯಲ್ಲಿ ಭೇಟಿ ಮಾಡಿದ್ದೀರಿ.

ಜಸ್ವಂತ್‌ಸಿಂಗ್‌ರವರು ಏನು ಹೇಳಿದ್ದಾರೆ? ನನಗೆ ಬಂದ ಮಾಹಿತಿ ಪ್ರಕಾರ ಜಸ್ವಂತ್‌ಸಿಂಗ್‌ರವರು ನಿಮಗೆ ಅಡ್ವೈಸ್ ಮಾಡಿದ್ದಾರೆ. Any way the central Government is approaching the supreme Court to seek the permission to refer it to CBI. If the supreme Court, on the decision of the Alahabad High Court takes the decision to refer it to CBI, then you cannot escape Then you will be forced to accept. ಆ ಒಂದು ಎಂಬ್ರಾಸ್‌ಮೆಂಟ್ ತಪ್ಪಿಸಿಕೊಳ್ಳುವುದಕ್ಕೋಸ್ಕರ ನೀವು ಅದನ್ನು ಒಪ್ಪಿಕೊಳ್ಳಬೇಕು ಎಂದು ಹೇಳಿ ಅಡ್ವೈಸ್ ಮಾಡಿರತಕ್ಕಂಥದ್ದು. ಇಲ್ಲದಿದ್ದರೆ ಬೇರೆ ದಾರಿಯೇ ಇಲ್ಲ. ಏಕೆಂದರೆ ಮಹಾರಾಷ್ಟ್ರದವರೂ ಕೂಡ ಹಿಂದೆ ಸಿ.ಬಿ.ಐ. ಗೆ ವಹಿಸತಕ್ಕಂಥ ಅವಶ್ಯಕತೆ ಇಲ್ಲವೆನ್ನುವ ನಿಲುವನ್ನು ತೆಗೆದುಕೊಂಡಿದ್ದರು. ಕಡೆಗೆ ಅವರೂ ಕೂಡ ಸಿ.ಬಿ.ಐ.ಗೆ ವಹಿಸುತ್ತೇವೆಂದು ಒಪ್ಪಿಕೊಂಡರು ಕೊನೆಗೆ ಉಳಿದುಕೊಂಡವರು ಕರ್ನಾಟಕದವರು ಮಾತ್ರ. ನಿಮಗೆ ಎಲ್ಲಿಂದಲೂ ಶಕ್ತಿಯೇ ಸಿಗಲಿಲ್ಲ, ಬೇರೆ ದಾರಿಯೇ ಇರಲಿಲ್ಲ. ನಾವು ಬೇರೆ ಇಲ್ಲಿ ಕೂಗಾಟ ಮಾಡುತ್ತಿದ್ದೆವು, ಜನಪ್ರತಿನಿಧಿಗಳಾದ ನಾವುಗಳು ಹೋರಾಟ ಮಾಡುತ್ತಿದ್ದೆವು. ಪತ್ರಿಕೆಗಳವರೆಲ್ಲಾ ಹರಾಜಾಕುತ್ತಿದ್ದಾರೆ ಎನ್ನುವಾಗ ಬೇರೆ ದಾರಿಯೇ ಇಲ್ಲವೆಂದು ಹೇಳಿ ಆ ಎಂಬ್ರಾಸ್‌ಮೆಂಟ್ ತಪ್ಪಿಸಿಕೊಳ್ಳುವುದಕ್ಕೋಸ್ಕರ ನೀವು ಅದನ್ನು ಸಿ.ಬಿ.ಐ.ಗೆ ವಹಿಸಿದಿರಿ. ನೀವು ಆ ರೀತಿಯಲ್ಲಿ ಸಿ.ಬಿ.ಐ.ಗೆ ವಹಿಸುವ ತೀರ್ಮಾನವನ್ನು 26ನೇ ತಾರೀಖು ಕ್ಯಾಬಿನೆಟ್‌ನಲ್ಲಿ ತೆಗೆದುಕೊಂಡ ಮೇಲೆ ಸಾಮಾನ್ಯವಾಗಿ ಅದೇ ದಿನ ಅಥವಾ ಮರುದಿನವೇ ಫ್ಯಾಕ್ಸ್ ಹೋಗಬೇಕಾಗಿತ್ತು. ಆದರೆ ಇದುವರೆಗೂ handing over this to CBI ಎಂದು ಫ್ಯಾಕ್ಸ್ ಹೋಗಿಲ್ಲವೆಂದರೆ ಇದರ ಉದ್ದೇಶವೇನು? ಕೆಲವು ಸಿ.ಬಿ.ಐ.ಗೆ ವಹಿಸುವ ಮುಂಚೆಯೇ ಕೆಲವು ಅಡ್ಜೆಸ್ಟ್‌ಮೆಂಟ್‌ಗಳನ್ನು ಮಾಡಿಕೊಳ್ಳೋಣವೆಂದೇ? ಅಥವಾ ರೆಕಾರ್ಡ್ ಸರಿಪಡಿಸಿಕೊಳ್ಳೋಣವೆಂದೇ ಅಥವಾ ಸ್ಟ್ಯಾಂಪಿಟ್‌ರವರು ಏನು ವರದಿ ಮಾಡಿದ್ದಾರೆ ಅದರಲ್ಲಿ ಏನಾದರೂ ಮ್ಯಾನಿಪುಲೇಷನ್ ಮಾಡಬೇಕು ಎಂದೆ? ಏನು ಅನುಮಾನ ಬಂತು ನಿಮಗೆ? ಏಕೆ ಇಷ್ಟು ವಿಳಂಬ ಮಾಡಿದಿರಿ? ಈಗಾಗಲೇ ಎಂಟತ್ತು ದಿನಗಳಾಗಿದೆ. ಆದುದರಿಂದ ಇವೆಲ್ಲವನ್ನೂ ನೋಡಿದರೆ ಪ್ರತಿಯೊಂದರಲ್ಲೂ ನಮಗೆ ಅನುಮಾನಾಸ್ಪದವಾಗಿದೆ. ನಾನು ಆಗಲೇ ಹೇಳಿದ ಹಾಗೆ ಈ ಸರ್ಕಾರ ಹೇಗೆಂದರೆ ಕೆಟ್ಟದ್ದು ಏನಾದರೂ ಆದರೆ ಅದನ್ನು ಬೇರೆಯವರ ಮೇಲೆ ಹಾಕುವುದು. ಈಗ ಆ ರೀತಿಯಲ್ಲಿಯೇ ಬಿ.ಜೆ.ಪಿ. ಮೇಲೆ ಹಾಕುತ್ತಿದ್ದಾರೆ, ಕೇಂದ್ರ ಸರ್ಕಾರದ ನಾಸಿಕ್ ಕಂಪನಿ ಮೇಲೆ ಆರೋಪ ಮಾಡುತ್ತಿದ್ದಾರೆ. ಆದರೆ ಒಳ್ಳೆಯದು ಏನಾದರೂ ಆಗಿದ್ದರೆ ನಾಚಿಕೆ ಇಲ್ಲದೇ, ಮಾನ ಮರ್ಯಾದೆ ಇಲ್ಲದೇ ಅದನ್ನು ನಾವು ಮಾಡಿದ್ದು ಎಂದು ಹೇಳುವುದು. ನೀವು ಹೇಳಿಕೊಳ್ಳಿ ನೀವು ಮಾಡಿದ್ದರೆ ಮಾಡಿದ್ದೇವೆ ಎಂದು ಹೇಳಿಕೊಳ್ಳಿ ಇವೊತ್ತು ನೀವು ಸ್ಟ್ಯಾಂಪ್‌ಗೆ ಪರ್ಯಾಯವಾದ ವ್ಯವಸ್ಥೆಯನ್ನು ಮಾಡಿದ್ದೇವೆ ಎನ್ನುವ ಉತ್ತರವನ್ನು ಕೊಟ್ಟಿದ್ದೀರಿ. 2000 ರ ಮಾರ್ಚ್‌ನಲ್ಲಿ ಇದಕ್ಕೆ ಒಪ್ಪಿಗೆ ಕೊಟ್ಟು ಈ ಪರ್ಯಾಯ ವ್ಯವಸ್ಥೆಯನ್ನು ಜಾರಿಗೆ ತಂದಿದ್ದೇವೆ. ಎನ್ನುವ ಉತ್ತರವನ್ನು ಕೊಟ್ಟಿದ್ದೀರಿ ನೀವು 01-04-2003 ರಲ್ಲಿ ನಾವು ಸ್ಟ್ಯಾಂಪ್ ಪೇಪರ್‌ಗಳನ್ನು ರದ್ದು ಮಾಡಿದ್ದೇವೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿಕೊಂಡಿದ್ದೀರಿ. ಮಾನ್ಯ ಖರ್ಗೆಯವರು ಹೇಳುತ್ತಾರೆ ನಾವು ಎಂಟು ಛಾರ್ಜ್‌ಶೀಟ್ ಫೈಲ್ ಮಾಡಿದ್ದೇವೆ. ಸ್ಟ್ಯಾಂಪಿಟ್ ವಿಚಾರಣೆ ನಡೆಯುತ್ತಿದೆ, ನಾವು ಛಾಪಾ ಕಾಗದಗಳನ್ನು ರದ್ದು ಮಾಡಿದ್ದೇವೆ. ನಾಚಿಕೆ ಏನಾದರೂ ಇದೆಯೇ? ಯಾವಾಗ ರದ್ದು ಮಾಡಿದ್ದು?

ಏಕೆಂದರೆ ನನಗೆ ಉತ್ತರ ಕೊಟ್ಟಾಗ ತಿದ್ದುಪಡಿಯಲ್ಲಿ ಆವಾಗಿನ ವ್ಯವಸ್ಥೆ ಏನಿತ್ತು? 01–04–2003 ರಲ್ಲಿ ಏನು ವ್ಯವಸ್ಥೆ ಮಾಡಿದ್ದೀರಿ ಅದನ್ನು ಹೇಳಿ? ಯಾವ ತಿದ್ದುಪಡಿ ತಂದಿದ್ದೀರಿ? What is the difference between our amendment and your decision of 1.4.2003? ಇದೇನು ನೀವು ನಮಗೆ ಮಕ್ಮಲ್ ಟೋಪಿ ಹಾಕುತ್ತಿದ್ದೀರಾ? ಹಳ್ಳಿಗಳಲ್ಲಿ ಹೇಳುತ್ತಾರೆ ಮಕ್ಮಲ್‌ಟೋಪಿ ಎಂದು. ಅಂದರೆ ಜನಗಳಿಗೆ ಮೋಸ ಮಾಡುವುದು ಎಂದರ್ಥ. ಇದು ನಕಲಿ. ನಕಲಿ ಆಗಿಬಿಟ್ಟಿದೆ ನಿಮ್ಮ ಸರ್ಕಾರ. ನಾವು ಮಾಡಿದ ಪ್ರತಿಗೆ ನೀವು ಸಹಿ ಮಾಡುವುದು. ಹೇಗಾಯಿತು ಇದು? ಬಹುಶಃ ನೀವು 2000ನೇ ಇಸವಿಗೂ ಹಿಂದೆಯೇ ಉಪ್ಪಾರಪೇಟೆಯಲ್ಲಿ ನೀವು ಅವನನ್ನು ಅರೆಸ್ಟ್ ಮಾಡಿಸಿ ಬಂದಾಗ ಆರ್.ಟಿ. ನಗರದಲ್ಲಿ ಫೇಕ್ ಸ್ಟ್ಯಾಂಪ್ ಪೇಪರ್ಸ್ ಮಾಡಿದಾಗ, ಆ ಎಂಬಾಸಿಂಗ್ ಮೆಶಿನ ಮಾಡಿದಾಗ ನಿಮ್ಮ ಕಣ್ಣಿಗೆ ಕಾಣಲಿಲ್ಲವೇ? ಬಿಳಿ ಹಳೆಯ ಮೇಲೆ ರಿಜಿಸ್ಟರ್ ಮಾಡಿಸುವ ವ್ಯವಸ್ಥೆ ಇದೆಯೆಂದು ಹೇಳಿ. Let us stop by indenting stamp paper from Nasik, Let us use only white papers. Why did you not adopt it in 1999? ಇವೊತ್ತು 1999ರಲ್ಲಿ ತಂದಂಥದ್ದನ್ನೇ ಇಟ್ಟು 2003 ರವರೆಗೂ ಎಲ್ಲವನ್ನೂ ಕೊಳ್ಳೆ ಹೊಡೆದುಕೊಂಡು ಹೋಗಲು ಬಿಟ್ಟು, ಎಂಬಾಸಿಂಗ್ ಮಾಡುವುದಕ್ಕೆ ಬಿಟ್ಟರಿ ನಕಲಿ ಛಾಪಾ ಕಾಗದಕ್ಕೆ ಮಂತ್ರಿಗಳು ಮೀಟ್ ಮಾಡಿದಿರಿ. ಇಲ್ಲಿ ಒಂದು ಕಡೆ ಹೇಳುತ್ತಾರೆ ನಾವು 01–04–2003ರಿಂದ ನಾವು ಸಂಪೂರ್ಣವಾಗಿ ಛಾಪಾ ಕಾಗದಗಳನ್ನು ನಿಲ್ಲಿಸಿಬಿಟ್ಟಿದ್ದೇವೆ ಎಂದು ಹೇಳುತ್ತಾರೆ.

ಅಧ್ಯಕ್ಷರು : ಮಾನ್ಯ ಸೋಮಶೇಖರ್‌ರವರೆ, ನಿಮಗೆ ಇನ್ನು ಇಷ್ಟು ಸಮಯ ಬೇಕು?

SRI. B. SOMASHEKHAR: I want to speak for some more time.ನಾನು ಬೇಕಾದರೆ ಊಟವಾದ ಮೇಲೆ ಮಾತನಾಡುತ್ತೇನೆ.

ಅಧ್ಯಕ್ಷರು : ಏಕೆಂದರೆ ಹಲವಾರು ಸದಸ್ಯರುಗಳು ಊಟಕ್ಕೆ ಹೋಗಬೇಕು ಎಂದು ಹೇಳುತ್ತಿದ್ದಾರೆ.

ಶ್ರೀ ಬಿ. ಸೋಮಶೇಖರ್ : ಅಧ್ಯಕ್ಷರೆ, ನಾನು ಊಟವಾದ ಮೇಲೆ ಮಾತನ್ನು ಮುಂದುವರಿಸುತ್ತೇನೆ.

ಅಧ್ಯಕ್ಷರು : ಆಯಿತು. ಇನ್ನೊಂದು ವಿಷಯ. ಇವೊತ್ತು ಸಂಜೆ 6.30 ಕ್ಕೆ ಮಾನ್ಯ ರಾಜ್ಯಪಾಲರು ರಾಜಭವನದಲ್ಲಿ ಚಹಾ ಕೂಟವನ್ನು ಏರ್ಪಡಿಸಿದ್ದಾರೆ. ತಮಗೆಲ್ಲರಿಗೂ ಆಹ್ವಾನ ಪತ್ರಿಕೆಯನ್ನು ವೈಯಕ್ತಿಕವಾಗಿ ಕೊಟ್ಟಿದ್ದಾರೆ. ತಾವುಗಳೆಲ್ಲರೂ ತಪ್ಪದೇ ಬರಬೇಕು. ಈಗ ಪ್ರಕಟಣೆ.

3) ಪ್ರಕಟಣೆ

ವಿಧಾನ ಸಭೆಯ ಕಾರ್ಯಕಲಾಪಗಳ ಸಮಿತಿಯ ನಿರ್ಣಯದ ಪ್ರಕಟಣೆ

ಸಭಾಧ್ಯಕ್ಷರು : ದಿನಾಂಕ 6ನೇ ಜನವರಿ, 2004 ರಂದು ನಡೆದ ವಿಧಾನಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ವಿದಾನಸಭೆಯ ಕಾರ್ಯಕಲಾಗಳನ್ನು ಈ ಕೆಳಕಂಡಂತೆ ನಡೆಸಲಾಗುವುದೆಂದು ತೀರ್ಮಾನಿಸಲಾಯಿತು.

1. ದಿನಾಂಕ 7ನೇ ಜನವರಿ, 2004 ರಿಂದ 14ನೇ ಜನವರಿ, 2004ರ ವರೆಗೆ ರಾಜ್ಯಾಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ ಹಾಗೂ ಸರ್ಕಾರಿ ಕಾರ್ಯಕಲಾಪಗಳು